ಸಂಪುಟ: 14 Volume | ಸಂಚಿಕೆ: 99 Issue | ಪುಟಗಳು 08 Pages | ಗುರುವಾರ 23 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಜಗತ್ತಿನಲ್ಲಿ ಹೇಳುವವರಿಗಿಂತ, ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.

–ಗಳಗನಾಥ



ಜಮೀರ್ ಅಹಮದ್ ಖಾನ್ ಅವರು ಬೆಂಗಳೂರು ಪದ್ಮನಾಭ ನಗರ ನಿವಾಸದಲ್ಲಿ ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರನ್ನು ಭೇಟಿ ಮಾಡಿ ಅರೋಗ್ಯ ವಿಚಾರಿಸಿದರು.

## ಎಂ.ಡಿ. ಕಚೇರಿಯ ಕಂಪ್ಯೂಟರ್ ಜಪ್ತಿ



**ಆಲಮಟ್ಟಿ:** ಕಾಲುವೆ ಮತ್ತೀತರ ಉದ್ದೇಶಕ್ಕಾಗಿ ರೈತ–ರಿಂದ ವಶಪಡಿಸಿಕೊಂಡ ಭೂಮಿಗೆ ನ್ಯಾಯಾಲಯ ನಿಗದಿಪಡಿಸಿದ ಹೆಚ್ಚುವರಿ ಪರಿಹಾರ ನೀಡದ ಕಾರಣ ಕೃಷ್ಣಾ ಭಾಗ್ಯ ಜಲ ನಿಗಮದ ಇಲ್ಲಿಯ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಜಪ್ತಿ ಮಾಡಲಾಯಿತು. ರೈತರಾದ ನಾನಾಗೌಡ ಪಾಟೀಲ ಅವರ 41,96,074 ರೂ, ದೇವೇಂದ್ರ ಬಸಣ್ಣ ತಳವಾರ ಅವರ 32,07,990 ರೂ, ಭೀಮನಗೌಡ ಬಸನಗೌಡ ಟಕ್ಕಳಕಿ ಅವರಿಗೆ 65,39,367 ರೂ ಪರಿಹಾರವನ್ನು ಇಂಡಿ ನಗರದ ಯುಕೆಪಿಯ ಭೂಸ್ವಾಧೀನಾಧಿಕಾರಿಗಳು ನೀಡಬೇಕಿತ್ತು. ಆದರೆ ಪರಿಹಾರ ನೀಡಲು ವಿಫಲರಾದ ಕಾರಣ ವಿಜಯಪುರದ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶದಂತೆ ಮಂಗಳವಾರ ಒಂದು ಕಂಪ್ಯೂಟರನ್ನು ಜಪ್ತಿ ಮಾಡಲಾಗಿದೆ.

## ಹಲ್ಲೆ ಖಂಡಿಸಿ ಪ್ರತಿಭಟನೆ..!



**ಬೆಂಗಳೂರು:** ಬಿಜೆಪಿಯವರು ದೆಹಲಿ ಹಾಗೂ ಬೆಂಗಳೂರು ನಗರದಲ್ಲಿ ಕಾಂಗ್ರೆಸ್ ಕಚೇರಿ ಹಾಗೂ ಪಕ್ಷದ ನಾಯಕರ ಮೇಲೆ ಹಲ್ಲೆ ಮಾಡಲು ಯತ್ನಿಸಿರುವುದನ್ನು ಖಂಡಿಸುತ್ತೇನೆ. ಮೊನ್ನೆ ಜಂತರ್ ಮಂತರ್ ನಲ್ಲಿ ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್ ಹಾಗೂ ಅಶ್ರುವಾಯು ದಾಳಿ ಮಾಡಿ, ಹೆಣ್ಣುಮಕ್ಕಳನ್ನು ಅಸಭ್ಯವಾಗಿ ಮುಟ್ಟಿ ಅಪಮಾನ ಮಾಡಲಾಗಿದ್ದು, 60ಕ್ಕೂ ಹೆಚ್ಚು ಯುವಕರು ಗಾಯಗೊಂಡಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಈ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ಬಿಜೆಪಿ ಸರ್ಕಾರ ಅವಕಾಶ ನೀಡಿಲ್ಲ. ಮಂಗಳವಾರ ಲೋಕಸಭೆ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ವಿದ್ಯಾರ್ಥಿಗಳ ಮೇಲಿನ ಹಲ್ಲೆ ಖಂಡಿಸಿ, ಪ್ರಧಾನಮಂತ್ರಿಗಳ ಮನೆ ಮುಂದೆ ಪ್ರತಿಭಟನೆ ಮಾಡಲು ಹೋಗುವಾಗ, ಅವರ ಮೇಲೆ ಪೊಲೀಸರಿಂದ ಹಲ್ಲೆ ಮಾಡಿಸಲಾಗಿದೆ. ಈ ಹಲ್ಲೆ ಖಂಡಿಸಿ ನಾವು ದೇಶದಾದ್ಯಂತ ಪ್ರತಿಭಟನೆ ಮಾಡುತ್ತಿದ್ದೇವೆ. ನಮ್ಮ ಕಾರ್ಯಕರ್ತರು ಶಾಂತಿಯುತ ಪ್ರತಿಭಟನೆ ಮಾಡುವಾಗ, ಅವರು ನಮ್ಮ ಕಚೇರಿ ಮುಂದೆ ದೌರ್ಜನ್ಯ ಎಸಗಲು ಮುಂದಾಗಿದ್ದರು. ಪ್ರಗ್ಯಾ ಠಾಕೂರ್, ಕರ್ನಲ್ ಪುರೋಹಿತ್ ಚೇಲಾಗಳಾದ ಇವರು ಯಾವ ಸಂದರ್ಭದಲ್ಲಿ ಏನು ಮಾಡುತ್ತಾರೆ ತಿಳಿಯುವುದಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅವರ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ ಎಂದರು.

## ಬೆಳೆ ವಿಮೆ ಜಾಗೃತಿಗೆ ಜಿಲ್ಲಾಧಿಕಾರಿ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯ ರೈತರಲ್ಲಿ ಬೆಳೆ ವಿಮೆ ಯೋಜನೆ ಕುರಿತು ವ್ಯಾಪಕ ಅರಿವು ಮೂಡಿಸಿ, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುವ ಉದ್ದೇಶದಿಂದ ಹಮ್ಮಿಕೊಳ್ಳಲಾದ ಬೆಳೆ ವಿಮೆ ಜಾಗೃತಿ ವಾಹನಗಳಿಗೆ ಜಿಲ್ಲಾಧಿಕಾರಿಗಳಾದ ಡಾ. ಆನಂದ್ ಕೆ. ಅವರು ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಜಿಲ್ಲಾದ್ಯಾಂತ ವ್ಯಾಪಕ ಜಾಗೃತಿ ಮೂಡಿಸುವ ಸಂಚಾರಿ ವಾಹನಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು, ಕೃಷಿಯು ಸಂಪೂರ್ಣವಾಗಿ ಪ್ರಕೃತಿಯನ್ನು ಅವಲಂಬಿಸಿರುವ ವೃತ್ತಿಯಾಗಿದ್ದು, ಅನಿರೀಕ್ಷಿತ ಮಳೆ, ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಗಾಳಿ, ಕೀಟ ಹಾಗೂ ರೋಗಬಾಧೆ ಸೇರಿದಂತೆ ವಿವಿಧ ಕಾರಣಗಳಿಂದ ಬೆಳೆ ಹಾನಿಯಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಇಂತಹ ಸಂದರ್ಭಗಳಲ್ಲಿ ರೈತರಿಗೆ ಆರ್ಥಿಕವಾಗಿ ಆಸರೆಯಾಗುವ ಪ್ರಮುಖ ಯೋಜನೆಯೇ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯ ಸರಕಾರ ಜಾರಿಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ. ಪುಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ವಿವಿಧ ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಬಹುದಾಗಿದೆ ಎಂದು ಅವರು ತಿಳಿಸಿದರು.



ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರೈತರ ಬೆಳೆ ನಷ್ಟವನ್ನು ಭಾಗಶಃ ಸರಿದೂಗಿಸಲು ನೆರವಾಗುತ್ತದೆ. ಆದ್ದರಿಂದ ಜಿಲ್ಲೆಯ ಪ್ರತಿಯೊಬ್ಬ ಅರ್ಹ ರೈತರೂ ಬೆಳೆ ವಿಮೆ ಮಾಡಿಸಿಕೊಳ್ಳುವ ಮೂಲಕ ತಮ್ಮ ಬೆಳೆಗಳಿಗೆ ಆರ್ಥಿಕ ಭದ್ರತೆ ಕಲ್ಪಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಯೋಜನೆಯಿಂದ ವಂಚಿತರಾಗಬಾರದು ಎಂದು ಅವರು ಹೇಳಿದರು.

## ಕಮಲಾಪುರದಲ್ಲಿ ರೈತರ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಕಮಲಾಪುರ

ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ರೈತ ಸಂಘ–ಹಸಿರು ಸೇನೆ ವತಿಯಿಂದ ಕಮಲಾಪುರ ಅಧ್ಯಕ್ಷ ಬಿ.ಎಂ. ಹುಲುಗಪ್ಪ ಅವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಕೃಷಿ, ನೀರಾವರಿ, ಬೆಳೆ ಪರಿಹಾರ, ಬೆಳೆ ವಿಮೆ ಸೇರಿದಂತೆ ರೈತರ ವಿವಿಧ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವಂತೆ ಒತ್ತಾಯಿಸಿ ರೈತರು ಹಾಗೂ ಸಾರ್ವಜನಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಸರ್ಕಾರ ರೈತರ ನ್ಯಾಯಸಮ್ಮತ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಆಗ್ರಹಿಸಿ, ಪ್ರತಿಭಟನೆಯ ಬಳಿಕ ಸಂಬಂಧಿಸಿದ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರೈತ ಸಂಘ ಹಸಿರು ಸೇನೆ ರಾಜ್ಯಾಧ್ಯಕ್ಷ ಶರಣಪ್ಪ ದೊಡ್ಮನಿ, ರಾಜ್ಯ ಕಾರ್ಯಾಧ್ಯಕ್ಷ ದೀಪಕ್ ಸಿಂಗ್, ಸಂಘದ ಪದಾಧಿಕಾರಿಗಳು, ರೈತ ಮುಖಂಡರು, ಮಹಿಳೆಯರು ಹಾಗೂ ನೂರಾರು ರೈತರು ಭಾಗವಹಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಸಂಘದ ಮುಖಂಡರು ಎಚ್ಚರಿಕೆ ನೀಡಿದರು.



# ಸಂಪುಟಕ್ಕೆ ಮತ್ತೆ ಬ್ರೇಕ್..!

## ವರಿಷ್ಠರಿಂದ ಧರಣಿ ಹಿನ್ನೆಲೆ | ರಾಜಕೀಯ ವಲಯಕ್ಕೂ ವಿದ್ಯಾರ್ಥಿಗಳ ಪ್ರತಿಭಟನೆಯ ಬಿಸಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕುತೂಹಲಕ್ಕೆ ಕಾರಣವಾಗಿದ್ದ ಸಚಿವ ಸಂಪುಟ ವಿಸ್ತರಣೆಗೆ ಮತ್ತೆ ಬ್ರೇಕ್ ಬಿದ್ದಿದೆ. ಸಂಸತ್ತಿನ ಅಧಿವೇಶನ, ವಿದ್ಯಾರ್ಥಿಗಳ ಪ್ರತಿಭಟನೆಯ ಹಿನ್ನೆಲೆಯಲ್ಲಿ, ಸಿಎಂ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್, ಖಾಲಿ ಕೈಯಲ್ಲಿ ಬೆಂಗಳೂರಿಗೆ ಹಿಂದಿರುಗಿದ್ದಾರೆ.

**ಎಲ್ಲ ಸಿದ್ಧತೆಯೂ ನಡೆದಿತ್ತು:** ರಾಜಭವನ ಗಾಜಿನ ಮನೆಯಲ್ಲಿ ಪ್ರಮಾಣವಚನದ ಕಾರ್ಯಕ್ರಮ ನಿಗದಿಯಾಗಿತ್ತು. ಶಾಮಿಯಾನ, ಪೀಠೋಪಕರಣ ಹಾಕಲು ಸೂಚನೆಯನ್ನೂ ನೀಡಲಾಗಿತ್ತು. ಆದರೆ, ದೆಹಲಿಯಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ನಿವಾಸದ ಮುಂದೆ, ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕರು ಧರಣಿ ಕೂರಲು ನಿರ್ಧರಿಸಿದ್ದರಿಂದ ಸಂಪುಟ ವಿಸ್ತರಣೆಯ ಚರ್ಚೆ ಮುಂದಕ್ಕೆ ಹೋಗಿದೆ.

**ಇಬ್ಬರಿಗೆ ಡಿಸಿಎಂ ಪಟ್ಟ?:** ಏತನ್ಮಧ್ಯೆ ಇಬ್ಬರು ಹಿರಿಯ ನಾಯಕರು, ಉಪಮುಖ್ಯಮಂತ್ರಿ ಹುದ್ದೆಗೇರುವುದು ಪಕ್ಕಾ ಎಂದು ಹೇಳಲಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ ಡಾ.ಪರಮೇಶ್ವರ್ ಅವರು ಡಿಸಿಎಂ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ, ಇಬ್ಬರಿಗೆ ಡಿಸಿಎಂ ಹುದ್ದೆಯನ್ನು ನೀಡಿ, ಸಂಖ್ಯೆಯನ್ನು ಮೂರಕ್ಕೇರಿಸಲು, ಹೈಕಮಾಂಡ್ ನಿರ್ಧರಿಸಿದೆ ಎನ್ನಲಾಗಿದೆ.







### ಸಭೆ ನಿಗದಿ, ಆದರೆ..!

ಜುಲೈ 21 ಮಧ್ಯಾಹ್ನ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಜೊತೆಗೆ, ಸಿಎಂ ಡಿಕೆಶಿ, ಸಿದ್ದರಾಮಯ್ಯ, ಬಿಕೆ ಹರಿಪ್ರಸಾದ್ ಜೊತೆಗೆ ಸಭೆ ನಿಗದಿಯಾಗಿತ್ತು. ಆದರೆ, ಈ ಸಭೆ ನಡೆಯದೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಆದರೆ, ಪ್ರಧಾನಿ ನಿವಾಸದ ಮುಂದೆ ಪ್ರತಿಭಟನೆಗೆ ರಾಹುಲ್ ಗಾಂಧಿ ನಿರ್ಧರಿಸಿದ ಹಿನ್ನೆಲೆಯಲ್ಲಿ ಈ ಸಭೆ ಮುಂದಕ್ಕೆ ಹೋಯಿತು.

### ಮಾಜಿ ಸಿಎಂ ಒತ್ತಡ..?

ಡಿಕೆ ಶಿವಕುಮಾರ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಸಮಯದಲ್ಲೇ ಸತೀಶ್ ಜಾರಕಿಹೊಳಿ ಕೂಡಾ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದು, ಕೆಪಿಸಿಸಿ ಅಧ್ಯಕ್ಷ ಹುದ್ದೆಯ ಮೇಲೂ ಕಣ್ಣಿಟ್ಟಿದ್ದರು. ಆದರೆ, ರಾಹುಲ್ ಗಾಂಧಿ, ಬಿಕೆ ಹರಿಪ್ರಸಾದ್ ಅವರನ್ನು ಆಯ್ಕೆ ಮಾಡಿದ್ದರು. ಈಗ, ಡಿಸಿಎಂ ಹುದ್ದೆ ಅವರಿಗೆ ನೀಡಬೇಕು ಎನ್ನುವ ಒತ್ತಡವನ್ನು ಸಿದ್ದರಾಮಯ್ಯ ಹಾಕಿದ್ದರು ಎನ್ನಲಾಗಿದೆ.







### ಎಂಬಿಪಿ, ಸತೀಶ್ ಡಿಸಿಎಂ?

ಲಿಂಗಾಯತ ಸಮುದಾಯದ ಧುರೀಣ ಎಂಬಿ ಪಾಟೀಲ್, ಅಹಿಂದ ಸಮುದಾಯದ ನಾಯಕ ಸತೀಶ್ ಜಾರಕಿಹೊಳಿ, ಈ ಇಬ್ಬರೂ ಸಂಭಾವ್ಯ ಉಪಮುಖ್ಯಮಂತ್ರಿ ರೇಸ್'ನಲ್ಲಿ ಇದ್ದಾರೆ ಎಂದು ಹೇಳಲಾಗುತ್ತಿದೆ. ಮುಸ್ಲಿಂ ಸಮುದಾಯದ ಮೂವರಿಗೆ ಸಚಿವ ಸ್ಥಾನ ನೀಡುವ ಸಾಧ್ಯತೆಯ ಬಗ್ಗೆಯೂ ಮಾತುಗಳು ಕೇಳಿ ಬರುತ್ತಿದ್ದು, ಖಚಿತ ಮಾಹಿಸಿ ಇಲ್ಲವಾಗಿದೆ.

### ಮತ್ತೆ ಸಂಪುಟ ವಿಸ್ತರಣೆ?

ಸಂಪುಟ ವಿಸ್ತರಣೆಗೆ ಯಾವಾಗ ಮಹೂರ್ತ ಕೂಡಿ ಬರಲಿದೆ ಎನ್ನುವುದರ ಬಗ್ಗೆ ಇನ್ನೂ ಖಚಿತತೆ ಇಲ್ಲ. ಮಾನ್ಸೂನ್ ಅಧಿವೇಶನ ಒಂದು ಕಡೆ, ಸಿಜೆಪಿಯ ವಿದ್ಯಾರ್ಥಿಗಳ ಪ್ರತಿಭಟನೆ, ಸಾಗುತ್ತಿರುವ ದಾರಿಯನ್ನು ಆಧರಿಸಿ, ಇದಕ್ಕೆ ದಿನ ಕೂಡಿ ಬರಬಹುದು ಎಂದು ಹೇಳಲಾಗುತ್ತಿದೆ. ಇದರ ನಡುವೆ ಸಚಿವ ಪದವಿ ಆಕಾಂಕ್ಷಿಗಳ ಒತ್ತಡವೂ ಜೋರಾಗಿದೆ.

## ಸಸ್ಯ ಆರೋಗ್ಯ ಕೇಂದ್ರ ಉದ್ಘಾಟನೆ: ರೈತರಿಗೆ ವೈಜ್ಞಾನಿಕ ಕೃಷಿ ಸಲಹೆಗಳ ಕೇಂದ್ರ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕೃಷಿಮಹಾವಿದ್ಯಾಲಯದ ಗ್ರಾಮೀಣ ಕೃಷಿಕಾರ್ಯಾನುಭವ ಕಾರ್ಯಕ್ರಮದ ಅಂಗವಾಗಿ ಕೊಪ್ಪಳ ಜಿಲ್ಲೆಯ ಕೆರೆಹಳ್ಳಿ ಗ್ರಾಮದಲ್ಲಿ ಸಸ್ಯ ಆರೋಗ್ಯ ಚಿಕಿತ್ಸಾಲಯ ಉದ್ಘಾಟಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿಮಹಾವಿದ್ಯಾಲಯದ ವಿಶೇಷಾಧಿಕಾರಿಗಳಾದ ಡಾ. ಯಂಜೇರಪ್ಪ ವಹಿಸಿ, ಆಧುನಿಕ ಕೃಷಿ ತಂತ್ರಜ್ಞಾನ, ಸಮಗ್ರ ಕೃಷಿ ಪದ್ಧತಿ ಹಾಗೂ ಕೃಷಿಯ ಭವಿಷ್ಯದ ಕುರಿತು ರೈತರಿಗೆ ಮಾಹಿತಿ ನೀಡಿದರು.

RAWE ಸಂಯೋಜಕರಾದ ಡಾ. ಎಂ.ವಿ. ರವಿ ಕಾರ್ಯಕ್ರಮದ ಉದ್ದೇಶ ಹಾಗೂ ವಿದ್ಯಾರ್ಥಿಗಳ ಗ್ರಾಮೀಣ ಸೇವೆಯ ಮಹತ್ವವನ್ನು ವಿವರಿಸಿದರು. ಮುಖ್ಯ ಸಿಬ್ಬಂದಿ ಸಲಹೆಗಾರ ಡಾ. ಕಿರಣಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಗ್ರಾಮೀಣ ಕಾರ್ಯಚಟುವಟಿಕೆಗಳಿಗೆ ರೈತರು ಹಾಗೂ ಗ್ರಾಮಸ್ಥರು ಸಂಪೂರ್ಣ ಸಹಕಾರ ನೀಡುವಂತೆ ಮನವಿ ಮಾಡಿದರು. ಸಹ–ಸಂಯೋಜಕ ಡಾ. ವಾಸುದೇವ ನಾಯಕ್ ಕಾರ್ಯಕ್ರಮದ ಉದ್ದೇಶಗಳನ್ನು ವಿವರಿಸಿದರೆ, ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಮಹಾಂತಶಿವಯೋಗಯ್ಯ ಹವಾಮಾನ ವೈಪರೀತ್ಯ ಸಂದರ್ಭದಲ್ಲಿ ಅನುಸರಿಸಬೇಕಾದ ಆಕಸ್ಮಿಕ ಬೆಳೆ ಯೋಜನೆ ಕುರಿತು ರೈತರಿಗೆ ಉಪಯುಕ್ತ ಮಾಹಿತಿ ನೀಡಿದರು.



ಈ ಸಂದರ್ಭದಲ್ಲಿ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಎಸ್.ಬಿ. ಗೌಡರ್, ಡಾ. ಬಸವರಾಜ ಗಾಣಿಗೆರ, ಡಾ. ವಿ. ಕರೇಗೌಡರ್, ಡಾ. ಶ್ರೀಧರ್ ಡಿ., ಡಾ. ಮಹಾಂತೇಶ್, ಡಾ. ಬಸವರಾಜ್ ಕಾಡಣ್ಣನವರ್ ಹಾಗೂ ಡಾ. ಸಾಹೇಬ್ ಗೌಡ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ RAWE ವಿದ್ಯಾರ್ಥಿಗಳು ಸಸ್ಯ ಆರೋಗ್ಯ ಕೇಂದ್ರದ ಉದ್ದೇಶ, ರೈತರಿಗೆ ದೊರೆಯುವ ಪ್ರಯೋಜನಗಳು, ಸಸ್ಯ ರೋಗಗಳು, ಕೀಟಗಳ ಗುರುತಿಸುವಿಕೆ, ಪೋಷಕಾಂಶ ಕೊರತೆಗಳ ಪತ್ತೆ ಹಾಗೂ ಸಮಗ್ರ ನಿರ್ವಹಣಾ ಕ್ರಮಗಳ ಕುರಿತು ರೈತರಿಗೆ ಮಾಹಿತಿ ನೀಡಿ ಜಾಗೃತಿ ಮೂಡಿಸಿದರು.

# ಬಿಸಿಲ ನಾಡಿನ ಯಾವ ಧುರೀಣರಿಗೆ ಸಚಿವ ಪದವಿ..?

• ಎಂ.ಜಂಬುನಾಥ, ವರದಿಗಾರ, ಬಳ್ಳಾರಿ

ಕರ್ನಾಟಕ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟದ ಎರಡನೇ ಹಂತದ ವಿಸ್ತರಣೆಗೆ ಸಂಬಂಧಿಸಿದ ರಾಜಕೀಯ ಚಟುವಟಿಕೆಗಳು ವೇಗ ಪಡೆದಿವೆ. ಮಾಜಿ ಸಿಎಂ ಸಿದ್ದರಾಮಯ್ಯ, ಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್ ನಡುವೆ ಹಲವು ಸುತ್ತಿನ ಸಮಾಲೋಚನೆಗಳು ನಡೆದಿವೆ.

**ಕಾಂಗ್ರೆಸ್ನಲ್ಲಿ ಸಚಿವ ಸ್ಥಾನಕ್ಕಾಗಿ ಪೈಪೋಟಿ**

**ಯಾರಿಗೆ ಸಚಿವ ಸ್ಥಾನದ ಭಾಗ್ಯ..?**

**ಬಿ. ನಾಗೇಂದ್ರ (ಬಳ್ಳಾರಿ ಗ್ರಾಮೀಣ):** ಸಚಿವ ಸ್ಥಾನದ ಆಕಾಂಕ್ಷಿಗಳ ಪೈಕಿ ಬಿ. ನಾಗೇಂದ್ರ ಅವರ ಹೆಸರು ಮೊದಲ ಸಾಲಿನಲ್ಲಿ ಕೇಳಿಬರುತ್ತಿದೆ. ಅವರು ಎಸ್ಟಿ ಸಮುದಾಯದ ಪ್ರಮುಖ ನಾಯಕರು. ಹಲವು ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಿದ್ದು, ಸರ್ಕಾರ ಹಾಗೂ ಪಕ್ಷ ಎರಡರಲ್ಲೂ ಅನುಭವ ಇರುವ ನಾಯಕ ಎಂಬುದು ಅವರ ಬಲವಾಗಿದೆ.

**ಜೆ. ಎನ್. ಗಣೇಶ್ (ಕಂಪ್ಲಿ):** ಜೆ. ಎನ್. ಗಣೇಶ್ ಕ್ಷೇತ್ರದಲ್ಲಿ ಬಲವಾದ ಜನಾಧಾರ ಹೊಂದಿರುವ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿರುವುದು, ಕಾರ್ಯಕರ್ತರೊಂದಿಗೆ ಉತ್ತಮ ಸಂಪರ್ಕ ಹಾಗೂ ಕ್ಷೇತ್ರದಲ್ಲಿ ನಿರಂತರ ಹಾಜರಾತಿ ಅವರ ಪರವಾಗಿ ಕೆಲಸ ಮಾಡಬಹುದು ಎಂದು ಕಾಂಗ್ರೆಸ್ ಮೂಲಗಳು ಹೇಳುತ್ತವೆ.

**ನಾರಾ ಭರತ್ ರೆಡ್ಡಿ (ಬಳ್ಳಾರಿ ನಗರ):** ಈ ಬಾರಿ ಕಾಂಗ್ರೆಸ್ ಹೊಸ ಮುಖಗಳಿಗೆ ಅವಕಾಶ ನೀಡುವ ಕುರಿತು ಚರ್ಚೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ನಾರಾ ಭರತ್ ರೆಡ್ಡಿ ಅವರ ಹೆಸರು ಬಲವಾಗಿ ಕೇಳಿಬರುತ್ತಿದೆ. ಯುವ ನಾಯಕತ್ವ, ನಗರ ಪ್ರದೇಶದ ಪ್ರತಿನಿಧಿತ್ವ ಹಾಗೂ ಹೊಸ ತಲೆಮಾರಿನ ನಾಯಕನಾಗಿ ಅವರ ಗುರುತಿನ ಕಾರಣದಿಂದ ಅವರಿಗೆ ಅವಕಾಶ ದೊರೆಯಬಹುದು ಎಂಬ ಲೆಕ್ಕಾಚಾರ ಕೆಲವು ರಾಜಕೀಯ ವಿಶ್ಲೇಷಕರಲ್ಲಿದೆ.

**ಎನ್.ಟಿ. ಶ್ರೀನಿವಾಸ್ (ಕೂಡ್ಲಿಗಿ):** ಸಾಮಾಜಿಕ ಸಮೀಕರಣದ ದೃಷ್ಟಿಯಿಂದ ಎನ್. ಟಿ. ಶ್ರೀನಿವಾಸ್ ಅವರ ಹೆಸರೂ ಚರ್ಚೆಯಲ್ಲಿದೆ.

ಕೂಡ್ಲಿಗಿ ಕ್ಷೇತ್ರದ ಪ್ರತಿನಿಧಿತ್ವ, ಪ್ರಾದೇಶಿಕ ಸಮತೋಲನ ಹಾಗೂ ಸಮುದಾಯದ ಲೆಕ್ಕಾಚಾರದಲ್ಲಿ ಅವರಿಗೆ ಅವಕಾಶ ಸಿಗಬಹುದು ಎನ್ನುವ ಮಾತುಗಳಿವೆ. ಆದರೆ, ಇತರ ಪ್ರಮುಖ ಆಕಾಂಕ್ಷಿಗಳೊಂದಿಗೆ ಹೋಲಿಸಿದರೆ ಅವರ ಹೆಸರು ಸ್ವಲ್ಪ ಹಿಂಬದಿಯಲ್ಲಿದೆ ಎನ್ನುವುದು ರಾಜಕೀಯ ವಲಯದ ಚರ್ಚೆ.









### ರಾಜಕೀಯದಲ್ಲಿ ಹೆಚ್ಚು ಚರ್ಚೆ

ಹೊಸ ಸಚಿವರ ಪಟ್ಟಿಯ ಬಗ್ಗೆ ಊಹಾಪೋಹಗಳು ಜೋರಾಗಿವೆ. ಈ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ ಜಿಲ್ಲೆಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗುವ ಸಾಧ್ಯತೆ ಕುರಿತು ರಾಜಕೀಯ ವಲಯದಲ್ಲಿ ಹೆಚ್ಚು ಚರ್ಚೆಯಾಗುತ್ತಿದೆ.

### ಬಳ್ಳಾರಿ ಜಿಲ್ಲೆಗೆ ಏಕೆ ಮಹತ್ವ?

ಬಳ್ಳಾರಿ ಜಿಲ್ಲೆ ಕಾಂಗ್ರೆಸ್‌ಗೆ ರಾಜಕೀಯವಾಗಿ ಪ್ರಮುಖ ಜಿಲ್ಲೆ. ವಿವಿಧ ಸಾಮಾಜಿಕ ಸಮುದಾಯಗಳ ಪ್ರಭಾವ ಇರುವ ಈ ಜಿಲ್ಲೆಗೆ ಸಚಿವ ಸಂಪುಟದಲ್ಲಿ ಪ್ರತಿನಿಧಿತ್ವ ನೀಡಬೇಕು ಎಂಬ ಬೇಡಿಕೆ ಪಕ್ಷದೊಳಗೆ ಕೇಳಿಬರುತ್ತಿದೆ. ಇಲ್ಲಿ ಉತ್ತಮ ಶಾಸಕರ ಬಲ ಇದ್ದು, ಈ ಬಾರಿ ಬಳ್ಳಾರಿಗೆ ಕನಿಷ್ಠ ಒಂದು ಸಚಿವ ಸ್ಥಾನ ದೊರೆಯಬಹುದು ಎಂಬ ನಿರೀಕ್ಷೆ ಹೆಚ್ಚಾಗಿದೆ.

## ನೀಟ್ ಸಂಪೂರ್ಣ ರದ್ದುಗೊಳಿಸಿ; ರಾಹುಲ್ ಗಾಂಧಿ ಬಂಧನ ಖಂಡನೀಯ: ತಮಿಳುನಾಡು ಸಿಎಂ ವಿಜಯ್

## ಯುವಕರು ದೇಶದ ಹಿತ ಕಾಯುವ ಕೆಲಸ ಮಾಡಬೇಕು

ಯುವಶಕ್ತಿಯೇ ಯಾವುದೇ ರಾಷ್ಟ್ರದ ದೊಡ್ಡ ಸಂಪತ್ತು. ಇಂದಿನ ಯುವಕರ ಆಲೋಚನೆ, ಶ್ರಮ ಮತ್ತು ಬದ್ಧತೆಯೇ ನಾಳಿನ ದೇಶದ ಭವಿಷ್ಯವನ್ನು ರೂಪಿಸುತ್ತದೆ. ಆದ್ದರಿಂದ ಯುವಕರು ವೈಯಕ್ತಿಕ ಸಾಧನೆಗೆ ಮಾತ್ರ ಸೀಮಿತರಾಗದೆ, ದೇಶದ ಹಿತವನ್ನು ಕಾಪಾಡುವ ಜವಾಬ್ದಾರಿಯನ್ನೂ ಅರಿತುಕೊಳ್ಳಬೇಕು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೊ: 9845028349



ಇಂದಿನ ಜಾಗತಿಕ ಸ್ಪರ್ಧೆಯ ಯುಗದಲ್ಲಿ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಕೃಷಿ, ಕೈಗಾರಿಕೆ ಹಾಗೂ ಉದ್ಯಮಶೀಲತೆಯ ಕ್ಷೇತ್ರಗಳಲ್ಲಿ ಯುವಕರು ಸಾಧನೆ ಮಾಡುವುದರ ಜೊತೆಗೆ ಸಮಾಜದ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಬೇಕು. ಕಾನೂನು ಪಾಲನೆ, ಪರಿಸರ ಸಂರಕ್ಷಣೆ, ಮತದಾನದ ಮಹತ್ವ ಅರಿವು, ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವ ಕಾರ್ಯಗಳಲ್ಲಿ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳುವುದು ಅಗತ್ಯವಾಗಿದೆ.

ಮಾದಕ ವ್ಯಸನ, ಹಿಂಸಾಚಾರ, ದ್ವೇಷ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಮಾಹಿತಿಯಿಂದ ದೂರವಿದ್ದು, ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಯುವಶಕ್ತಿ ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ. ದೇಶದ ಹಿತಾಸಕ್ತಿಗೆ ಧಕ್ಕೆ ತರುವ ಯಾವುದೇ ಚಟುವಟಿಕೆಗಳನ್ನು ವಿರೋಧಿಸುವ ಧೈರ್ಯ ಮತ್ತು ಪ್ರಜ್ಞೆಯನ್ನು ಪ್ರತಿಯೊಬ್ಬ ಯುವಕ–ಯುವತಿಯೂ ಬೆಳೆಸಿಕೊಳ್ಳಬೇಕು.

ದೇಶದ ಪ್ರಗತಿ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ; ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಅದರಲ್ಲೂ ಯುವಕರು ರಾಷ್ಟ್ರ ನಿರ್ಮಾಣದ ಪ್ರಮುಖ ಶಕ್ತಿಯಾಗಿದ್ದಾರೆ. ಅವರ ಶಕ್ತಿ, ಪ್ರತಿಭೆ ಮತ್ತು ಪ್ರಾಮಾಣಿಕತೆ ದೇಶದ ಏಳಿಗೆಗೆ ಮೀಸಲಾಗಿದೆಯಾದರೆ ಭಾರತ ಇನ್ನಷ್ಟು ಬಲಿಷ್ಠ, ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮಲಿದೆ. ದೇಶದ ಹಿತವೇ ನಮ್ಮ ಹಿತ ಎಂಬ ಮನೋಭಾವವನ್ನು ಪ್ರತಿಯೊಬ್ಬ ಯುವಕ–ಯುವತಿಯೂ ಅಳವಡಿಸಿಕೊಂಡು, ರಾಷ್ಟ್ರದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡುವ ಸಂಕಲ್ಪ ಮಾಡಬೇಕಾಗಿದೆ. ಅದುವೇ ನಿಜವಾದ ದೇಶಪ್ರೇಮ ಮತ್ತು ರಾಷ್ಟ್ರಸೇವೆ.

## ಪುರಸಭೆಗೆ ನೂತನ ಅಧ್ಯಕ್ಷರಾಗಿ ಗಿರಿಜಾ ರಮೇಶ ಕೊಡಗಾನೂರ ಅವಿರೋಧ ಆಯ್ಕೆ



**ಕೆಂಭಾವಿ:** ಇಲ್ಲಿನ ಪುರಸಭೆಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ 1ನೇ ವಾರ್ಡ್‌ನ ಸದಸ್ಯೆ ಗಿರಿಜಾ ರಮೇಶ ಕೊಡಗಾನೂರ ಅವರು ಬುಧವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಿಸಿಎಮ್ (ಎ) ಮೀಸಲಾತಿ ಅನ್ವಯ ಮೊದಲ ಅವಧಿಗೆ ಪಕ್ಷದ ಒಳ ಒಪ್ಪಂದಂತೆ ಈಗಾಗಲೆ ಇಬ್ಬರು ಅಧ್ಯಕ್ಷರು ಅಧಿಕಾರ ವಹಿಸಿಕೊಂಡಿದ್ದರು. ಇದೀಗ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಪುರಸಭೆ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಗಿರಿಜಾ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ, ಚುನಾವಣಾಧಿಕಾರಿ ಹಾಗೂ ಯಾದಗಿರಿ ಉಪ ವಿಭಾಗಾಧಿಕಾರಿ ಶ್ರೀಧರ ಗೋಟೂರ್ ಅವರು ಗಿರಿಜಾ ಅವರನ್ನು ನೂತನ ಅಧ್ಯಕ್ಷರೆಂದು ಅಧಿಕೃತವಾಗಿ ಘೋಷಿಸಿದರು. ಇದರೊಂದಿಗೆ ಕಳೆದ ಹಲವು ದಿನಗಳಿಂದ ಸೃಷ್ಟಿಯಾಗಿದ್ದ ರಾಜಕೀಯ ಸಂಚಲನ ಹಾಗೂ ಹೈಡ್ರಾಮಾಗೆ ತೆರೆಬಿದ್ದಂತಾಗಿದೆ.

ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಚುನಾವಣಾಧಿಕಾರಿ ಶ್ರೀಧರ ಗೋಟೂರ್, 10ನೇ ಅವಧಿಯ ಅಧ್ಯಕ್ಷ ಸ್ಥಾನಕ್ಕೆ ಗಿರಿಜಾ ರಮೇಶ ಕೊಡಗಾನೂರ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಪರಿಶೀಲನೆ ನಡೆಸಿ, ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ನಿಯಮ 1965ರ ಸೆಕ್ಷನ್ 8/1 ರನ್ವಯ ನೂತನ ಅಧ್ಯಕ್ಷರಾಗಿ ಗಿರಿಜಾ ರಮೇಶ ಕೊಡಗಾನೂರ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಒಟ್ಟು 25 ಸದಸ್ಯರ ಪೈಕಿ 18 ಸದಸ್ಯರು ಸಭೆಯಲ್ಲಿ ಹಾಜರಿದ್ದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಎ. ಎಸ್. ಸರಕಾವಸ್, ಪುರಸಭೆ ಮುಖ್ಯಾಧಿಕಾರಿ ಪ್ರಕಾಶ ಬಾಗ್ಲಿ, ಜಿ.ಪಂ. ಮಾಜಿ ಅಧ್ಯಕ್ಷ ಸಿದ್ದನಗೌಡ ಪೋಲಿಸ್ ಪಾಟೀಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಹೊಸಮನಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಬಸವರಾಜ ಪಾಟೀಲ ಚಿಂಚೋಳಿ, ನಿಕಟಪೂರ್ವ ಡಿಸಿಸಿ ಬ್ಯಾಂಕ್ ನಿರ್ದೇಶಕ ಬಾಪುಗೌಡ ಪಾಟೀಲ್, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಮಹಿಪಾಲರೆಡ್ಡಿ ಡಿಗ್ಗಾವಿ, ಪುರಸಭೆ ಉಪಾಧ್ಯಕ್ಷೆ ಲಕ್ಷ್ಮಿಬಾಯಿ ಕಂಬಾರ್, ಖಾಜಾ ಪಟೇಲ್ ಕಾಚೂರು, ಸೋಮಲಿಂಗಪ್ಪ ದೊಡ್ಮನಿ, ದೇವಿಂದ್ರಪ್ಪ ವಠಾರ, ಸಾಹೇಬಲಾಲ ಆಂದೇಲಿ, ರಮೇಶ ಕೊಡಗಾನೂರ, ರಂಗಪ್ಪ ವಡ್ಡರ, ಶಿವಪ್ಪ ಕಂಬಾರ, ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು. ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು.

**ಕಾರ್ಯಕರ್ತರಿಂದ ವಿಜಯೋತ್ಸವ:** ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದ ಗಿರಿಜಾ ರಮೇಶ ಕೊಡಗಾನೂರ ಅವರನ್ನು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು, ಕಾರ್ಯಕರ್ತರು, ಪುರಸಭೆಯ ಸದಸ್ಯರು ಹಾಗೂ ಅಭಿಮಾನಿಗಳು ಸನ್ಮಾನಿಸಿ ಗೌರವಿಸಿ ಬಳಿಕ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

# ಕೋನಮೇಳಕುಂದಾ ಸಾನಿಸಾಹೇಬ್ ಜಾತ್ರೆಗೆ ಭಕ್ತರ ದಂಡು

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಕೋನಮೇಳಕುಂದಾ ಗ್ರಾಮದಲ್ಲಿ ಹಜರತ್ ಸಾನಿಸಾಹೇಬ್(ಮಡ್ಡಿ ಪೀರ್) ದೇವರ ಜಾತ್ರೆ ಗುರುವಾರದಿಂದ ಎರಡು ದಿವಸ ಶ್ರದ್ಧೆ, ಭಕ್ತಿಯಿಂದ ನೆರವೇರಲಿದೆ. ಗ್ರಾಮದ ಹೊರವಲಯದ ಬೀದರ್ ಮುಖ್ಯ ರಸ್ತೆಯ ಎಡಭಾಗದ ನಿಸರ್ಗದ ಮಡಿಲು(ಗುಡ್ಡದ ಪ್ರದೇಶ)ದಲ್ಲಿ ನಡೆಯಲಿರುವ ಈ ಜಾತ್ರೆ ಹಿಂದೂ–ಮುಸ್ಲಿಂ ಬಾಂಧವರ ಭಾವೈಕ್ಯತೆಗೆ ಸಾಕ್ಷಿಯಾಗಲಿದೆ.

ಗ್ರಾಮದ ಪೂರ್ವಜ್ಜರು, ಹಿರಿಯರು ಸೇರಿ ಆಚರಿಸಿಕೊಂಡು ಬರುತ್ತಿರುವ ಈ ಜಾತ್ರೆ ಪರಂಪರೆ ಇಂದಿಗೂ ಮುಂದುವರೆಸಿಕೊಂಡು ಬರಲಾಗುತ್ತಿದೆ. ಪ್ರತಿವರ್ಷ ಗುರು ಪುರ್ಣಿಮೆಗೂ ಮುನ್ನ ಬರುವ ಮೊದಲ ಗುರುವಾರ, ಶುಕ್ರವಾರ ಜಾತ್ರಾ ಮಹೋತ್ಸವ ಆಚರಿಸಲಾಗುತ್ತದೆ.

ಜಾತ್ರೆ ಹಿನ್ನೆಲೆಯಲ್ಲಿ ದರ್ಗಾಕ್ಕೆ ಸುಣ್ಣ ಬಳಿದು ಸಿಂಗರಿಸಲಾಗಿದೆ. ಕವ್ವಾಲಿ ಗಾಯನಕ್ಕೆ ವೇದಿಕೆ ಸಿದ್ಧಗೊಂಡಿದೆ. ಗ್ರಾಮದಲ್ಲಿ ಗುರುವಾರ ಕುದುರೆ ಮೇಲೆ ಗಂಧ(ಸಂದಲ್) ಲೇಪಿಸಿ ಮೆರವಣಿಗೆ ಮೂಲಕ ಜಾತ್ರೆಗೆ ಚಾಲನೆ ನೀಡಲಾಗುತ್ತದೆ.

ಶುಕ್ರವಾರ ನಡೆಯಲಿರುವ ಐತಿಹಾಸಿಕ ಜಾತ್ರೆಗೆ ಗ್ರಾಮ ಅಷ್ಟೇ ಅಲ್ಲದೇ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರ ದಂಡೆ ಹರಿದು ಬರಲಿದೆ. ದಿನವಿಡಿ ಸಾವಿರಾರೂ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ನೈವೇದ್ಯ, ಕಾಯಿ, ಕರ್ಪೂರ ಅರ್ಪಿಸಿ



ತಮ್ಮ ಹರಕೆ ತೀರಿಸಿ ಭಕ್ತಿಯನ್ನು ಸಮರ್ಪಣೆ ಮಾಡಲಿದ್ದಾರೆ. ಆಗಮಿಸುವ ಭಕ್ತರಿಗೆ ಅನ್ನದಾಸೋಹ, ಕುಡಿಯುವ ನೀರಿನ ವ್ಯವಸ್ಥೆಯು ಕಲ್ಪಿಸಲಾಗಿದೆ.

**ಜಾತ್ರೆ ಹಿನ್ನೆಲೆ:** ಈ ಗ್ರಾಮದ ಹಜರತ್ ಸಾನಿಸಾಹೇಬ್(ಪೀರ)ಗೆ ತನ್ನದೇ ಆದ ಐತಿಹ್ಯ ಹೊಂದಿದೆ. ಸುಮಾರು 300 ವರ್ಷಗಳ ಇತಿಹಾಸ ಇರಬಹುದು ಎಂದು ಹೇಳಲಾಗುತ್ತಿದೆ. ಸಾನಿಸಾಹೇಬ್ ಎಂಬ ವ್ಯಕ್ತಿ ಸಿದ್ಧಿಪುರುಷರಾಗಿದ್ದರು. ನಂತರ ಗುಡ್ಡದ ಪರಿಸರದಲ್ಲಿ ನೆಲೆಸಿ ಮಾಯವಾದರು ಎಂಬ ಪ್ರತೀತಿ ಇದೆ. ಇವರಿಂದ ಗ್ರಾಮಕ್ಕೆ ಸುಭೀಕ್ಷೆ ನೆಲಸಿತು ಎಂಬ ನಂಬಿಕೆ ಇದೆ. ಆ ಕಾರಣಕ್ಕಾಗಿಯೇ ಗ್ರಾಮದಲ್ಲಿ ಪ್ರತಿವರ್ಷ ಮುಂಗಾರಿನ ಮಳೆಗಾಲದಲ್ಲಿ ಗ್ರಾಮದ ಹಿಂದೂ–ಮುಸ್ಲಿಂ ಬಾಂಧವರು ಸೇರಿ ಸಂಭ್ರಮದಿಂದ ಜಾತ್ರಾ ಮಹೋತ್ಸವ ಆಚರಿಸುತ್ತಾರೆ.

**ಮಲೋದಿ ನೈವೇದ್ಯ ಪ್ರೀಯ:** ಮಡ್ಡಿ ಪೀರ್ ದೇವರಿಗೆ ಮಲೋದಿ ಪ್ರೀಯವಾದ ನೈವೇದ್ಯ. ಹೀಗಾಗಿ ಗ್ರಾಮದಲ್ಲಿ ಜಾತಿಭೇದ ಭಾವ ಇಲ್ಲದೇ ಪ್ರತಿಯೊಬ್ಬರು ತಮ್ಮ ತಮ್ಮ ಮನೆಯಲ್ಲಿ ಗೋಧಿಯಿಂದ ಮಲೋದಿ ನೈವೇದ್ಯ ಸಿದ್ಧಪಡಿಸಿ ಕಾಯಿ, ಕರ್ಪೂರ, ಊದಬತ್ತಿಯೊಂದಿಗೆ ದೇವರನ್ನು ಪೂಜಿಸಿ ಹರಕೆ ತೀರಿಸಿ ಭಕ್ತಿಭಾವ ಮೆರೆಯುತ್ತಾರೆ.


**ಇಷ್ಟಾರ್ಥ ಈಡೇರಿಕೆ:** ಇಲ್ಲಿನ ಸಾನಿಸಾಹೇಬ್ ಬೇಡಿದ ವರವನ್ನು ನೀಡುತ್ತಾರೆ. ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಬರಹರಿಸುತ್ತಾರೆ ಎಂಬ ನಂಬಿಕೆ ಇದೆ. ಹೀಗಾಗಿ ಮದುವೆ, ಮಕ್ಕಳು, ಆರೋಗ್ಯ ಸೇರಿ ನಾನಾ ಕಷ್ಟಗಳನ್ನು ಹೊತ್ತ ಭಕ್ತರ ಸನ್ಮಾರ್ಗ ದೊರತಿದೆ. ಈ ಹಿನ್ನೆಲೆಯಲ್ಲಿ ದರ್ಗಾದಲ್ಲಿ ಭಕ್ತರು ನಾನಾ ಹರಕೆ ಹೊತ್ತು ಜಾತ್ರೆಯ ದಿನದಂದು ಈಡೇರಿಸಿ ಭಕ್ತಿ ಸಮರ್ಪಿಸುತ್ತಾರೆ.

> **ಹಜರತ್ ಸಾನಿಸಾಹೇಬ್ ದೇವರ ಮೇಲೆ ಭಕ್ತರು ಅಪಾರ ನಂಬಿಕೆ ಇಟ್ಟುಕೊಂಡಿದ್ದಾರೆ. ಹೀಗಾಗಿ ಜಾತ್ರಾ ದಿನದಂದು ನಾನಾ ಕಡೆಗಳಿಂದ ಸಾವಿರಾರೂ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ತಮ್ಮ ಹರಕೆ ಈಡೇರಿಸಿ ದೇವರ ದರುಶನ ಪಡೆದು ಪುನಿತರಾಗುತ್ತಾರೆ.**
> **–ಸಮೀರ ಸೇವಕ ಹಜರತ್ ಸಾನಿಸಾಹೇಬ್ ದರ್ಗಾ ಕೋನಮೇಳಕುಂದಾ**

**ಸಂಭ್ರಮದ ಸಂದಲ್ ಮೆರವಣಿಗೆ:** ಗ್ರಾಮದಲ್ಲಿ ಹಜರತ್ ಸಾನಿಸಾಹೇಬ್ ಜಾತ್ರೆ ಹಿನ್ನೆಲೆಯಲ್ಲಿ ಗುರುವಾರ ಕುದುರೆ ಮೇಲೆ ಗಂಧ ಮತ್ತು ಉರುಸ್ ಸಂಭ್ರಮದಿಂದ ಜರುಗಲಿದೆ. ಸುಮಾರು 300 ವರ್ಷಗಳ ಇತಿಹಾಸ ಹೊಂದಿರುವ ಸಾನಿಸಾಹೇಬ್ ಜಾತ್ರೆಯನ್ನು ಗ್ರಾಮಸ್ಥರು ಪ್ರತಿವರ್ಷ ಸಂಭ್ರಮದಿಂದ ಆಚರಿಸುತ್ತಾ ಬರುತ್ತಿದ್ದಾರೆ. ಗ್ರಾಮದಿಂದ ಭಾಜಾ, ಭಜಂತ್ರಿಯೊಂದಿಗೆ ಹೊರಟ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದರ್ಗಾಕ್ಕೆ ಹೋಗಿ ಕೊನೆಗೊಳ್ಳಲಿದೆ.

## ಹಜರತ್ ಶಾನೇ ಸಾಹೇಬ್ ಉರ್ಸ್ ಶರೀಫ್ ಜಾತ್ರೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ತಾಲೂಕಿನ ಕೋನ್ ಮೇಳಕುಂದಾ ಗ್ರಾಮದ ಹಜರತ್ ಶಾನೇ ಸಾಹೇಬ್ ದರ್ಗಾದ ವಾರ್ಷಿಕ ಉರ್ಸ್ ಶರೀಫ್ ಜಾತ್ರಾ ಮಹೋತ್ಸವವು ಜುಲೈ 23 ಹಾಗೂ 24ರಂದು ಭಕ್ತಿ, ಶ್ರದ್ಧೆ ಮತ್ತು ಸಂಭ್ರಮದಿಂದ ನಡೆಯಲಿದೆ ಎಂದು ದರ್ಗಾ ವ್ಯವಸ್ಥಾಪಕ ಮಸ್ತಾನ್ ಶೇಖ್ ಮುಜಾವರ್ ಸಮಸ್ತ ಕೋನ ಮೇಳಕುಂದಾ ಗ್ರಾಮಸ್ಥರ ತಿಳಿಸಿದ್ದಾರೆ.

ಜುಲೈ 23ರಂದು (ಗುರುವಾರ) ಸಂದಲ್ ಶರೀಫ್ ಕಾರ್ಯಕ್ರಮ ನಡೆಯಲಿದ್ದು, ಜುಲೈ 24ರಂದು (ಶುಕ್ರವಾರ) ಉರ್ಸ್ ಶರೀಫ್ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಲಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಜಾತ್ರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಯೋಜಿಸಲಾಗಿದ್ದು, ಹಲ್ಬರ್ಗಾ, ತರನಳ್ಳಿ, ಸಿದ್ದೇಶ್ವರ, ಸಿದ್ದೇಶ್ವರ ವಾಡಿ, ತೇಗಂಪುರ, ಹುಪ್ಪಳ, ಅಹಮದಾಬಾದ್ ಸೇರಿದಂತೆ ಸುತ್ತಮುತ್ತಲಿನ ಅನೇಕ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ದರ್ಗಾದಲ್ಲಿ ದರ್ಶನ ಪಡೆದು ಆಶೀರ್ವಾದ ಪಡೆಯಲಿದ್ದಾರೆ. ಶಾನೇ ಸಾಹೇಬ್ ದರ್ಗಾಕ್ಕೆ ಯಾವುದೇ ಧರ್ಮ, ಜಾತಿ ಮತದ ಭೇದವಿಲ್ಲದೆ ಎಲ್ಲಾ ಧರ್ಮದ ಭಕ್ತರು ಆಗಮಿಸಿ ತಮ್ಮ ಹರಕೆಗಳನ್ನು ಸಲ್ಲಿಸಿ, ಮನೋಕಾಮನೆಗಳು ಈಡೇರಿವೆ ಎಂಬ ನಂಬಿಕೆಯಿಂದ ಪೂಜೆ ಸಲ್ಲಿಸುತ್ತಾರೆ.

ಈ ವರ್ಷದ ಉರ್ಸ್ ಶರೀಫ್ ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ದರ್ಗಾ ವ್ಯವಸ್ಥಾಪಕ ಮಸ್ತಾನ್ ಶೇಖ್ ಮುಜಾವರ್ ಭಕ್ತಾದಿಗಳಿಗೆ ಮನವಿ ಮಾಡಿದ್ದಾರೆ.

## ಇತಿಹಾಸದಲ್ಲಿ ಮಠ ಮಂದಿರಗಳ ಕೊಡುಗೆ ಅಪಾರ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ನಮ್ಮ ಸನಾತನ ಸಂಸ್ಕೃತಿಯ ಇತಿಹಾಸದಲ್ಲಿ ಮಠ ಮಂದಿರಗಳ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಡಾ. ಸಿದ್ದು ಪಾಟೀಲ ನುಡಿದರು. ಪಟ್ಟಣದಲ್ಲಿ ಶ್ರೀಗುರು ಅಯ್ಯಪ್ಪ ಸ್ವಾಮಿ ಹಿರೇಮಠದ ಕಿರಿಯ ಪೀಠಾಧಿಪತಿ ಮರುಳಾರಾಧ್ಯ ಶಿವಾಚಾರ್ಯರ 25ನೇಯ ಜನ್ಮದಿನ ರಜತ ಮಹೋತ್ಸವ ಕಾರ್ಯಕ್ರಮದ ನಿಮಿತ್ತವಾಗಿ ನಡೆದ ಧರ್ಮ ಸಭೆಯಲ್ಲಿ ಮಾತನಾಡಿದರು.

ಚಿಟಗುಪ್ಪ ಅಯ್ಯಪ್ಪ ಸ್ವಾಮಿ ಹಿರೇಮಠದಲ್ಲಿ ಮುಂದಿನ ದಿನಗಳಲ್ಲಿ ಸಭಾ ಮಂಟಪ ನಿರ್ಮಿಸಿ ಕೊಡಲಾಗುವುದು. ಅಲ್ಲದೇ ಮಠದ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಎಂದು ಭರವಸೆ ನೀಡಿದರು. ಸೊಂತ ಮಲ್ಲಾಮಾರಿ ತೀರ ಕ್ಷೇತ್ರದ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರು ಆಶೀರ್ವಚನ ನೀಡುತ್ತಾ ಮಾತನಾಡಿ, ನಮ್ಮ ಬೀದರ ಭಾಗದಲ್ಲಿ ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಚಿಟಗುಪ್ಪ ಅಯ್ಯಪ್ಪ ಸ್ವಾಮಿ ಹಿರೇಮಠ ತನ್ನದೆಯಾದ ಮಹತ್ವದ ಕೊಡುಗೆಯನ್ನು ನೀಡುತ್ತಾ ಬಂದಿದೆ ಎಂದರು.

ಐನಾಪೂರದ ಉಪಮನ್ಯು ಶಿವಾಚಾರ್ಯರು ಮಾತನಾಡಿ, ಚಿಟಗುಪ್ಪ ಮಠದಲ್ಲಿಯೂ ಕೂಡಾ ವೇದಾಧ್ಯಯನ ಆರಂಭಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರವನ್ನು ನೀಡುವ ಮೂಲಕ ಧರ್ಮದ ಪ್ರಗತಿಗೆ ಶ್ರಮಿಸಬೇಕು ಎಂದರು. ಹಿರಿಯ ಶ್ರೀ ಗುರುಲಿಂಗ ಶಿವಾಚಾರ್ಯರು, ಪ್ರಮುಖರಾದ ವಿಜಯಕುಮಾರ ಚಿಟಗುಪ್ಪಿಕರ, ಬಸವರಾಜ ಪಾಟೀಲ ಬೆಳಕೇರಾ, ಸೂರ್ಯಕಾಂತ ಮಠಪತಿ, ಅನಿಲಕುಮಾರ ಸಿಂಧೆ, ಸಚಿನ ಮಠಪತಿ, ರಾಜಗೋಪಾಲ ಐನಾಪೂರ, ಡಾ. ವಿಜಯ ಹಿರಾಸ್ಕರ, ವೀರಯ್ಯ ಪೂಜಾರಿ, ರವಿಚಂದ್ರ ಶಿವಪೂಜೆ, ರಾಘವೇಂದ್ರ ರಘೋಜಿ, ಅಣ್ಣೆಪ್ಪ ವರನಾಳ ಸೇರಿದಂತೆ ಅಪಾರ ಭಕ್ತಾಧಿಗಳು ಉಪಸ್ಥಿತರಿದ್ದರು.

# ಮೊಬೈಲ್ ವ್ಯಸನದಿಂದ ಯುವಜನರ ಅಮೂಲ್ಯ ಜೀವನ ಹಾಳು: ಸಿದ್ದಯ್ಯ ಸ್ವಾಮಿ

• ಮಲ್ಲಮ್ಮ ನುಡಿ ವಾರ್ತೆ ಔರಾದ

ಯುವ ಜನತೆ ಮೊಬೈಲ್ ಅನ್ನು ಅತಿಯಾಗಿ ಬಳಸುತ್ತಾ ತಮ್ಮ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿಕೊಳ್ಳುವ ಮೂಲಕ ತಮ್ಮ ಭವಿಷ್ಯ ಹಾಗೂ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ವಡಗಾಂವ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಸಿದ್ದಯ್ಯ ಸ್ವಾಮಿ ಅವರು ಹೇಳಿದರು.

ಅವರು ಔರಾದ ತಾಲ್ಲೂಕಿನ ಖಾನಾಪೂರ ಗ್ರಾಮದ ಹನುಮಾನ ಮಂದಿರದಲ್ಲಿ ಶ್ರೀ ಕೇತಕಿ ಸಂಗಮೇಶ್ವರ ಕಲಾ ಸಾಹಿತ್ಯ ಜಾನಪದ ಕಲಾವಿದರ ಸಂಘ, ಬೆಲ್ದಾಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ ಇವರ ಸಂಯುಕ್ತಾಶ್ರಯದಲ್ಲಿ ಸಾಮಾನ್ಯ ಯೋಜನೆಯಡಿ ಆಯೋಜಿಸಿದ್ದ ಪ್ರಾಯೋಜಿತ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರವೀಂದ್ರ ಪಾಟೀಲ್ ಅವರು ಮಾತನಾಡಿ, ಸಂಗೀತವು



ಮನಸ್ಸಿಗೆ ಆನಂದವನ್ನು ನೀಡುವ ಕಲೆಯಾಗಿದ್ದು, ನಮ್ಮ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಅತ್ಯಂತ ಅವಶ್ಯಕವಾಗಿದೆ. ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಗ್ರಾಮದ ಮುಖಂಡರಾದ ನೀಲಕಂಠರಾವ ಪಾಟೀಲ ಹಾಗೂ ಘಾಳೆಪ್ಪ ಧನ್ನೂರೆ ಮಾತನಾಡಿದರು. ಕಲ್ಲಪ್ಪ ಪಾಟೀಲ, ಸಂಗಮೇಶ ಬೆಲ್ದಾಳ ಸೇರಿದಂತೆ ಇತರ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭದಲ್ಲಿ ದತ್ತಾತ್ರೇಯ ಬಿರಾದಾರ ಸ್ವಾಗತಿಸಿದರು. ಕಲ್ಲಪ್ಪ ಬಿರಾದಾರ ಕಾರ್ಯಕ್ರಮವನ್ನು ನಿರೂಪಿಸಿದರೆ, ಶರಣು ಚಾಂಬೋಳೆ ವಂದಿಸಿದರು. ಬಳಿಕ ಶ್ರೀ ಕೇತಕಿ ಸಂಗಮೇಶ್ವರ ಕಲಾ ಸಾಹಿತ್ಯ ಜಾನಪದ ಕಲಾವಿದರ ಸಂಘದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಂಗಮೇಶ ಬೆಲ್ದಾಳ ಅವರು ಹಾರ್ಮೋನಿಯಂನಲ್ಲಿ ಸಂಗೀತ ಸೇವೆ ಸಲ್ಲಿಸಿದರೆ, ಶರಣು ಚಾಂಬೋಳೆ ತಬಲಾ ವಾದನ ಮಾಡಿದರು. ಬಸವರಾಜ ಶಿವಣಗಿ, ನಾಗರೆಡ್ಡಿ ಧನ್ನೂರೆ ಹಾಗೂ ನಾಗಯ್ಯ ಸ್ವಾಮಿ ಅವರು ಜಾನಪದ ಗಾಯನದ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಕಲಾವಿದರ ಅದ್ಭುತ ಪ್ರದರ್ಶನಗಳು ನೋಡುಗರ ಕಣ್ಮನ ಸೆಳೆದವು.

ಕಾರ್ಯಕ್ರಮದಲ್ಲಿ ಕಲಾವಿದರು, ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಸ್ಮಾರ್ಟ್ ಮೀಟರ್‌ನಿಂದ ವಿದ್ಯುತ್ ಸೇವೆ ಮತ್ತಷ್ಟು ಸ್ಮಾರ್ಟ್



> **ಸ್ಮಾರ್ಟ್ ಮೀಟರ್‌ಗಳು ವಿದ್ಯುತ್ ಕ್ಷೇತ್ರದಲ್ಲಿ ಮಹತ್ವದ ತಾಂತ್ರಿಕ ಪರಿವರ್ತನೆಯಾಗಿವೆ. ಗ್ರಾಹಕರಿಗೆ ನಿಖರ ಬಿಲ್ಲಿಂಗ್, ಪಾರದರ್ಶಕ ಸೇವೆ ಹಾಗೂ ಗುಣಮಟ್ಟದ ವಿದ್ಯುತ್ ನಿರ್ವಹಣೆ ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಇದರಿಂದ ವಿದ್ಯುತ್ ಉಳಿತಾಯಕ್ಕೂ ಉತ್ತೇಜನ ದೊರೆಯಲಿದ್ದು, ವಿದ್ಯುತ್ ಸಂಸ್ಥೆಯ ಕಾರ್ಯಕ್ಷಮತೆ ಹೆಚ್ಚುವುದರ ಜೊತೆಗೆ ತಾಂತ್ರಿಕ ಹಾಗೂ ವಾಣಿಜ್ಯ ನಷ್ಟವನ್ನು ತಗ್ಗಿಸಲು ಸಹಕಾರಿಯಾಗಲಿದೆ. ಸ್ಮಾರ್ಟ್ ಮೀಟರ್ ಕುರಿತು ಹರಿದಾಡುತ್ತಿರುವ ತಪ್ಪು ಮಾಹಿತಿಗಳಿಗೆ ಸಾರ್ವಜನಿಕರು ಕಿವಿಗೊಡದೆ, ಜೆಸ್ಕಾಂ ನೀಡುವ ಅಧಿಕೃತ ಮಾಹಿತಿಯನ್ನೇ ನಂಬಬೇಕು.**
> **–ಶಶಿಧರ ಕುರೇರ**
> **ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಕಲಬುರಗಿ**

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ವಿದ್ಯುತ್ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಗ್ರಾಹಕರಿಗೆ ಪಾರದರ್ಶಕ, ನಿಖರ ಹಾಗೂ ಗುಣಮಟ್ಟದ ಸೇವೆ ಒದಗಿಸುವ ನಿಟ್ಟಿನಲ್ಲಿ ಸ್ಮಾರ್ಟ್ ಮೀಟರ್ ವ್ಯವಸ್ಥೆ ಪ್ರಮುಖ ಹೆಜ್ಜೆಯಾಗಿದೆ.

ಸಾಂಪ್ರದಾಯಿಕ ವಿದ್ಯುತ್ ಮೀಟರ್‌ಗಳಿಗೆ ಹೋಲಿಸಿದರೆ ಸ್ಮಾರ್ಟ್ ಮೀಟರ್‌ಗಳು ಹೆಚ್ಚು ಆಧುನಿಕವಾಗಿದ್ದು, ವಿದ್ಯುತ್ ಬಳಕೆಯ ಮಾಹಿತಿಯನ್ನು ತ್ವರಿತವಾಗಿ ದಾಖಲಿಸಿ ವಿದ್ಯುತ್ ಸಂಸ್ಥೆಗೆ ರವಾನಿಸುವ ಸಾಮರ್ಥ್ಯ ಹೊಂದಿವೆ. ಸ್ಮಾರ್ಟ್ ಮೀಟರ್ ವಿದ್ಯುತ್ ಬಳಕೆಯ ಮಾಹಿತಿ ಸ್ವಯಂಚಾಲಿತವಾಗಿ ವಿದ್ಯುತ್ ಸಂಸ್ಥೆಗೆ ತಲುಪುತ್ತದೆ. ಇದರಿಂದ ನಿಖರ ಬಿಲ್ಲಿಂಗ್, ಪಾರದರ್ಶಕತೆ ಹಾಗೂ ವೇಗವಾದ ಸೇವೆ ಸಾಧ್ಯವಾಗುತ್ತದೆ. ಮೀಟರ್ ರೀಡರ್ ಮನೆಗೆ ಬರಬೇಕಾದ ಅಗತ್ಯವೂ ಕಡಿಮೆಯಾಗುತ್ತದೆ ಎಂದು ಜೆಸ್ಕಾಂ ಅಧಿಕಾರಿಗಳು ಹೇಳಿದ್ದಾರೆ.

ಪ್ರಸ್ತುತ ಜೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 8,185 ಗ್ರಾಹಕರು ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಇವರಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕಾಗಿ 3,019 ಗ್ರಾಹಕರು ಸ್ಮಾರ್ಟ್ ಮೀಟರ್‌ಗಳನ್ನು ಬಳಸುತ್ತಿದ್ದು, 40 ಗ್ರಾಹಕರು ಪ್ರಿಪೇಡ್ ಹಾಗೂ 5,126 ಗ್ರಾಹಕರು ಪೋಸ್ಟ್‌ಪೇಡ್ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಂಡಿದ್ದಾರೆ.

ಸ್ಮಾರ್ಟ್ ಮೀಟರ್‌ಗಳ ದರ ಸಿಂಗಲ್ ಫೇಸ್‌ಗೆ (ಬಾಕ್ಸ್ ಸಹಿತ) 4,983 ರೂ., ತ್ರಿಫೇಸ್‌ಗೆ (ಬಾಕ್ಸ್ ಸಹಿತ) 8,800 ರೂ. ಹಾಗೂ ತ್ರಿಫೇಸ್ ಸಿ.ಟಿ. (ಅಖಿ) ಆಪರೇಟೆಡ್ ಸ್ಮಾರ್ಟ್ ಮೀಟರ್‌ಗೆ (ಬಾಕ್ಸ್ ಸಹಿತ) 27,500 ರೂ. (ಜಿಎಸ್‌ಟಿ ಸೇರಿದಂತೆ) ಎಂದು ನಿಗದಿಯಾಗಿದೆ. ಗ್ರಾಹಕರಿಗೆ ಪ್ರಿಪೇಡ್ ಅಥವಾ ಪೋಸ್ಟ್‌ಪೇಡ್ ಆಯ್ಕೆಯನ್ನು ನೀಡಲಾಗಿದೆ. ಆದರೆ ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯವಾಗಿದೆ.

**ಸ್ಮಾರ್ಟ್ ಮೀಟರ್ ಟೆಸ್ಟಿಂಗ್ ಲ್ಯಾಬ್**

ಸ್ಮಾರ್ಟ್ ಮೀಟರ್‌ಗಳ ಕಾರ್ಯಕ್ಷಮತೆ, ನಿಖರತೆ ಹಾಗೂ ಗುಣಮಟ್ಟವನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು ಜೆಸ್ಕಾಂ ಅತ್ಯಾಧುನಿಕ ಸ್ಮಾರ್ಟ್ ಮೀಟರ್ ಟೆಸ್ಟಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಿದೆ. ಇದರಿಂದ ಮೀಟರ್‌ಗೆ ಸಂಬಂಧಿಸಿದ ಗ್ರಾಹಕರ ಅನುಮಾನಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಶೀಘ್ರ ಪರಿಹರಿಸಲು ಸಾಧ್ಯವಾಗುತ್ತದೆ.

ಪ್ರಸ್ತುತ ಕಲಬುರಗಿ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಈ ಟೆಸ್ಟಿಂಗ್ ಲ್ಯಾಬ್‌ಗಳು ಕಾರ್ಯನಿರ್ವಹಿಸುತ್ತಿವೆ. ಮೀಟರ್ ಪರೀಕ್ಷೆ ಮಾಡಿಸಿಕೊಳ್ಳಲು ಬಯಸುವ ಗ್ರಾಹಕರು ಸಂಬಂಧಿಸಿದ ಜೆಸ್ಕಾಂ ಉಪವಿಭಾಗದಲ್ಲಿ ಸಿಂಗಲ್ ಫೇಸ್ ಮೀಟರ್‌ಗೆ 100 ರೂ. ಹಾಗೂ ತ್ರಿಫೇಸ್ ಮೀಟರ್‌ಗೆ 200 ರೂ. ಶುಲ್ಕ ಪಾವತಿಸಿ, ತಮ್ಮ ಮೀಟರ್ ಅನ್ನು ಟೆಸ್ಟಿಂಗ್ ಲ್ಯಾಬ್‌ಗೆ ಕೊಂಡೊಯ್ದು ಪರೀಕ್ಷೆ ಮಾಡಿಸಿಕೊಳ್ಳಬಹುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**IN THE COURT OF THE SENIOR CIVIL JUDGE & JMFC AT BASAVAKALYAN**
**Crl. Misc; NO. 21/2026**

**Petioner:**
P1. Riyaz s/o Badesab P2. Sultansab s/o Badesab, P3 Shakib, ali Shaik P4, Asif ali both are R/o kitta, Tq, Basavakalyan, Dist. Bidar.

V/S

**Respondent;**
the Tahasildar, Basavakalyan.

**Claim; Issue of Death Certificate of mother of petitioners.**

**Petition under sec. 13(3) of Birth and Death Registration Act. 1969**

**PAPER PUBLICATION**

This is to inform to the public at large, the mother of the petitioners by by name "Najbun Bee " Who was died on 09.02.2021, in her house at Village; Kitta, tQ; Basavakalyan, Dist; Bidar leaving behind the petitionr as her son The said "P1. Riyaz and anothers are R/o kitta, Tq; Basavakalyan, Dist; bidar" has filed the above case before the Hon'ble senior civil judge court at Basavakalyan, for issuing direction to the respondent. for issue of death certificate. If anybody got objection for the same, they are hereby resquested to come and appear before the Hon;ble court on or before 12.08.2026 at 11.00 AM.

Date.21.07.2026

**By order fo the court**
**Chief Ministerial officer**
**Senior civil judge & jmfc court**
**Basavakalyan**

# ಕಂದಕದಿಂದ ಕಂಟಕ, ಗ್ಯಾರಂಟಿ ಜಾಗೃತಿವಹಿಸಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆಯಲಬುರ್ಗಾ





: ತಾಲೂಕಿನ ಮಲಕಸಮುದ್ರ ಗ್ರಾಮದ ಬಸ್ಸು ತಂಗುದಾಣದ ಪಕ್ಕದಲ್ಲಿರುವ ಸಿಸಿ ರಸ್ತೆ ಹೊಂದಿರುವ ಗಟಾರು ಕಿತ್ತು ಹೊಗಿ ದೊಡ್ಡದಾದ ಕಂದಕ ನಿರ್ಮಾಣವಾಗಿದೆ ,ಮಳೆ ಬಂದಾಗ ಈ ಗಟಾರ ತುಂಬಿ ಹರಿಯುತ್ತದೆ ,ರಾತ್ರಿಯ ಸಮಯದಲ್ಲಿ ರಸ್ತೆ ಯಾರಿಗೂ ಕಾಣಲಾರದೆ ಬಿಳುವ ಸಂಭವವಿದೆ ಹಾಗು ರೈತರ ಸಂಗಾತಿಗಳಾದ ಎತ್ತು,ಎಮ್ಮೆ,ಹಸು,ಕುರಿ ಮೇಕೆಗಳನ್ನು ಹೊಲ ಹಾಗು ಮನೆಗೆ ಬರುವಾಗ ಅದರಲ್ಲಿ ಬಿದ್ದು ಕೈ ಕಾಲು ಮುರಿಯುವ ಪ್ರಸಂಗವಿರುತ್ತದೆ ಆದ್ದರಿಂದ ರೈತರ ಬಂಡಿ( ಚಕ್ಕಡಿ) ಹೊಗುವಂತೆ ಮತ್ತು ಸಾರ್ವಜನಿಕರು ಸುಗಮವಾಗಿ ಸಂಚಾರ ಮಾಡಲು ಗ್ರಾಮ ಪಂಚಾಯತಿ ಸದಸ್ಯರು, ಜನಪ್ರತಿನಿದಗಳು ಹಾಗು ಸಂಬಂದಿಸಿದವರು ಕ್ರಮ ತಗೆದು-ಕೊಂಡು ಅಪಾಯದ ಹಾದಿ ತಪ್ಪಿಸಿ ಸುಗಮ ದಾರಿ ಕಲ್ಪಿಸುವಲ್ಲಿ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ (ವಾಸು ದೇವ ಮೇಟಿ ಬಣದ) ಯಲಬುರ್ಗಾ ತಾಲೂಕು ಅಧ್ಯಕ್ಷ ಶರಣಬಸಪ್ಪ ದಾನಕೈ ಅವರು ಒತ್ತಾಯಿಸಿದ್ದಾರೆ. ಇಂತಹಹ ಅಪಾಯದ ಹಾದಿಯಲ್ಲಿ ಈ ರಸ್ತೆಯಿಂದ ರೈತರಿಗೆ, ಮಕ್ಕಳಿಗೆ,ವಯೋವೃದ್ದರಿಗೆ,ಜನ ಜಾನುವಾರುಗಳಿಗೆ ದಿನ ನಿತ್ಯ ಸಂಚಾರ ಮಾಡುವಾಗ ಈ ಕಂದಕದಲ್ಲಿ ಬಿದ್ದು ಸಾವನ್ನು ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಆಗ ಇದಕ್ಕೆ ಯಾರು ಹೋಣೆಯಾಗಬೇಕು? ಗ್ರಾಮ ಪಂಚಾಯತಿ ಹಾಗು ಜನಪ್ರತಿನಿಧಿಗಳು ಕಣ್ಣುಮುಚ್ಚಿ,ಕಣ್ಣಿದ್ದರು ಕುರುಡರಾಗಿದ್ದಾರೆಯೆ..? ಎಂಬ ಪ್ರಶ್ನೆ ಕಾಡುತ್ತಿದೆ, ಆದ್ದರಿಂದ ಜಾಗೃತಿವಹಿಸಿ ಸಮಸ್ಯೆಗೆ ಸ್ಪಂದಿಸಬೇಕು ಇಲ್ಲದಿದ್ದರೆ ಕಂದಕದಿಂದ ಕಂಟಕ ಗ್ಯಾರಂಟಿ !.. ತಪ್ಪಿದಲ್ಲ.

# ಬಿಡಾಡಿ ದನ ಕರುಗಳಿಗೂ ನೋಂದಾಯಿಸಿ ಗುರುತಿನ ಟ್ಯಾಗ ಹಾಕುವಂತೆ ಬಜರಂಗದಳ ಮನವಿ

• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ



ನಗರದಲ್ಲಿ ಬಿಡಾಡಿ ದನಕರುಗಳಿಗೂ ಕಡ್ಡಾಯವಾಗಿ ನೋಂದಾಯಿಸಿ ಗುರುತಿನ ಟ್ಯಾಗ್ ಹಾಕುವಂತೆ ವಿಶ್ವ ಹಿಂದೂ ಪರಿಷತ್ ಬಜರಂಗದಳವು ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಅಕ್ರಮ ಗೋ ಸಾಗಾಣಿಕೆ,ಗೋ ಕಳ್ಳಾಟ, ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಿಡದಿ ದನಕರುಗಳಿಗೆ ನೋಂದಣಿಯ ಟ್ಯಾಗ್ ಹಾಕುವಂತೆ ಹಾಗೂ ಅಕ್ರಮ ಗೋಗಳನ್ನ ಖರೀದಿ, ಗೋ ಮಾರಾಟದ ಹಾಗೂ ನೋಂದಣಿಯ ಬಗ್ಗೆ ಲಿಖಿತ ದಾಖಲೆಯನ್ನು ನಮೂದಿಸುವಂತೆ, ಹಾಗೂ ಗೋಶಾಲೆಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಪಶು ವೈದ್ಯಕೀಯ ಇಲಾಖೆಯ ಉಲ್ಲೇಖದಂತೆ, ನಗರಸಭೆ ಪೌರಾಯುಕ್ತರಿಗೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆಯ ಅಧಿಕಾರಿಗಳಿಗಳು ಇತ್ತಕಡೆ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಬಸವಕಲ್ಯಾಣದಲ್ಲಿ ಸುಮಾರು 68 ಕ್ಕಿಂತ ಹೆಚ್ಚು ಬೀದಿ ಪಶುಗಳು ಇದ್ದವು ಅದರೆ ಈಗ ಅದರಲ್ಲಿ ಕೇವಲ ಕೆಲವೇ ಪಶುಗಳು ಮಾತ್ರ ಕಾಣುತ್ತಿವೆ. ಅದಕ್ಕಾಗಿ ನಗರ ಮತ್ತು ಗ್ರಾಮಗಳಲ್ಲಿ ಬರುವ ಎಲ್ಲಾ ಪಶುಗಳ ಕಿವಿಗೆ ಕಡ್ಡಾಯವಾಗಿ ಗುರುತಿನ ಟ್ಯಾಗ ಮಾಡುವ ಸಲುವಾಗಿ ಸಂಬಂಧಪಟ್ಟ ಪಶು ವೈದ್ಯಾಧಿಕಾರಿಗಳಿಂದ ತಮಗೆ ಪತ್ರ ಸಹ ಬಂದಿರುತ್ತದೆ, ಅದಕ್ಕಾಗಿ ತಾವುಗಳು ಬೀದಿ ಪಶುಗಳ ಕಿವಿಗೆ ಟ್ಯಾಗ ಹಾಕಿ ಗುರುತ್ತಿಸಿಕೊಳ್ಳಬೇಕು ಮತ್ತು ಗೋಶಾಲೆಗೆ ಕಳುಸುವಂತೆ ಡೊಂಗರು ಸಾರಿ ಕಳುಹಿಸುವ ವ್ಯವಸ್ಥೆಯೂ ಮಾಡಬೇಕು ಸದರಿ ವಿಷಯದ ಬಗ್ಗೆ ಮನಗಂಡು ಗಮನಹರಿಸಿ ತಾವುಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮೂಲಕ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಧರ್ಮಚಾರ್ಯ ಪ್ರಮುಖರಾದ ಹಾಗೂ ವಿಶ್ವ ಹಿಂದೂ ಪರಿಷತ್ ತಾಲೂಕು ಅಧ್ಯಕ್ಷರಾದ ಶ್ರೀಶೈಲ ವಾತಡೆ. ಬಜರಂಗದಳ ಜಿಲ್ಲಾ ಸಹ ಸಂಯೋಜಕರಾದ ರವಿ ನಾವದ್ಗೇಕರ. ಕಾರ್ಯದರ್ಶಿಗಳಾದ ಕಮಲಜೀತ ಸಿಂಗ ಚವ್ಹಾಣ. ನಗರ ಅಧ್ಯಕ್ಷರಾದ ಪ್ರಕಾಶ ನಿರಾಳೆ. ಧರ್ಮಚಾರ್ಯ ಪ್ರಖಂಡ ಪ್ರಮುಖರಾದ ಶಾಂತಿವೀರ ಸ್ವಾಮಿ. ಗೋರಕ್ಷಾ ಪ್ರಮುಖರಾದ ಅಜಯ ಗೌವಳಿ. ಸಂಜುಕುಮಾರ ದಳವೆ ಇನ್ನಿತರರು ಉಪಸ್ಥಿತರಿದ್ದರು.

# ಸಲಹಾ ಸಮಿತಿ ನೂತನ ನಿರ್ದೇಶಕರಾಗಿ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಶ್ರೀ ಬೀರೇಶ್ವರ ಕೋ ಅಪ್ ಕ್ರೆಡಿಟ್ ಸೊಸೈಟಿ (ಮಲ್ಟಿಸ್ಟೇಟ್) ಇಲ್ಲಿನ ಶಾಖೆಯ ಸಲಹಾ ಸಮಿತಿಗೆ ನೂತನವಾಗಿ ನಿರ್ದೇಶಕರಾಗಿ ನೇಮಕವಾದ ರಾಜಕುಮಾರ ಸುಗುರೆ, ರಾಜಶೇಖರ್ ಪಾಟೀಲ್, ಶಿವಕುಮಾರ್ ಬಿರಾದಾರ್ ಹಾಗೂ ಅನ್ಮೋಲ್ ರಗಟೆ ಅವರನ್ನು ಅಧ್ಯಕ್ಷರಾದ ಬಸವರಾಜ್ ವರವಟ್ಟೆ, ಸದಸ್ಯರಾದ ಈರಣ್ಣ ಪಂಚಾಳ್, ಮಲ್ಲಿಕಾರ್ಜುನ ಚಿರಡೆ, ಶ್ರೀಕಾಂತ್ ಕುಲಕರ್ಣಿ, ಅಭಿಷೇಕ್ ನಂದಿ, ಶ್ರೀ ಡಾ. ಶ್ರೀಕಾಂತ್ ಮಠಪತಿ ಅವರನ್ನು ಸನ್ಮಾನಿಸಿ ಗೌರವಿಸಿದರು. ಶಾಖೆಯ ಸಿಬ್ಬಂದಿ ವರ್ಗದವರಿದ್ದರು ಸಂದರ್ಭದಲ್ಲಿ ಅನೇಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ವಿವಿಧ ಮೂಲಗಳಿಂದ ಜ್ಞಾನ ಸಂಪಾದಿಸಿ, ಉನ್ನತ ಗುರಿ ತಲುಪಬೇಕು

ಅಫಜಲಪುರ, ಜು 22 : ವಿದ್ಯಾರ್ಥಿಗಳು ವಿವಿಧ ಮೂಲಗಳಿಂದ ಜ್ಞಾನ ಸಂಪಾದಿಸಿ ಉನ್ನತ ಗುರಿ ತಲುಪಬೇಕು ಎಂದು ತಾಲೂಕಾ ಉಪನ್ಯಾಸಕರ ಸಂಘದ ನೂತನ ಅಧ್ಯಕ್ಷ ಮುತ್ತಣ್ಣ ಎಲ್. ಬೋರುಟಿ ಹೇಳಿದರು.



ಅಫಜಲಪುರ ತಾಲ್ಲೂಕಿನ ಮಾಶಾಳ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ ಉಪನ್ಯಾಸಕರ ಸಂಘದ ಪದಾಧಿಕಾರಿಗಳ ಸನ್ಮಾನ ಸಮಾರಂಭದಲ್ಲಿ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸಂಜಯಕುಮಾರ ಪಾಟೀಲ ಅವರು ಮಾತನಾಡಿ, ಯುವಕರು ಸಂಘದ ಜವಾಬ್ದಾರಿ ವಹಿಸಿಕೊಂಡಿರುವುದು ಸಂತಸ ತಂದಿದೆ, ಇವರು ಉಪನ್ಯಾಸಕರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸಲಿದ್ದಾರೆ ಎಂಬ ಭರವಸೆಯಿದೆ ಎಂದರು. ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ ರಾಠೋಡ ಕಾರ್ಯಾಧ್ಯಕ್ಷ ಗುಂಡೆರಾವ ಅರವತ್ತಗಿರಿ, ಉಪಾಧ್ಯಕ್ಷೆ ಯಲ್ಲಮ್ಮ ಟಿ. ಬತ್ತಾಸೆ ಹಾಗೂ ಖಜಾಂಚಿ ಮಹಾದೇವ ಅಮರಗೊಂಡ, ವಿ.ಕೆ.ಜಿ ನಗರ ಶಿಕ್ಷಕ ಸಂಗನಬಸವ ಮುಜಗೊಂಡ ಅವರನ್ನು ಗೌರವಿಸಲಾಯಿತು.

ಕಾವೇರಿ ಹದರಿ ಸ್ವಾಗತಿಸಿದರು, ಸುಮತಿ ಇಟಗಾರ ನಿರೂಪಿಸಿದರು ಹಾಗೂ ಸರಸ್ವತಿ ಗಡೇದ ವಂದಿಸಿದರು.

ವೇದಿಕೆಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಚೆನ್ನಪ್ಪ ದೇಶಟ್ಟಿ ಹಾಗೂ ಉಪನ್ಯಾಸಕರಾದ ಶಿವರಾಯಗೌಡ ಪಾಟೀಲ್, ಚಿದಾನಂದ ತೆಳಗಿನತೋಟ, ದೇವೇಂದ್ರಪ್ಪ, ರಾಜು ಚವ್ಹಾಣ, ರವಿಕುಮಾರ ಕೆಸರಟ್ಟಿ, ನಾಗರಾಜ ನಾವಿ ಉಪಸ್ಥಿತರಿದ್ದರು.

# ಸಸಿ ನೆಡುವ ಮೂಲಕ ಹುಟ್ಟು ಹಬ್ಬ ಆಚರಿಸಿಕೊಂಡ ವಸಂತ ದುರ್ಗೆ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಹೆಡ್ ಕಾನ್ಸ್ಟೇಬಲ್ ಆಗಿ ಸೇವೆ ಸಲ್ಲಿಸುತ್ತಿರುವ ವಸಂತ ದುರ್ಗೆ ಅವರು ತಮ್ಮ 46ನೇ ಹುಟ್ಟು ಹಬ್ಬವನ್ನು ಪಟ್ಟಣದ ಬಸವೇಶ್ವರ ವೃತ್ತದ ಬಳಿ ಸಸಿ ನೆಡುವ ಮೂಲಕ ಮಂಗಳವಾರ ವಿಭಿನ್ನವಾಗಿ ಆಚರಿಸಿಕೊಂಡರು. ಈ ವೇಳೆ ಮಾತನಾಡಿದ ಅವರು, ಪ್ರಸ್ತುತ ಜಾಗತಿಕ ತಾಪಮಾನ ಹೆಚ್ಚಾಗಿದೆ. ಅದನ್ನು ತಗ್ಗಿಸಲು ವನಮಹೋತ್ಸವ ಕಾರ್ಯಕ್ರಮ ಅನಿವಾರ್ಯವಾಗಿವೆ. ವಾತಾವರಣದ ತಾಪಮಾನ ಕಡಿಮೆ ಮಾಡಲು ಸಸಿಗಳನ್ನು ನೆಟ್ಟು ಬೆಳೆಸುವುದು ಅಗತ್ಯವಾಗಿದೆ ಎಂದರು. ಪ್ರತಿಯೊಬ್ಬರೂ ತಮ್ಮ ಜನ್ಮ ದಿನದಂದು ಸಸಿಗಳನ್ನು ನೆಟ್ಟು, ಅವುಗಳನ್ನು ಪೋಷಿಸಬೇಕು. ಹುಟ್ಟು ಹಬ್ಬ ಹಾಗೂ ಇತರ ಶುಭ ಕಾರ್ಯಕ್ರಮಗಳಿಗೆ ದುಂದುವೆಚ್ಚ ಮಾಡದೆ ಕಾಳಜಿಯಿಂದ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮಹಮ್ಮದ್ ಅಸ್ಲಾಂಮಿಯಾ, ರಾಜಕುಮಾರ ಆರ್. ಹಡಪದ, ಮುಕುಂದರಾವ್ ಕೂಡಂಬಳೆ, ಮಂಜುನಾಥ್ ಉಡಮನಳ್ಳಿ, ರಾಜಕುಮಾರ್ ಗೌದಳಿ, ಮಂಜುನಾಥ್ ಚಿಂತ-ಕೋಟಿ, ಅನೀಲಕುಮಾರ್ ಡಿಡಿ, ಮಹಾದೇವ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಅಹಿಂದ ಸಮುದಾಯಗಳು ನಿರ್ಣಾಯಕ :ಕುಬೇರ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)



ನಗರದ ಪ್ರವಾಸಿ ಮಂದಿರದಲ್ಲಿ ಅಹಿಂದ ಯುವ ವೇದಿಕೆ ತಾಲೂಕು ಸಂಘಟನಾ ಕಾರ್ಯದರ್ಶಿಯಾಗಿ ಕೆ ಬೆಟ್ಟದೇಶ್ ಮತ್ತು ಗಾದಿಗನೂರುಅಹಿಂದ ಗ್ರಾಮ ಘಟಕ ಅಧ್ಯಕ್ಷರಾಗಿ ಕೆ ಅನಿಲ್. ಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ವಿಜಯನಗರ ಜಿಲ್ಲಾ ಕುರುಬ ಸಂಘದ ಜಿಲ್ಲಾ ಅಧ್ಯಕ್ಷರಾದ. ಆರ್. ಕೆ. ಕೊಟ್ರೇಶ್ ಅವರನ್ನು ಅಹಿಂದ ಯುವ ವೇದಿಕೆ ವತಿಯಿಂದ ಸನ್ಮಾನಿಸಿ ಗೌರಿಸಲಾಯಿತು.ಈ ಕಾರ್ಯಕ್ರಮದಲ್ಲಿ ಮಾತನಾಡಿದ.ಅಹಿಂದ ಯುವ. ವೇದಿಕೆಯ ತಾಲೂಕು ಅಧ್ಯಕ್ಷರಾದ ಕುಬೇರ. ದಲ್ಲಾಲಿ. ಮಾತನಾಡಿ.ಹಿಂದುಳಿದ ವರ್ಗ ಜಾಗೃತಿ ಮೂಡಿಸಲು ಅಹಿಂದ. ಬದ್ಧವಾಗಿದೆ.ಹಿಂದುಳಿದ ಜಾತಿಗಳ ಸಂಘಟಿತರಾಗಬೇಕು. ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಬೇಕು.ಅಹಿಂದ ವರ್ಗವನ್ನು ಬಲಪಡಿಸಬೇಕು ಅಹಿಂದ ಅಲ್ಪಸಂಖ್ಯಾತ ಹಿಂದುಳಿದ ದಲಿತರು.ಈ ಮೂರು ಶಕ್ತಿ ಸೇರಿದರೆ ಅದನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ.ಕರ್ನಾಟಕದ ರಾಜಕೀಯ ಸ್ಥಿತಿಯನ್ನು ಬದಲಿಸುವ ಶಕ್ತಿ ಇರುವುದು ಅಹಿಂದ ಸಂಘಟನೆಗೆ ಮಾತ್ರ ಈ ದೃಷ್ಟಿಯಿಂದ ಯುವಕರಲ್ಲಿ ಜಾಗೃತಿ ಮೂಡಿಸಿ, ಸಂಘಟಿತರನ್ನಾಗಿಸುವ ಮೂಲಕ ಸಾಮಾಜಿಕ ಕಾರ್ಯಗಳಲ್ಲಿ ಕ್ರಿಯಾಶೀಲರನ್ನಾಗಿಸಲು ಅಹಿಂದ ಯುವ ವೇದಿಕೆ ಕಾರ್ಯನಿರ್ವಹಿಸಲಿದೆಅಹಿಂದ ತತ್ವವನ್ನು ಅನುಸರಿಸಿ ನೊಂದವರಿಗೆ ಸಾಮಾಜಿಕ ಶೈಕ್ಷಣಿಕ ಆರ್ಥಿಕ ಸಮಾನತೆ ಸಿಗುವಂತೆ ಮಾಡುವ ಉದ್ದೇಶ ಹೊಂದಿದೆ ಈ ಸಂಘಟನೆ ಪಕ್ಷಾತೀತವಾಗಿ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು. ಸಾಮಾಜಿಕವಾಗಿ, ಆರ್ಥಿಕವಾಗಿ,ಶೈಕ್ಷಣಿಕವಾಗಿ ಅಭಿವೃದ್ಧಿ ಜೊತೆಗೆ ಸಮಾಜದಲ್ಲಿ ತಮ್ಮ ಹಕ್ಕನ್ನು ಪ್ರಶ್ನಿಸಿ ಪಡೆಯುವುದನ್ನು ನಮ್ಮ ಸಂಘಟನೆಯ ಅಹಿಂದ ಸಿದ್ಧಾಂತ ತಿಳಿಸುತ್ತದೆ.ಅಂಬೇಡ್ಕರ್ ಬಸವಣ್ಣ,ಕನಕದಾಸರ ಸಿದ್ಧಾಂತಗಳನ್ನು ಒಳಗೊಂಡು ನಮ್ಮ ಸಂಘಟನೆ ಜಿಲ್ಲೆಯಾದ್ಯಂತ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ ಎಂದರು ಹೇಳಿದರು.ಈ ಸಂದರ್ಭದಲ್ಲಿ ಅಹಿಂದ ಯುವ ವೇದಿಕೆಯ ಮಧ್ಯಮ ಸಲಹೆಗಾರರಾದ ಅಶ್ರಿತ್ .ತಾಲೂಕು ಉಪಾಧ್ಯಕ್ಷ.ಕೇಶವ. ಪಂಪಣ್ಣ ಕೆ. ಬಸವರಾಜ್.ಪಿ.ಕನ್ನೆರಿ. ನಾಗಪ್ಪ.ಡಿ.ಶೇಖರ್. ದಮ್ಮೂರ್.ಮಂಜುನಾಥ್. ಗಂಟೆ. ಮಾರುತೇಶ್.ಕೆ ಮಂಜುನಾಥ್.ಕೆ ಎಂ. ಜಂಬಯ್ಯ.ಮೇಘರಾಜ್. ಕಂಪ್ಲಿ.ಮಹದೇವ ಕೆ.ಡಿ ನೀಲಕಂಠಪ್ಪ.ಡಿ.ಮಹೇಶ. ಡಿ.ರಾಮಚಂದ್ರ. ಸದಸ್ಯರುಗಳು ಉಪಸ್ಥಿತರಿದ್ದರು.

# ಧರ್ಮಸ್ಥಳ ಸಂಘದ ವತಿಯಿಂದ ಒಂದು ಲಕ್ಷ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು



ತಾಲೂಕಿನ ಕನ್ನನಾಯಕನಕಟ್ಟೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಪರಮ ಪೂಜ್ಯ ಖಾವಂದರು ಮಂಜೂರು ಮಾಡಿದ 100000 ಮೊತ್ತದ ಡಿ ಡಿ ವಿತರಣೆ ಮಾನ್ಯ ಜಿಲ್ಲಾ ನಿರ್ದೇಶಕರಾದ ಸತೀಶ ಶೆಟ್ಟಿ ಸರ್ ಅವರು ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ದೇವಾಲಯ ನಿರ್ಮಾಣದ ಮಹತ್ವ, ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಪೂಜ್ಯರು ಮಾಡುತ್ತಿರುವ ಸಾಮಾಜಿಕ ಸೇವಾ ಕಾರ್ಯಗಳ ಬಗ್ಗೆ ಮತ್ತು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಕ್ಕೆ ಪೂಜ್ಯರು ನೀಡಿರುವ ಕೊಡುಗೆ ಗಳ ಬಗ್ಗೆ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಾಡುತ್ತಿರುವ ಸೇವಾ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಜಿಲ್ಲಾ ನಿರ್ದೇಶಕರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಕಮೀಟಿ ಅಧ್ಯಕ್ಷರು ಪದಾಧಿಕಾರಿಗಳು ಮತ್ತು ಜನಜಾಗೃತಿ ವೇದಿಕೆಯ ಸದಸ್ಯರಾದ ತಾಲೂಕಿನ ಯೋಜನಾಧಿಕಾರಿಗಳಾದ ಕಲ್ಲಪ್ಪ ಸರ ಗ್ರಾಮಸ್ಥರು ಮೇಲ್ವಿಚಾರಕರಾದ ಜಗದೀಶ್ ಸರ ಹಾಗೂ ಸ್ಥಳೀಯ ಊರಿನ ಮುಖಂಡರು ಆದ ಕುಬೇಂದ್ರ ಗೌಡ್ರು .ಅಂಗಡಿ ಚಂದ್ರಪ್ಪ. ಸುರೇಶ ಗ್ರಾಮ ಪಂಚಾಯತಿ ಸದಸ್ಯದ ಕೆಂಚಪ್ಪ ,ಬಸವರಾಜ ,ಬಣಕಾರ್ ಮಾಳಪ್ಪ , ಸಣ್ಣ ಮರಿಯಪ್ಪ,ರಮೇಶ್, ಎಚ್ ಪರಶುರಾಮ್, ಎಚ್ ಕೆ ಜಂಬುನಾಥ, ಹರೀಶ ಕೆಂಚಪ್ಪ ನಾಗರಾಜ ರೇಣುಕನಂದ ಕೊಟ್ರಪ್ಪ ಊರಿನ ಮುಖಂಡರು ಮತ್ತು ಸ್ವ ಸಹಾಯ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

# ಹಾವಿನ ಕಡಿತದ ಔಷಧ ಲಭ್ಯತೆ ಕುರಿತು ಸುಳ್ಳು ಸುದ್ದಿ : ಕಿವಿಗೊಡಬೇಡಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)




ಸಾಮಾಜಿಕ ಜಾಲತಾಣಗಳಲ್ಲಿ ಹಾವಿನ ಕಡಿತಕ್ಕೆ 108 ಆಂಬುಲೆನ್ಸ್ನಲ್ಲೇ ಔಷಧ ಲಭ್ಯವಿದ್ದು, ಕರೆ ಮಾಡಿದರೆ ಮನೆ ಬಾಗಿಲಿಗೆ ಬಂದು ಔಷಧ ನೀಡುತ್ತಾರೆ ಎಂಬ ಗಾಳಿಸುದ್ದಿ ಹರಡಲಾಗುತ್ತಿದೆ. ಸಾರ್ವಜನಿಕರು ಇಂತಹ ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಸ್ಪಷ್ಟಪಡಿಸಿದ್ದಾರೆ.

ಹಾವಿನ ಕಡಿತಕ್ಕೆ ಆಂಟಿ-ಸ್ನೇಕ್ ವೆನಮ್ (Anti-Snake Venom) ಔಷಧವು ಹತ್ತಿರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಲಭ್ಯವಿರುತ್ತದೆ. ಆದ್ದರಿಂದ, ಹಾವಿನ ಕಡಿತಕ್ಕೊಳಗಾದವರು ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ತೆರಳಿ ಉಚಿತವಾಗಿ ಚಿಕಿತ್ಸೆ ಮತ್ತು ಔಷಧವನ್ನು ಪಡೆದುಕೊಳ್ಳಬಹುದು ಎಂದು ಮನವಿ ಮಾಡಿದ್ದಾರೆ.

# ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನಸಹಾಯಕ್ಕೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜು. 22: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾದಗಿರಿ ಜಿಲ್ಲೆಯ ವತಿಯಿಂದ 2026-27ನೇ ಸಾಲಿನ ಸಾಮಾನ್ಯ ಯೋಜನೆ, ಪರಿಶಿಷ್ಟ ಜಾತಿ ಉಪಯೋಜನೆ (SCSP) ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ (TSP) ಅಡಿಯಲ್ಲಿ ಧನಸಹಾಯಕ್ಕಾಗಿ ಅರ್ಹ ಕಲಾತಂಡಗಳು ಮತ್ತು ಕಲಾವಿದರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇಲಾಖೆಯ ನಿರ್ದೇಶಕರ ಸೂಚನೆಯಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸುವ ನೋಂದಾಯಿತ ಸಂಘ-ಸಂಸ್ಥೆಗಳಿಗೆ ಧನಸಹಾಯ, ಅಸಂಘಟಿತ ಕಲಾವಿದರಿಗೆ ವಾದ್ಯಪರಿಕರ/ವೇಷಭೂಷಣ ಖರೀದಿ ಸಹಾಯಧನ ಹಾಗೂ ಚಿತ್ರಕಲೆ/ಶಿಲ್ಪಕಲಾಕೃತಿಗಳ ಪ್ರದರ್ಶನಕ್ಕೆ ಧನಸಹಾಯವನ್ನು ನೀಡಲಾಗುವುದು.

ಅರ್ಹರು ಸೇವಾ ಸಿಂಧು ಪೊ?ರ್ಟಲ್ ಮುಖಾಂತರ ದಿನಾಂಕ: 20-08-2026 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕು. ನೇರವಾಗಿ ಕಚೇರಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಸರ್ಕಾರದ ಮಾರ್ಗಸೂಚಿಗಾಗಿ ಇಲಾಖೆಯ




ವೆಸೈಟ್ www.kannadasiri.karnataka.gov.in ನ್ನು ವೀಕ್ಷಿಸಬಹುದಾಗಿದೆ). ಹೆಚ್ಚಿನ ಮಾಹಿತಿಗಾಗಿ 080-24410574 / 08022213530 / 9986837037 / 08022241325 ಅನ್ನು ಹಾಗೂ ಆಯಾ ಜಿಲ್ಲೆಯ ವ್ಯವಸ್ಥಾಪಕರು, ಸೇವಾಸಿಂಧು ಇವರನ್ನು ಸಂಪರ್ಕಿಸಬಹುದಾಗಿದೆ. ಈ ಪ್ರಕಟಣೆಗೆ ಸಂಬಂಧಿಸಿದಂತೆ ನಿಮಗೆ ಯಾವುದೇ ಮಾಹಿತಿ, ಅರ್ಜಿಯ ವಿವರಗಳು ಅಥವಾ ಇಲಾಖೆಯ ಮಾರ್ಗಸೂಚಿಗಳ ಕುರಿತು ಸಹಾಯ ಬೇಕಿದ್ದಲ್ಲಿ ಸಹಾಯಕ ನಿರ್ದೇಶಕರ ಕಛೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯಾದಗಿರಿ ಜಿಲ್ಲೆ ಇವರ ದೂರವಾಣಿ ಸಂಖ್ಯೆ: 08473-253721 ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಶತಾಯುಷಿ ಸ್ವಾತಂತ್ರ್ಯ ಹೋರಾಟಗಾರ ಸಂಗಪ್ಪ ಮಂಟೆ ಸನ್ಮಾನ; ರಾಷ್ಟ್ರಧ್ವಜ ದಿನ ಅರ್ಥಪೂರ್ಣ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ತಾಲೂಕಿನ ಕೊಡೇಕಲ್ ಗ್ರಾಮದಲ್ಲಿ ರಾಷ್ಟ್ರಧ್ವಜ ದಿನದ ಅಂಗವಾಗಿ ಶತಾಯುಷಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಸಂಗಪ್ಪ ಮಂಟೆ ಅವರ ನಿವಾಸದಲ್ಲಿ ರಾಷ್ಟ್ರಧ್ವಜ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಲ್ಲಿಸಿದ ಅಮೂಲ್ಯ ಸೇವೆಯನ್ನು ಸ್ಮರಿಸಿ, ಶ್ರೀ ಸಂಗಪ್ಪ ಮಂಟೆ ಅವರನ್ನು ಶಾಲು ಹೊದಿಸಿ, ಫಲ-ಪುಷ್ಪ ನೀಡಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಹಿರಿಯ ಹೋರಾಟಗಾರರನ್ನು ಗೌರವಿಸುವುದು ಯುವಜನತೆಗೆ ದೇಶಭಕ್ತಿ, ತ್ಯಾಗ ಮತ್ತು ರಾಷ್ಟ್ರಪ್ರೇಮದ ಮೌಲ್ಯಗಳನ್ನು ತಿಳಿಸುವ ಉತ್ತಮ ಪರಂಪರೆಯಾಗಿದೆ ಎಂದು ಗಣ್ಯರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬಸವರಾಜ ಗೋನಾಟ್ಲ, ಚಂದ್ರಶೇಖರ ಹೊಕ್ರಾಣಿ, ಪರಮೇಶ್ವರಯ್ಯ ಸ್ಥಾವರಮಠ, ರವಿಕುಮಾರ



ಬಂಟನೂರ, ಹಣಮಯ್ಯ ಕೆಂಡದ, ಬಸವರಾಜ ಕೆಂಡದ, ಸೋಮಶೇಖರ ಪಂಜಗಲ್, ಸಂಗಯ್ಯ ಮಂಟೆ, ಸಂಗು ಬೂದಿಹಾಳ ಹಾಗೂ ವಿದ್ಯಾರ್ಥಿನಿಯರಾದ ಅನ್ನಪೂರ್ಣ ಮತ್ತು ಸಂಧ್ಯಾ ಉಪಸ್ಥಿತರಿದ್ದು, ರಾಷ್ಟ್ರಧ್ವಜಕ್ಕೆ ಗೌರವ ನಮನ ಸಲ್ಲಿಸಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಆಶೀರ್ವಾದ ಪಡೆದರು.

# ರಾಷ್ಟ್ರಧ್ವಜ, ರಾಷ್ಟ್ರಗೀತೆ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಅಗತ್ಯ: ಬಸನಗೌಡ ಬಿರಾದಾರ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ವಿದ್ಯಾರ್ಥಿಗಳು ರಾಷ್ಟ್ರಧ್ವಜ, ರಾಷ್ಟ್ರಗೀತೆ ಹಾಗೂ ದೇಶದ ಇತಿಹಾಸದ ಬಗ್ಗೆ ಸಮಗ್ರ ಅರಿವು ಹೊಂದಿರಬೇಕು ಎಂದು ತಾಲೂಕು ಭಾರತ್ ಸೇವಾದಳದ ಅಧಿನಾಯಕ ಬಸನಗೌಡ ಬಿರಾದಾರ್ ಹೇಳಿದರು.

ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ರಾಷ್ಟ್ರಧ್ವಜ ಅಂಗೀಕಾರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1947ರ ಜುಲೈ 22ರಂದು ಭಾರತದ ರಾಷ್ಟ್ರೀಯ ಧ್ವಜವನ್ನು ಅಧಿಕೃತವಾಗಿ ಅಂಗೀಕರಿಸಲಾಯಿತು ಎಂದು ತಿಳಿಸಿದರು. ರಾಷ್ಟ್ರಧ್ವಜದಲ್ಲಿನ ಕೇಸರಿ ಬಣ್ಣ ತ್ಯಾಗ, ಬಿಳಿ ಬಣ್ಣ ಶಾಂತಿ, ಹಸಿರು ಬಣ್ಣ ಸಮೃದ್ಧಿ ಹಾಗೂ ಮಧ್ಯದಲ್ಲಿರುವ ಅಶೋಕ ಚಕ್ರ ನಿರಂತರ ಪ್ರಗತಿಯ ಸಂಕೇತವಾಗಿದೆ ಎಂದು ವಿವರಿಸಿದರು. ವಿದ್ಯಾರ್ಥಿಗಳು ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ದೇಶದ ಇತಿಹಾಸದ ಬಗ್ಗೆ ಹೆಚ್ಚಿನ ಅರಿವು ಬೆಳೆಸಿಕೊಂಡು ದೇಶಭಕ್ತಿ ಹಾಗೂ



ರಾಷ್ಟ್ರಾಭಿಮಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯ ವಿಟ್ಠಲ್ ಬಿ. ಚೌಹಾಣ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವೈಕ್ಯತೆ, ದೇಶಪ್ರೇಮ ಮತ್ತು ರಾಷ್ಟ್ರಸೇವೆಯ ಮನೋಭಾವ ಬೆಳೆಯಬೇಕು. ವಿದ್ಯಾರ್ಥಿ ಜೀವನದಲ್ಲಿಯೇ ದೇಶಸೇವೆಯ ಸಂಕಲ್ಪ ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀಶರಣಗೌಡ ಬಾನಾಳ್, ಭೀಮಣ್ಣ ವಾಲ್ಮೀಕಿ, ತಮ್ಮಣ್ಣ ಗುಡಿಹಾಳ್, ಶ್ರೀಮಶಾಕ ಯಾಳಗಿ, ನಿಂಗಪ್ಪ ಚೌಹಾಣ್, ಗುರುರಾಜ್ ಜೋಶಿ, ಸೋಮನಗೌಡ ಬಳವಾಟ, ವಿಜಯಲಕ್ಷ್ಮಿ ಕುಂಬಾರ್, ಲಾಲ್‌ಬಿಎಂ ಖಾಜಿ, ಲಲಿತಾಬಾಯಿ ಮಠ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ತಾಲೂಕು ಭಾರತ್ ಸೇವಾದಳದ ಕಾರ್ಯದರ್ಶಿ ನಾಗನಗೌಡ ಪಾಟೀಲ್ ನಿರೂಪಿಸಿ ವಂದಿಸಿದರು.

# 750 ಮಂದಿಗೆ ನೇತ್ರ ತಪಾಸಣೆ, 250 ಮಂದಿಗೆ ಉಚಿತ ಶಸ್ತ್ರಚಿಕಿತ್ಸೆ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಪಟ್ಟಣದ ನೀಲಕಂಠೇಶ್ವರ ದೇವಾಲಯ ಆವರಣದಲ್ಲಿ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಯಾದಗಿರಿ, ತಾಲೂಕು ಆರೋಗ್ಯ ಇಲಾಖೆ ಹಾಗೂ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಮಂಗಳವಾರ ಉಚಿತ ನೇತ್ರ ತಪಾಸಣೆ, ನೇತ್ರ ಶಸ್ತ್ರಚಿಕಿತ್ಸೆ ಮತ್ತು ರಕ್ತದಾನ ಶಿಬಿರ ನಡೆಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಎನ್. ದಂಡಿನ್ ಅವರ ಜನ್ಮದಿನದ ಅಂಗವಾಗಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ನಾಗಣ್ಣ ಸಾಹುಕಾರ ದಂಡಿನ್ ಅವರ ನೇತೃತ್ವದಲ್ಲಿ ಶಿಬಿರ ಆಯೋಜಿಸಲಾಗಿತ್ತು. ತಾಲೂಕು ವೈದ್ಯಾಧಿಕಾರಿ ಡಾ. ರಾಜಾ ವೆಂಕಪ್ಪನಾಯಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಿಬಿರದಲ್ಲಿ ಮಾತನಾಡಿದ ಡಾ. ರಾಜಾ ವೆಂಕಪ್ಪನಾಯಕ, ಗ್ರಾಮೀಣ ಭಾಗದ ಜನರಿಗೆ ಆರೋಗ್ಯ ಸೇವೆಗಳನ್ನು ತಲುಪಿಸುವಲ್ಲಿ ಇಂತಹ ಉಚಿತ ವೈದ್ಯಕೀಯ ಶಿಬಿರಗಳು ಅತ್ಯಂತ ಉಪಯುಕ್ತವಾಗಿವೆ. ವಿಶೇಷವಾಗಿ ಕಣ್ಣಿನ ಸಮಸ್ಯೆಯಿಂದ ಬಳಲುತ್ತಿರುವ ವಯೋವೃದ್ಧರಿಗೆ ಉಚಿತ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ವ್ಯವಸ್ಥೆ ಕಲ್ಪಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಎನ್. ದಂಡಿನ್ ಮಾತನಾಡಿ, ಬಡವರು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಗುಣಮಟ್ಟದ ಆರೋಗ್ಯ ಸೇವೆ ದೊರೆಯಬೇಕು ಎಂಬ ಉದ್ದೇಶದಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ. ಜನಸೇವೆ ಮತ್ತು ಮಾನವೀಯ ಮೌಲ್ಯಗಳೇ ನಮ್ಮ ಕಾರ್ಯಚಟುವಟಿಕೆಗಳ ಮುಖ್ಯ ಗುರಿಯಾಗಿದ್ದು, ಯಾರೂ ಹಣದ ಕೊರತೆಯಿಂದ ಚಿಕಿತ್ಸೆಯಿಂದ ವಂಚಿತರಾಗಬಾರದು ಎಂದು ಹೇಳಿದರು.

ಕಳೆದ ವರ್ಷ ಇದೇ ಶಿಬಿರದ ಮೂಲಕ 550 ಮಂದಿಗೆ ಉಚಿತ ನೇತ್ರ ಶಸ್ತ್ರಚಿಕಿತ್ಸೆ ಮಾಡಿಸಲಾಗಿತ್ತು. ಈ ಬಾರಿ 750 ಮಂದಿ ಕಣ್ಣಿನ ತಪಾಸಣೆ ಮಾಡಿಸಿಕೊಂಡಿದ್ದು, 50 ಮಂದಿ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು. ತಪಾಸಣೆಯ ಬಳಿಕ 250 ಮಂದಿಯನ್ನು ಉಚಿತ ನೇತ್ರ ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಿ ವಿಶೇಷ ಬಸ್ ಮೂಲಕ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಗೆ ರವಾನಿಸಲಾಯಿತು.

ಈ ಸಂದರ್ಭದಲ್ಲಿ ನಾಗಣ್ಣ ಸಾಹುಕಾರ ದಂಡಿನ್, ರಾಜಾ ಕುಮಾರನಾಯಕ, ಬಸವರಾಜ್ ಮಲಗಲದಿನ್ನಿ, ವಿರೇಶ ಸಾಹುಕಾರ ಚಿಂಚೋಳಿ, ಶರಣು ದಂಡಿನ್, ಆರ್.ಎಂ. ರೇವಡಿ, ಸಿದ್ರಾಮಪ್ಪ ಮುದಗಲ್, ರಾಚಪ್ಪ ಪಟ್ಟಣಶೆಟ್ಟಿ, ಬಸವರಾಜ ಬಳಿ, ಆರ್.ಸಿ. ಪಾಟೀಲ, ಶರಣಗೌಡ ಪಾಟೀಲ್ ವಜ್ಜಲ್, ತಿಪ್ಪಣ್ಣ ಚಂದಾ, ಬಾಪುಗೌಡ ಪಾಟೀಲ್, ಗುಂಡು ಅಂಗಡಿ, ರಮೇಶ ವಾಲಿ, ಸ್ಥಳೀಯ ವೈದ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

### ಬಡವರ ಬದುಕಿಗೆ ಬೆಳಕಾಗಲಿ ಎಂಬುದೇ ನಮ್ಮ ಆಶಯ



"ಜನ್ಮದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರ ಆಯೋಜಿಸುವುದರಿಂದ ಬಡವರು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಹೊಸ ಬೆಳಕು ದೊರೆಯುತ್ತದೆ. ಇದರಿಂದ ಅವರು ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗುತ್ತದೆ. ಜೊತೆಗೆ ರಕ್ತದಾನ ಶಿಬಿರದಿಂದ ಅಗತ್ಯವಿರುವ ಅನೇಕ ರೋಗಿಗಳ ಜೀವ ಉಳಿಸಲು ನೆರವಾಗುತ್ತದೆ. ಸಮಾಜಮುಖಿ ಸೇವಾ ಕಾರ್ಯಕ್ರಮಗಳನ್ನು ಮುಂದೆಯೂ ನಿರಂತರವಾಗಿ ಹಮ್ಮಿಕೊಳ್ಳಲಾಗುವುದು."

– ಚಂದ್ರಶೇಖರ ಎನ್. ದಂಡಿನ್
ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಹುಣಸಗಿ

# ಚರಂಡಿ ಅವ್ಯವಸ್ಥೆಯಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಅಧಿಕಾರಿಗಳ ನಿರ್ಲಕ್ಷ್ಯ, ಸಾರ್ವಜನಿಕರಿಗೆ ಪರದಾಟ



ಸೈದಾಪುರ , ಜು 22: ಗ್ರಾಮ ಸೈದಾಪುರದ ತಿಮ್ಮವ್ವ ಮನೆ ಯಿಂದ ಗಂಗಮ್ಮ ನ ಮನೆಯವರೆಗೆ ಚರಂಡಿಗಳು ಸ್ವಚ್ಛತೆ ಕಾಣದೆ ಕಸದ ರಾಶಿ ಹಾಗೂ ಮಣ್ಣಿನಿಂದ ತುಂಬಿಕೊಂಡಿದ್ದು, ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದೆ. ಇದರಿಂದ ಸಾರ್ವಜನಿಕರು,

> ನಮ್ಮ ಗ್ರಾಮದಲ್ಲಿ ಚರಂಡಿಯಿಂದ ತೀವ್ರ ತೊಂದರೆಯಾಗಿದ್ದು ಇದರಿಂದ ಸಾರ್ವಜನಿಕರಿಗೆ ನಡೆದಾಡಲು, ವೃದ್ಧರಿಗೆ ತಿರುಗಾಡಲು, ಮಕ್ಕಳಿಗೆ ಶಾಲೆಗೆ ಹೋಗಲು ತುಂಬಾ ಕಷ್ಟಕರ ಸಮಸ್ತ ಎದುರಾಗಿದೆ ಚರಂಡಿ ಸ್ವಚ್ಛ ಮಾಡಿ ಎಂದು ಎಷ್ಟೋ ಬಾರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಮಾಡಿದರು, ಸ್ಪಂದನೆ ಮಾಡುತ್ತಿಲ್ಲ. ಮಳೆಗಾಲ ಶುರುವಾಗಿರುವುದರಿಂದ ದುರ್ವಾಸನೆಗೆ ಹಲವು ರೋಗಗಳಿಗೆ ಹಾದಿ ಮಾಡಿಕೊಟ್ಟ ಹಾಗೆ ಇದೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದರ ಬಗ್ಗೆ ಗಮನಹರಿಸಿ, ಸ್ವಚ್ಛತೆ ಮತ್ತು ರಸ್ತೆಯನ್ನು ನಿರ್ಮಿಸಿ ಕೊಡಬೇಕೆಂದು ಒತ್ತಾಯ.
>
> **ರಾಜು ಧೋತ್ರೆ ಸೈದಾಪುರ ಗ್ರಾಮಸ್ಥರು.**

ವಾಹನ ಸವಾರರು ಹಾಗೂ ಶಾಲಾ ಮಕ್ಕಳು ನಿತ್ಯ ಸಂಚಾರಕ್ಕೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಚರಂಡಿ ಸ್ವಚ್ಛತೆ ನಡೆಸದ ಪರಿಣಾಮ ದುರ್ವಾಸನೆ ಹರಡುತ್ತಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಇದರಿಂದ ಡೆಂಗ್ಯೂ, ಮಲೇರಿಯಾ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ ಎಂದು ಸ್ಥಳೀಯ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಈ ಸಮಸ್ಯೆಯನ್ನು ತಕ್ಷಣವೇ ಪರಿಷ್ಕರಿಸಿ, ಚರಂಡಿಗಳ ಸ್ವಚ್ಛತೆ ನಡೆಸಿ ಸಾರ್ವಜನಿಕರಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ

# ಕಲುಷಿತ ನೀರಿನ ಮಧ್ಯೆ ಮಕ್ಕಳ ವಿದ್ಯಾಭ್ಯಾಸ; ಕೊಂಕಲ ಶಾಲೆಗೆ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಸಮತಾ ಸೈನಿಕ ದಳ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜು. 22: ಮಕ್ಕಳಿಗೆ ಸ್ವಚ್ಛ, ಸುರಕ್ಷಿತ ಹಾಗೂ ಆರೋಗ್ಯಕರ ಶೈಕ್ಷಣಿಕ ವಾತಾವರಣ ಕಲ್ಪಿಸಬೇಕಾದ ಸರ್ಕಾರಿ ಶಾಲೆಯೇ ಇಂದು ಕಲುಷಿತ ನೀರಿನ ಮಧ್ಯೆ ವಿದ್ಯಾರ್ಥಿಗಳು ವಿದ್ಯಾಭ್ಯಾಸ ನಡೆಸುವ ದುಃಸ್ಥಿತಿಗೆ ತಲುಪಿರುವ ಘಟನೆ ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಕೊಂಕಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಂಡುಬಂದಿದೆ. ಶಾಲಾ ಆವರಣದಲ್ಲಿ ಕಲುಷಿತ ನೀರು ನಿಂತಿರುವುದರಿಂದ ವಿದ್ಯಾರ್ಥಿಗಳು ಪ್ರತಿನಿತ್ಯ ತೀವ್ರ ತೊಂದರೆ ಅನುಭವಿಸುತ್ತಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಮಳೆಗಾಲದ ಸಂದರ್ಭದಲ್ಲಿ ಈ ಸಮಸ್ಯೆ ಮತ್ತಷ್ಟು ಗಂಭೀರ ಸ್ವರೂಪ ಪಡೆದುಕೊಂಡಿದ್ದು, ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಕ್ಷಣದ ಮೇಲೂ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಮತಾ ಸೈನಿಕ ದಳದ ಯಾದಗಿರಿ ಜಿಲ್ಲಾ ಅಧ್ಯಕ್ಷ ಹತ್ತಿಗೂಡೂರ್ ಶರಣರೆಡ್ಡಿ, ಶಾಲಾ ಆವರಣದಲ್ಲಿ ಕೂಡಲೇ ಸ್ವಚ್ಛತಾ ಕಾರ್ಯ ಕೈಗೊಂಡು ಕಲುಷಿತ ನೀರನ್ನು ತೆರವುಗೊಳಿಸುವುದರ ಜೊತೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ. ಶಿಕ್ಷಣ ಇಲಾಖೆ, ಗ್ರಾಮ ಪಂಚಾಯಿತಿ ಹಾಗೂ ಸಂಬಂಧಿಸಿದ



ಆಡಳಿತಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಮಕ್ಕಳಿಗೆ ಸುರಕ್ಷಿತ ಹಾಗೂ ಆರೋಗ್ಯಕರ ಕಲಿಕಾ ವಾತಾವರಣ ಕಲ್ಪಿಸುವುದು ಸರ್ಕಾರ ಮತ್ತು ಆಡಳಿತದ ಮೊದಲ ಆದ್ಯತೆಯಾಗಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಸಮಸ್ಯೆಯನ್ನು ನಿರ್ಲಕ್ಷಿಸಿದರೆ ಸಮತಾ ಸೈನಿಕ ದಳವು ಪೋಷಕರು ಹಾಗೂ ಸಾರ್ವಜನಿಕರೊಂದಿಗೆ ಸೇರಿ ಹಂತ ಹಂತವಾಗಿ ಉಗ್ರ ಹೋರಾಟವನ್ನು ರೂಪಿಸಬೇಕಾಗುತ್ತದೆ. ಇದಕ್ಕೆ ಸಂಪೂರ್ಣ ಹೊಣೆ ಸಂಬಂಧಪಟ್ಟ ಅಧಿಕಾರಿಗಳದ್ದೇ ಆಗಿರುತ್ತದೆ ಎಂದು ಹತ್ತಿಗೂಡೂರ್ ಶರಣರೆಡ್ಡಿ ಎಚ್ಚರಿಕೆ ನೀಡಿದ್ದಾರೆ.

# ಹುಮನಾಬಾದ ನಗರಸಭೆ ಪ್ರಕಟಣೆ

ಈ ಮೂಲಕ ಹುಮನಾಬಾದ ಪಟ್ಟಣದ ಸಾರ್ವಜನಿಕರಿಗೆ ತಿಳಿಯಪಡಿಸುವುದೆನೆಂದರೆ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ 2026 SIR ನಮೂನೆಯನ್ನು BLO ಗಳು ತಮಗೆ ನೀಡಿರುತ್ತಾರೆ, ಪ್ರತಿಯೊಬ್ಬ ನಾಗರಿಕರು SIR ನಮೂನೆಯನ್ನು ಸರಿಯಾಗಿ ಭರ್ತಿ ಮಾಡಿ ಸಂಬಂಧಪಟ್ಟ BLO ಗಳಿಗೆ ನೀಡಬೇಕು.

ತಮಗೆ ನೀಡಿರುವ ಫಾರಂ ತುಂಬಲು ತೊಂದರೆಯಾದಲ್ಲಿ ಃಐಔ ಗಳಿಗೆ ಸಂಪರ್ಕಿಸಿ ಃಐಔ ಗಳು ಖುದ್ದು ಫಾರಂ ತುಂಬಿರುತ್ತಾರೆ, ಆದರೆ ಯಾವುದೇ ಕಾರಣಕ್ಕೆ ಫಾರಂ ಮನೆಯಲ್ಲಿ ಇಟ್ಟುಕೊಳ್ಳಬಾರದು, ತಪ್ಪಿದಲ್ಲಿ ಮತದಾರರ ಪಟ್ಟಿಯಿಂದ ನಿಮ್ಮ ಹೆಸರು ರದ್ದಾಗುವ ಸಾಧ್ಯತೆ ಇರುತ್ತದೆ ಎಂದು, ನಗರಸಭೆಯ ಪೌರಾಯುಕ್ತರು ಈ ಪ್ರಕಟಣೆ ಮೂಲಕ ತಿಳಿಸಿರುತ್ತಾರೆ.

# ಧನಸಹಾಯಕ್ಕಾಗಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜು.22-ಕಲಬುರಗಿ ಜಿಲ್ಲೆಯಲ್ಲಿ ಪತ್ರಿಕೋದ್ಯಮದಲಿè (Journalism) ಪದವಿ ಪಡೆದ ಪರಿಶಿಷ್ಟ ಜಾತಿ ನಿರುದ್ಯೋಗಿ ಯುವಕ-ಯುವತಿಯರು ಎಲೆಕ್ಟ್ರಾನಿಕ್ ಹಾಗೂ ಡಿಜಿಟಲ್ ಮಾಧ್ಯಮದಲ್ಲಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಉದ್ಯಮವನ್ನು ಸ್ಥಾಪಿಸಲು ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# 24ರಂದು ನೇರ ಸಂದರ್ಶನ

ಕಲಬುರಗಿ:ಜು.22-ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಇದೇ ಜುಲೈ 24 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕಲಬುರಗಿ ಸರ್ಕಾರಿ ಐಟಿಐ ಉದ್ಯೋಗ ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸ್ವತಂತ್ರ ಮೈಕ್ರೊ ಫೈನಾನ್‌ದಲ್ಲಿ ಫೀಲ್ಡ್ ಆಫೀಸರ್ಸ್ / ಕಲೆಕ್ಷನ್ ಆಫೀಸರ್ ಹುದ್ದೆಗೆ ಪಿಯುಸಿ / ಐಟಿಐ/ ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 25 ವರ್ಷದೊಳಗಿರಬೇಕು. ಎ.ಆರ್.ಕೆನೆಕ್ಸ್‌ದಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್/ಟೆಕ್ನಿಷಿಯನ್ ಹುದ್ದೆಗೆ ಐಟಿಐ/ಡಿಪ್ಲೋಮಾ/ಯಾವುದೇ ಪದವಿ ಪಾಸಾಗಿರಬೇಕು. ಟಾಟಾ ಕ್ಯಾಪಿಟಲ್‌ದಲ್ಲಿ ಫೀಲ್ಡ್ ಆಫೀಸರ್ಸ್/ ಕಲೆಕ್ಷನ್ ಆಫೀಸರ್ ಹುದ್ದೆಗೆ ಪಿಯುಸಿ /ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 30 ವರ್ಷದೊಳಗಿರಬೇಕು.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ವಿದ್ಯಾಭ್ಯಾಸದ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್, ರೆಸ್ಯೂಮ್ (ಬಯೋಡೆಟಾ) ಭಾವಚಿತ್ರಗಳು ಹಾಗೂ ಆಧಾರ್‌ಕಾರ್ಡ್‌ದೊಂದಿಗೆ ಮೇಲ್ಕಂಡ ದಿನದಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬೇಕು. ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆಯನ್ನು ನೀಡಲಾಗುವುದಿಲ್ಲ.

# ಆ.12 ರಿಂದ ಶ್ರಾವಣ ಮಾಸದ ಪ್ರವಚನ




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

2026ನೇ ಸಾಲಿನಲ್ಲಿ ನಗರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ನಡೆಯಲಿರುವ ಶ್ರಾವಣ ಮಾಸದ ಪ್ರವಚನ ಸೇವಾ ಸಮಿತಿ ಅಧ್ಯಕ್ಷೆಯಾಗಿ ನಗರದ ನಿವಾಸಿ ಮತ್ತು ಶ್ರೀಮಠದ ಪರಮ ಭಕ್ತರು ಆಗಿರುವ ಸ್ವರೂಪಾ ಬಂಡೆಪ್ಪ ಬಳತೆ ಅವರನ್ನು ಆಯ್ಕೆ ಮಾಡಲಾಗಿದೆ.ನಗರದ ಚನ್ನಬಸವಾಶ್ರಮ ಪರಿಸರದಲ್ಲಿ ಮಂಗಳವಾರ ನಡೆದ ಶ್ರಾವಣ ಮಾಸದ ಪೂರ್ವಭಾವಿ ಸಭೆಯಲ್ಲಿ ಸ್ವರೂಪಾ ಬಂಡೆಪ್ಪ ಬಳತೆ ಅವರನ್ನು ಈ ಬಾರಿಯ ಪ್ರವಚನ ಸೇವಾ ಸಮಿತಿಯ ಅಧ್ಯಕ್ಷೆಯನ್ನಾಗಿ ಆಯ್ಕೆಮಾಡಿರುವುದಾಗಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದರು.ನಂತರ ಪರಮ ಪೂಜ್ಯರು ಅವರನ್ನು ಸತ್ಕರಿಸಿ, ನಗರದಲ್ಲಿ ಪ್ರತಿವರ್ಷದಂತೆ ಈ ಬಾರಿಯು ಶ್ರಾವಣ ಮಾಸದ ಪ್ರವಚನ ಹಮ್ಮಿಕೊಳ್ಳಲಾಗಿದೆ. ಕಳೆದ ನಾಲ್ಕು ದಶಕಗಳಿಂದ ಪರಮ ಪೂಜ್ಯ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅವರು ಶ್ರಾವಣ ಮಾಸದಲ್ಲಿ ತಿಂಗಳ ಪರ್ಯಂತ ಪ್ರವಚನದ ಮೂಲಕ ವಿವಿಧ ಶರಣರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.ಈ ಬಾರಿಯು ನಗರದ ಚನ್ನಬಸವಾಶ್ರಮ ಪರಿಸರದಲ್ಲಿ ಬರುವ ಆ.12 ರಿಂದ ಪರಮ ಪೂಜ್ಯರಿಂದ ತಿಂಗಳ ಪರ್ಯಂತ ಪ್ರವಚನದ ಮೂಲಕ ಜ್ಞಾನ ದಾಸೋಹ ನಡೆಯಲಿದೆ. ಹಾಗಾಗಿ ನಗರ ಸೇರಿ ಸುತ್ತಮುತ್ತಲಿನ ಗ್ರಾಮೀಣ ಭಾಗದ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪರಮ ಪೂಜ್ಯರ ಅಮೃತ ವಾಣಿಯನ್ನು ಆಲಿಸಿ ತಮ್ಮ ಬದುಕನ್ನು ಸುಂದರವಾಗಿ ರೂಪಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.ಸಾಹಿತಿ ರಾಜು ಜುಬರೆ ಪ್ರಾಸ್ತಾವಿಕವಾಗಿ ಮಾತನಾಡಿದರು.ಈ ಸಂದರ್ಭದಲ್ಲಿ ಹಿರಿಯ ಜೀವಿ ವಿಶ್ವನಾಥಪ್ಪ ಬಿರಾದಾರ, ನಿವೃತ್ತ ಪ್ರಾಚಾರ್ಯ ಮಲ್ಲಮ್ಮ ಆರ್ ಪಾಟೀಲ್ ಶ್ರಾವಣ ಮಾಸ ಪ್ರವಚನದ ನಿಕಟ ಪೂರ್ವ ಅಧ್ಯಕ್ಷ ಗುಂಡಪ್ಪ ಸಂಗಮಕರ್ ಸೇರಿದಂತೆ ಹಲವರು ಇದ್ದರು.

> ಡಾ.ಬಸವಲಿಂಗ ಪಟ್ಟದ್ದೇವರು ಕಳೆದ ನಾಲ್ಕು ದಶಕಗಳಿಂದ ನಿರಂತರವಾಗಿ ನಡೆಸಿ ಕೊಡುತ್ತಿರುವ ಶ್ರಾವಣ ಮಾಸ ಪ್ರವಚನದಿಂದ ಸಾವಿರಾರು ಭಕ್ತರು ತಮ್ಮ ಜೀವನವನ್ನು ಸುಧಾರಿಸಿ ಕೊಂಡಿ–ದ್ದಾರೆ. ಈ ವರ್ಷದ ಶ್ರಾವಣ ಮಾಸದ ಪ್ರವಚನ ಸೇವಾ ಸಮಿತಿಗೆ ಶ್ರೀಮಠದ ಪರಮ ಭಕ್ತರು ಆಗಿರುವ ಸ್ವರೂಪಾ ಬಂಡೆಪ್ಪ ಬಳತೆ ಅವರನ್ನು ಆಯ್ಕೆ ಮಾಡಲಾಗಿದೆ. ಎಲ್ಲ ಸದ್ಭಕ್ತರು ಸಹಕರಿಸಿ ಪ್ರವಚನವನ್ನು ಯಶಸ್ವಿಗೊಳೊಸಬೇಕು.
>
> **– ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

# ಜಂತರ್ ಮಂತರ್‌ನಲ್ಲಿ ಪ್ರತಿಭಟನಾಕಾರರ ಮೇಲೆ ದೌರ್ಜನ್ಯ: ಮರಿಯಪ್ಪ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಜು.22.ನೀಟ್ ಪರೀಕ್ಷೆಯ ಅಕ್ರಮವನ್ನು ಖಂಡಿಸಿ ಹಾಗೂ ನೈತಿಕ ಹೊಣೆ ಹೊತ್ತು ಕೇಂದ್ರಶಿಕ್ಷಣ ಸಚಿವ ಧರ್ಮೇಂದ್ರಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ನವದೆಹಲಿಯ ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳು ಮತ್ತು ಯುವಜನರ ಮೇಲೆ ಪೊಲೀಸರು ನಡೆಸಿರುವ ಅಮಾನವೀಯ ದಾಳಿಯು ದೇಶದ ಇತಿಹಾಸದಲ್ಲಿಯೇ ಕಪ್ಪುಚುಕ್ಕೆ ಎಂದು ದಸಂಸ ತಾಲೂಕು ಅಧ್ಯಕ್ಷರಾದ ಮರಿಯಪ್ಪ(ಚಿರು) ತೀವ್ರವಾಗಿ ಖಂಡಿಸಿದರು.ಈ ಕುರಿತು ಬುಧವಾರ ಹೇಳಿಕೆ ನೀಡಿರುವ ಅವರು, ನೀಟ್ ಪರೀ–ಕ್ಷೆಯ ಅವ್ಯವಹಾರದಿಂದಾಗಿ ದೇಶಾದ್ಯಂತ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾ–ರೆ ಮತ್ತು 22 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಮರುಪರೀಕ್ಷೆಯಿಂದ ತೊಂದರೆಗೀಡಾಗಿದ್ದಾರೆ ಎಂದು ಆಕ್ರೋಶವ್ಯಕ್ತಪಡಿಸಿದರು.ಶಾಂತಿಯುತ ಪ್ರತಿಭಟನಾಕಾರರ ಮೇಲೆ ಲಾಠಿಚಾರ್ಜ್ ನಡೆಸಿ, ಅಶ್ರುವಾಯು ಸಿಡಿಸಿ, ರಸ್ತೆಯಲ್ಲಿ ರಕ್ತಹರಿಸಿರುವುದು ಕೇಂದ್ರ ಸರ್ಕಾರದ ಕ್ರೌರ್ಯಕ್ಕೆ ಸಾಕ್ಷಿಯಾಗಿದೆ. ದೆಹಲಿ ಪೊಲೀಸರೊಂದಿಗೆ ಕೆಲ ಬಾಡಿಗೆ ಗೂಂಡಾಗಳು ಯುವ ವಿದ್ಯಾರ್ಥಿನಿಯರ ಮೇಲೆ ಮನಸೋಇಚ್ಛೆ ದಾಳಿ ನಡೆಸಿರುವುದು ಬಿಜೆಪಿ ಸರ್ಕಾರದ ವಾಮ ಮಾರ್ಗಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಆರೋಪಿಸಿದರು.

ಪ್ರಧಾನಿಯವರ ಮೌನವನ್ನು ಖಂಡಿಸಿ ಧರಣಿನಡೆಸಿದ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಬಂಧಿಸಿರುವುದು ಕೇಂದ್ರ ಸರ್ಕಾರಕ್ಕೆ ಸಂವಿಧಾನ ಮತ್ತು ಕಾನೂನಿನ ಬಗ್ಗೆ ಗೌರವವಿಲ್ಲ ಎಂಬುದನ್ನುತೋರಿಸುತ್ತದೆ. ಪ್ರಶ್ನೆ ಮಾಡುವವರ ಮೇಲೆ ದರ್ಪ ಮತ್ತು ದೌರ್ಜನ್ಯ ಎಸಗುವ ಮೂಲಕ ಪ್ರಜಾತಂತ್ರದ ಮೌಲ್ಯಗಳನ್ನು ಹತ್ತಿಕ್ಕಲಾಗುತ್ತಿದೆ. ಇಡೀದೇಶವನ್ನು ಖಾಸಗೀಕರಣಗೊಳಿಸುವ ಹುನ್ನಾರದಲ್ಲಿ ಕೇಂದ್ರ ಸರ್ಕಾರವು ದೇಶದ ಶೈಕ್ಷಣಿಕ ವ್ಯವಸ್ಥೆಯನ್ನೇ ಬಲಿ ಕೊಡುತ್ತಿದೆ ಎಂದು ಹೇಳಿದರು.ಈ ವೇಳೆ ತಾಲೂಕು ಉಪಾಧ್ಯಕ್ಷರಾದ ಬಸವರಾಜ ಗುಂಜಳ್ಳಿ, ನಾಗರಾಜ ಡಿಶ್, ಹೊಟ್ಟೆ ನಾಗೇಶ, ಬಸವರಾಜ, ಚಂದ್ರು, ಮೌಲಪ್ಪ, ಮಲ್ಲಿಕಾರ್ಜುನ ಇತರರು ಇದ್ದರು.

# 23 ಹಾಗೂ 24 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಕಲಬುರಗಿ:ಜು.22–ಕಲಬುರಗಿ ನಗರಕ್ಕೆನೀರು ಸರಬರಾಜು ಮಾಡುವ ಭೀಮಾ ನದಿಯ ಕೋಟನೂರು(ಡಿ) ಪಂಪ್‌ಹೌಸಿನ ಮಾನಿಫೋಲ್ಡ್‌ನಲ್ಲಿ ಸೋರಿಕೆಯಾಗುತ್ತಿರುವುದರಿಂದತುರ್ತು ದುರಸ್ತಿಕಾಮಗಾರಿಕೈಗೊಳ್ಳಲಾಗುತ್ತಿದೆ. ಇದರ ಹಿನ್ನೆಲೆಯಲ್ಲಿ ಇದೇ ಜುಲೈ 23 ಹಾಗೂ 24 ರಂದು ಭೀಮಾ ನದಿಯಿಂದ ಸರಬರಾಜುವಾಗುತ್ತಿರುವ ಕೋಟನೂರುಹಾಗೂಶೋರಗುಂಬಜ್ ನೀರು ಶುದ್ಧೀಕರಣ ಘಟಕದಿಂದ ಸರಬರಾಜಾಗುವ ಈ ಕೆಳಕಂಡ ಬಡಾವಣೆಗಳಲ್ಲಿನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದ್ದು, ನಗರದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆಯುಡಬ್ಲ್ಯೂಎಸ್‌ಎಂಪಿ–ಕೆಯುಐಡಿಎಫ್‌ಸಿ ಹಾಗೂ ಮೆ॥ ಎಲ್ & ಟಿ ಲಿಮಿಟೆಡ್ ಇವರೊಂದಿಗೆ ಸಹಕರಿಸಬೇಕೆಂದು ಕಲಬುರಗಿ ಕೆಯುಡಬ್ಲ್ಯೂಎಸ್‌ಎಂಪಿ, ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ತಿಳಿಸಿದ್ದಾರೆ. ಬಡಾವಣೆಗಳ ವಿವರ ಇಂತಿದೆ: ಬಿದ್ದಾಪೂರ,ರಾಯರಗುಡ್ಡಿ,ವಿಶಾಲ ನಗರ, ಅಂಬಿಕಾ ನಗರ, ಪಿಂಪ್ಲಿ ಟೆಂಪಲ್, ಪಿ ಆಂಡ್ ಟಿ ಕಾಲೋನಿ, ವಿದ್ಯಾನಗರ, ಯಶವಂತ ನಗರ, ಕರುಣೇಶ್ವರ ನಗರ, ಗಣೇಶ ನಗರ, ಭಾಗ್ಯವಂತಿ ನಗರ, ದೇವಾ ನಗರ, ತಿಲಕ್ಕ ನಗರ, ಬನಶಂಕರಿ ನಗರ, ಹರಿ ನಗರ, ಗಾಬರೆ ಲೇಔಟ್, ಜೆಮಶೆಟ್ಟಿ ನಗರ, ಕೃಷ್ಣ ನಗರ, ತಾರಫೈಲ್, ಉದಯ ನಗರ, ಎನ್‌ಜಿಓ ಕಾಲೋನಿ, ಜೇವರ್ಗಿ ಕಾಲೋನಿ, ಮಾಕಾ ಲೇಔಟ್, ಸಂತೋಷ ಕಾಲೋನಿ, ಪಿಡಬ್ಲ್ಯೂಡಿ ಕಾಲೋನಿ, ಬ್ಯಾಂಕ್ ಕಾಲೋನಿ, ಬಾಲಾಜಿ ನಗರ, ರೆಹಮತ್ ನಗರ, ಸಂಪಿಗೆ ನಗರ, ಬುದ್ಧ ನಗರ, ರೇವಣಸಿದ್ದೇಶ್ವರ ಕಾಲೋನಿ, ಸಾಯಿ ನಗರ, ಓಜಾ ಲೇಔಟ್, ಸ್ವಾಮಿ ವಿವೇಕಾನಂದ ನಗರ, ಪ್ರಗತಿ ಕಾಲೋನಿ, ಸಿಐಬಿ ಕಾಲೋನಿ, ಶಕ್ತಿ ನಗರ, ಸ್ಟೇಷನ್ ಬಜಾರ, ಐವಾನ್ ಶಾಹಿ, ಯತ್ತೀಮ್ ಖಾನಾ, ಶಾಂತಿ ನಗರ, ವಿಠ್ಠಲ ನಗರ, ಖೂಬಾ ಪ್ಲಾಟ್, ಮಿಜಬಾ ನಗರ, ಅಜಮಿರ್ ಕಾಲೋನಿ, ಕರೀಂನಗರ, ಗಾಲಿಫ್ ಕಾಲೋನಿ, ಮಹಮ್ಮದಚೌಕ್, ಖಾದಿಲ್ ಚೌಕ್, ಶಿವನಗರ, ಸಿದ್ರಮೇಶ್ವರ ಕಾಲೋನಿ, ನಬಿ ಕಾಲೋನಿ, ಶೇಖ ರೋಜಾ, ಪ್ರದೇಶಗಳು.

# ಸಂಭ್ರಮದ ಶ್ರೀ ಸುಂಕಲಮ್ಮ ದೇವಿ ಉತ್ಸವ

• ಮಲ್ಲಮ್ಮ ನುಡಿ ವಾರ್ತೆಮುದಗಲ್




ಬಂಜಾರ ಸಮಾಜದ ಆರಾಧ್ಯ ದೇವತೆ ಶ್ರೀ ಸುಂಕಲಮ್ಮ ದೇವಿ ಉತ್ಸವವನ್ನು ಮಂಗಳವಾರ ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಉತ್ಸವದ ಅಂಗವಾಗಿ ವಿಶೇಷ ಪೂಜೆ, ಧಾರ್ಮಿಕ ವಿಧಿವಿಧಾನಗಳು ನಡೆಯಿತು.

ಆಶಿಹಾಳ ತಾಂಡಾ, ಬಯ್ಯಾಪೂರತಾಂಡಾ, ಖೈರವಾಡಗಿತಾಂಡಾ,ಬಗಡಿತಾಂಡಾ,ವೆಣ್ಣಪ್ಪನತಾಂಡಾ ,ದೇಸಾಯಿಭೋಗಾಪೂರ ತಾಂಡಾಗಳು, ಕೆಂಪತಿಪ್ಪಣ್ಣನತಾಂಡಾ, ಕಿಲಾರಹಟ್ಟಿತಾಂಡಾ ಸೇರಿದಂತೆ ಸೂತ್ತಲಿನ ಹಲವಾರು ತಾಂಡಾಗಳಲ್ಲಿ ಮಂಗಳವಾರ ಸಂಜೆ ತಾಂಡಾಗಳ ಹೊರವಲಯದಲ್ಲಿ ಸ್ಥಾಪಿಸಲಾದ ಸುಂಕಲಮ್ಮ ದೇವಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ನಂತರ ತಾಂಡಾಗಳ ಸಾರ್ವಜನಿಕರು ಸೇರಿ ವಿಶೇಷ ನೈವೇದ್ಯ ಅರ್ಪಿಸಿ ವಿಶೇಷ ಪೂಜೆಸಲ್ಲಿಸಿದರು. ಆಷಾಢ ಮಾಸದಲ್ಲಿ ಆಚರಿಸಲಾಗುವ ಈ ಪವಿತ್ರ ಉತ್ಸವವು ಗ್ರಾಮಸ್ಥರ ಜೀವನದಲ್ಲಿ ವಿಶೇಷ ಮಹತ್ವವನ್ನು ಹೊಂದಿದೆ. ಜನರ, ಮಕ್ಕಳು, ಜಾನುವಾರುಗಳು ಹಾಗೂ ಬೆಳೆಗಳ ಆರೋಗ್ಯ, ರಕ್ಷಣೆ ಮತ್ತು

ವಿವಿಧ ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ ನೀಡುವ, ಆರೋಗ್ಯ ಮತ್ತು ಸಮೃದ್ಧಿ, ಶಾಂತಿ ನೆಮ್ಮದಿ ಉತ್ತಮ ಮಳೆ ,ಬೆಳೆಯನ್ನು ಕರುಣಿಸಲ್ಲಿ ಎಂದು ದೇವಿಯಲ್ಲಿ ಬೆಡಿಕೊಂಡರು. ಉತ್ಸವದ ಹಿನ್ನೆಲೆಯಲ್ಲಿ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು. ಮಹಿಳೆಯರು, ಯುವಕರು ಹಾಗೂ ಹಿರಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಬಯಾಪೂರ ತಾಂಡಾದಲ್ಲಿ ಹೊಸ ನಾಯ್ಕ ಮತ್ತು ಕಾರಭಾರಿ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಪಟ್ಟಣ ಸಮೀಪದ ಬಯ್ಯಾಪೂರ ತಾಂಡಾದಲ್ಲಿ ಇತ್ತೀಚಗೆ ಜರುಗಿದ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಕಾರ್ಯಕ್ರಮಗಳ ನಿರ್ವಹಣೆ ಸಭೆಯಲ್ಲಿ ತಾಂಡಾದ ಆಗುಹೋಗುಗಳ, ದೇವಸ್ಥಾನಗಳ ಕುರಿತು ಚರ್ಚೆ ನಡೆಸಲಾಯಿತು. ನಂತರ ಹಿಂದಿನ ನಾಯ್ಕ ಮತ್ತು ಕಾರಭಾರಿಗಳು ತಮ್ಮ ಅವಧಿ ಪೂರ್ಣಗೊಂಡಿದ್ದು, ಇನ್ನು ಮುಂದೆ ಈ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ ಹಿನ್ನೆಲೆಯಲ್ಲಿ, ಗ್ರಾಮಸ್ಥರು ಹಾಗೂ ಪಂಚರ ಸಮ್ಮುಖದಲ್ಲಿ ಹೊಸ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ತಾಂಡಾದ ಪೂಜಾರಿಗಳಾದ ಶ್ರೀ ಮಾನಪ್ಪ ಕಾಳಪ್ಪ ರವರು, ಊರಿನ ಸಮರ್ಥ ಹಾಗೂ ಜವಾಬ್ದಾರಿಯುತ ವ್ಯಕ್ತಿಯಾದ ಮಹಾಂತೇಶ್ ಹನಮಪ್ಪ ರಾಠೋಡ ರವರನ್ನು ನಾಯ್ಕ ಹುದ್ದೆಗೆ ಸೂಕ್ತರೆಂದು ಸೂಚಿಸಿದರು. ಅವರ ಸಲಹೆಯ ಮೇರೆಗೆ ಹಾಗೂ ಪಂಚರ ಸಮ್ಮುಖದಲ್ಲಿ ಶ್ರೀ ಮಹಾಂತೇಶ್ ಹನಮಪ್ಪ ರಾಠೋಡ ರವರನ್ನು ಗ್ರಾಮದ ನೂತನ ನಾಯ್ಕರನ್ನಾಗಿ ಆಯ್ಕೆ ಮಾಡಲಾಯಿತು. ಅದೇ ರೀತಿ ಗ್ರಾಮಸ್ಥರೆಲ್ಲರ ಒಮ್ಮತ ಹಾಗೂ ಸಹಮತದೊಂದಿಗೆ ನಾನಪ್ಪ ತಂದೆ ತಿಪ್ಪಣ್ಣ ಚವಾಣ್ ರವರನ್ನು ಗ್ರಾಮದ ಕಾರಭಾರಿಯಾಗಿ ಆಯ್ಕೆ ಮಾಡಲಾಯಿತು. ಹೊಸ ನಾಯ್ಕ ಹಾಗೂ ಕಾರಭಾರಿಯ ಆಯ್ಕೆಯನ್ನು ಗ್ರಾಮಸ್ಥರೆಲ್ಲರ ಸಮ್ಮುಖದಲ್ಲಿ ಅಧಿಕೃತವಾಗಿ ಘೋಷಿಸಲಾಯಿತು. ಗ್ರಾಮದ ಧಾರ್ಮಿಕ, ಸಾಂಪ್ರದಾಯಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಎಲ್ಲರ ಸಹಕಾರ ಮತ್ತು ಒಗ್ಗಟ್ಟಿನಿಂದ ಯಶಸ್ವಿಯಾಗಿ ಮುಂದುವರೆಸುವ ಸಂಕಲ್ಪವನ್ನು ಈ ಸಂದರ್ಭದಲ್ಲಿ ಕೈಗೊಳ್ಳಲಾಯಿತು. ಸುಂಕಲೇಮ್ಮ (ಸೀತಲಾ) ದೇವಿಯ ದಿವ್ಯ ಕೃಪೆ ಬಯ್ಯಾಪುರ ತಾಂಡಾದ ಸಮಸ್ತ ಗ್ರಾಮಸ್ಥರ ಮೇಲಿರಲಿ. ಗ್ರಾಮದಲ್ಲಿ ಸದಾ ಆರೋಗ್ಯ, ಶಾಂತಿ, ಸೌಹಾರ್ದತೆ ಮತ್ತು ಸಮೃದ್ಧಿ ನೆಲೆಸಲಿ ಎಂಬುದು ಪ್ರಾರ್ಥನೆಯಾಗಿಎಂದರು.

# ಭಾಲ್ಕಿ ತಾಲೂಕಿನ ವಿವಿಧೆಡೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಭೇಟಿ

# ಎಸ್‌ಐಆರ್ ಪ್ರಕ್ರಿಯೆ ಶೀಘ್ರದಲ್ಲಿಯೇ ಪೂರ್ಣಗೊಳಿಸಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ನಗರ ಸೇರಿ ತಾಲೂಕಿನ ಗಡಿಭಾಗದ ವಿವಿಧ ಮತಗಟ್ಟೆಗಳಿಗೆ ಬುಧವಾರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಭೇಟಿ ನೀಡಿ ಮತದಾರರ ಸಮಗ್ರ ಪಟ್ಟಿಯ ತೀವ್ರ ವಿಶೇಷ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಪರಿಶೀಲಿಸಿದರು. ಕೊಂಗಳಿ, ವಾಂಜರಖೇಡ ಗ್ರಾಮದ ಮತಗಟ್ಟೆಗಳಿಗೆ ಭೇಟಿ ನೀಡಿ ಮತಗಟ್ಟೆ ಅಧಿಕಾರಿಗಳಿಂದ ಎಸ್‌ಐಆರ್ ಪ್ರಗತಿಯ ಮಾಹಿತಿ ಪಡೆದು ಕೊಂಡರು.ನಂತರ ನಗರದ ತಹಸೀಲ್ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕ್ಷೇತ್ರದಲ್ಲಿ ಮತಗಟ್ಟೆ ಅಧಿಕಾರಿಗಳು ಮತದಾರರ ಮನೆ ಮನೆಗಳಿಗೆ ಭೇಟಿ ನೀಡಿ ಗಣಪತಿ ನಮೂನೆಗಳನ್ನು ವಿತರಿಸಿ ಶೀಘ್ರದಲ್ಲಿಯೇ ಶೇ.100ರಷ್ಟು ಪ್ರಗತಿ ಸಾಧಿಸಬೇಕು. ಪ್ರತಿಯೊಬ್ಬ ವ್ಯಕ್ತಿಗೂ ನಮೂನೆಗಳು ತಲುಪಬೇಕು. ಯಾವುದೇ ಅರ್ಹ ವ್ಯಕ್ತಿಯು ಮತಪಟ್ಟಿಯಿಂದ ಅಳಿಸಿ ಹೋಗದಂತೆ ಎಚ್ಚರ ವಹಿಸಬೇಕು. ಪಾರದರ್ಶಕತೆ ಮತ್ತು ವಿಶ್ವಾರ್ಹತೆ ಕಾಪಾಡುವ ಉದ್ದೇಶದಿಂದ ಪರಿಷ್ಕರಣೆ ಪ್ರಕ್ರಿಯೆಯ ಪ್ರತಿಯೊಂದು ಹಂತದ ಮಾಹಿತಿಯನ್ನು ಅಧಿಕೃತವಾಗಿ ಹಂಚಿಕೊಳ್ಳಬೇಕು ಎಂದರು. ಜುಲೈ 1 ರಿಂದ ವಿಕಸಿತ ಭಾರತ–ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ವಿಬಿಜಿ ರಾಮ್ ಜಿ ಯೋಜನೆ ಅನುಷ್ಠಾನಗೊಂಡಿದ್ದು, ಗ್ರಾಮೀಣ ಬಡ ಕಾರ್ಮಿಕರು ನಗರಗಳಿಗೆ ವಲಸೆ ಹೋಗದಂತೆ ಯೋಜನೆಯಡಿ ಎನ್‌ಎಂಆರ್ ಜನರೇಟ್ ಮಾಡಿ ಕಾರ್ಮಿಕರಿಗೆ ಕೂಲಿ ಕೆಲಸ ನೀಡಿ ಎಂದು ಗ್ರಾಪಂ ಸಿಬ್ಬಂದಿಯವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಮಲ್ಲಿಕಾರ್ಜುನ್ ವಡ್ಡನಕೆರೆ, ಮತದಾರರ ನೋಂದಣಾಧಿಕಾರಿ ಶಂಕರ ಖಿಡಿ, ಸಂಜುಕುಮಾರ ಭೈರೆ, ಅಹ್ಮದ ಮುಲ್ಲಾ, ನವನಾಥ ಬೋಲ್ಸುರೆ, ಶ್ರೀನಾಥ್, ವಿದ್ಯಾಸಾಗರ ಕಾಂಬಳೆ, ನಂದಿಕಿಶೋರ್ ಮುಳೆ, ವಹೀದ್, ಶ್ರೀಕಾಂತ್ ಪಾಟೀಲ್ ಸೇರಿದಂತೆ ಹಲವರು ಇದ್ದರು.

> ಭಾಲ್ಕಿ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಉತ್ತಮ ಪ್ರಗತಿಯಲ್ಲಿದೆ. ಈಗಾಗಲೇ ಶೇ.80ರಷ್ಟು ಪರಿಷ್ಕರಣೆ ಪೂರ್ಣಗೊಂಡಿ–ದ್ದು, ಹಲವು ಮತಗಟ್ಟೆಗಳು ಶೇ.100ರಷ್ಟು ಸಾಧನೆ ಮಾಡಿವೆ. ಉಳಿದ ಎಸ್‌ಐಆರ್ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಿ ಅರ್ಹ ಮತದಾರರು ಮತಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು.
>
> **– ಶಿಲ್ಪಾ ಶರ್ಮಾ ಜಿಲ್ಲಾಧಿಕಾರಿಗಳು ಬೀದರ್**

# ಇಂಡಿ ಕೃಷ್ಣಾ ಕಾಲುವೆಗೆ ನೀರು



• ಮಲ್ಲಮ್ಮ ನುಡಿ ವಾರ್ತೆ ಇಂಡಿ

ತಾಲೂಕಿನಲ್ಲಿ ಹರಿಯುವ ಕೃಷ್ಣಾ ಕಾಲುವೆಗೆ ಇಂದು ನೀರು ಬಂದಿದೆ. ಈ ನೀರು ಇನ್ನು ಅಂದಾಜು ಹತ್ತು ದಿನಗಳ ವರೆಗೆ ಹರಿಯಲಿದೆ.

ಈ ನೀರನ್ನು ಕೇವಲ ಕೆರೆಗಳನ್ನು ತುಂಬಲಾಗುತ್ತಿದೆ. ಮತ್ತು ಗ್ರಾಮೀಣ ಕುಡಿಯುವ ನೀರು ಜನ ಜಾನುವಾರುಗಳಿಗೆ ಮಾತ್ರ ಉಪಯೋಗಿಸಲಾಗುತ್ತಿದೆ. ಕಾರಣ ರೈತರು ಕೃಷಿಗೆ ಬಳಸಬಾರದೆಂದು ತಿಳಿಸಿದ್ದಾರೆ. ಇಂಡಿಯ ಹತ್ತಿರದ ಕೃಷ್ಣಾ ಕಾಲುವೆಗೆ ತಹಸೀಲ್ದಾರ ನಾದೇಂದ್ರ ಕೋಳಶೆಟ್ಟಿ, ತಾಪಂ ಇಓ ಮಹಾದೇವಪ್ಪ ಏವೂರ, ಹೆಸ್ಕಾಂ ಎಇಇ ಆರ್.ಎಸ್.ಮೆಂಡೆಗಾರ, ಕೃಷ್ಣಾ ಮೇಲ್ದಂಡೆ ಯೋಜನೆಯ ಭಿರಪ್ಪ ಪೂಜಾರಿ, ಎನ್.ವಿ ಕಾಟೆ, ಎಇಇ ಸದಾಶಿವ ಅಲ್ದಿ , ಎಇಇ ಸುರೇಶ ಯಾತನೂರ, ಎಇಇ ಸಂತೋಷ ದಾಯಿಗೋಡೆ ಮತ್ತಿತರಿದ್ದರು.

# ಸವಿತಾ ಸಮಾಜ ಸಂಘಟನೆಯ ಕೊಟ್ಟೂರು ತಾಲೂಕು ಅಧ್ಯಕ್ಷ ಬಿ.ಸತೀಶ್ ಅವಿರೋಧವಾಗಿ ಅಯ್ಕೆ

• ಮಲ್ಲಮ್ಮ ನುಡಿ ವಾರ್ತೆಕೊಟ್ಟೂರು



ಪಟ್ಟಣದ ರಾಜೀವ್ ನಗರದ ಸವಿತ ಸಮಾಜ ಸಂಘಟನೆ ಕಚೇರಿಯಲ್ಲಿ ನೆಡೆದ ಸಭೆಯಲ್ಲಿ ಸಂಘಟನೆಯ ನೂತನ ಪಧಾದಿಕಾರಿಗಳನ್ನು ಸರ್ವಾನುಮತದಿಂದ ಅಯ್ಕೆ ಮಾಡಲಾಯಿತು.

ಅಧ್ಯಕ್ಷಬಿ.ಸತೀಶ.ಗೌರವಧ್ಯಕ್ಷ ನಾಗಶೇಷಲು ಎಮ್. ಉಪಾಧ್ಯಕ್ಷರು ಸುಧೀರ್ ಬಿ. ಕಾರ್ಯದರ್ಶಿ ಹನುಮಂತ ಕೆ ಎಚ್. ಖಜಾಂಚಿ ಹನುಮಂತ ಎಚ್ . ನೂತನ ಪಧಾದಿಕಾರಿಗಳಾಗಿ ಅಯ್ಕೆಯಾದರು.ಈ ಸಂದರ್ಭದಲ್ಲಿ ಅಧ್ಯಕ್ಷ ಬಿ.ಸತೀಶ್ ಮಾತನಾಡಿ ಸಮುಧಾಯದವರು ಸಂಘಟನೆ ಮತ್ತು ಒಗ್ಗಟ್ಟಿನಿಂದ ಸಾಗಿದಾಗ ನಮ್ಮ ಸಮಾಜಕ್ಕೆ ಸರ್ಕಾರಗಳ ನೀಡಿರುವ ಸರ್ಕಾರದ ಸೌಲಭ್ಯಗಳನ್ನು ನಮ್ಮ ಸವಿತ ಸಮಾಜದ ಪ್ರತಿಯೊಬ್ಬ ಫಲಾನುಭಾವಿಗಳು ಸರ್ಕಾರಗಳ ಎಲ್ಲಾ ಯೋಜನೆಗಳನ್ನು ಪಡೆದುಕೊಳ್ಳಬಹುದು. ಹಾಗೂ ಸಮುಧಾಯದವರನ್ನು ಒಗ್ಗೂಡಿಸಿಕೊಂಡು ಸಂಘಟನೆ ಬೆಳವಣಿಗೆಗೆ ಶ್ರಮಿಸುತ್ತೇನೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ನೂತನ ಎಲ್ಲಾ ಪಧಾದಿಕಾರಿಗಳು ಸಮುಧಾಯದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಸವಿತ ಸಮಾಜ ಸಂಘಟನೆಯ ಸರ್ವ ಸದಸ್ಯರು ಇದ್ದರು

# ಬರಪೀಡಿತ ಜಿಲ್ಲೆ ಘೋಷಿಸಲು ಕನ್ನಡ ಸೇನೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಮುಂಗಾರು ಕೈಕೊಟ್ಟು ವ್ಯಾಪಕ ಬರಗಾಲ ವ್ಯಾಪಿಸಿರುವ ಕಾರಣ ಬೀದರ್ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕು ಹಾಗೂ ರೈತರ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು ಎಂದು ಆಗ್ರಹಿಸಿ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ರವರ ನೇತೃತ್ವದಲ್ಲಿ ಬುಧುವಾರ ಕನ್ನಡ ಸೇನೆ ಕರ್ನಾಟಕ ಸಂಘಟನೆ ಪ್ರತಿಭಟನೆ ನಡೆಸಿತ್ತು. ರಾಜ್ಯದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಅವರಿಗೆ ಸಲ್ಲಿಸಿ, ಮಾತನಾಡಿದ ಅವರು, ಜಿಲ್ಲೆಯಲ್ಲಿ ಈಗಾಗಲೇ ಬಿತ್ತನೆ ಮಾಡಿರುವ ಹೆಸರು, ತೊಗರಿ, ಉದ್ದು, ಸೋಯಾಬಿನ್, ಕಬ್ಬು ಬೆಳೆ ಒಣಗುತ್ತಿವೆ. ಹೀಗಾಗಿ ರಾಜ್ಯ ಸರ್ಕಾರ ತಕ್ಷಣ ಜಿಲ್ಲೆಯತ್ತ ವಿಶೇಷ ಗಮನ ಹರಿಸಬೇಕು. ರೈತರು ಬಹಳಷ್ಟು ನಷ್ಟ ಅನುಭವಿಸಿದ್ದು, ಪ್ರತಿ ಎಕರೆಗೆ 50 ಸಾವಿರ ಪರಿಹಾರ ನೀಡಬೇಕು, ಇಲ್ಲದ್ದಿದರೆ ಮುಂದಿನ ದಿನಗಳಲ್ಲಿ ಕನ್ನಡ ಸೇನೆ ಸಂಘಟನೆ ಚಿಟಗುಪ್ಪ ಬಂದ್ ಮಾಡುವ ಮೂಲಕ ಉಗ್ರವಾದ ಪ್ರತಿಭಟನೆ ಮಾಡುವುದಾಗಿ ಸರ್ಕಾರಕ್ಕೆ ಎಚ್ಚರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಸುಭಾಷ ಕೆನೆಡೆ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶಕುಂತಲಾ ಬಿರಾದಾರ್, ಉಪಾಧ್ಯಕ್ಷೆ ಸುಜಾತಾ ರೆಡ್ಡಿ, ಪ್ರಧಾನ ಕಾರ್ಯದರ್ಶಿ ರಮೇಶ ಧೂಳ, ಜಿಲ್ಲಾ ಕೋಶಾಧ್ಯಕ್ಷ ಹಮೀದ್, ತಾಲೂಕಾಧ್ಯಕ್ಷ ಪವನ ಪೂಜಾರಿ, ತಿಪ್ಪಣ್ಣ ರೆಡ್ಡಿ, ಶಿವರಾಜ ಸ್ವಾಮಿ ಘಾತ್ಮಪುರ್, ಚಂದ್ರಶೇಖರ್ ಪಾಟೀಲ್ ಬನ್ನಳ್ಳಿ, ರಮೇಶ ಪೂಜಾರಿ, ಗುಂಡಪ್ಪ ನಾಗನಕೇರಿ, ಯುನುಸ್, ಅರ್ಷದ್, ಅಂಬರೀಶ್ ವಳಖಿಂಡಿ, ಉದಯ ಹಿಬಾರೆ, ರಾಜರೆಡ್ಡಿ, ಹಣಮಂತ ಕೈಕಡೆ ಸೇರಿದಂತೆ ಕನ್ನಡ ಸೇನೆ ಕಾರ್ಯಕರ್ತರು ಉಪಸ್ಥಿತರಿದ್ದರು.

# ಇಂಡಿಗೆ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ



• ಮಲ್ಲಮ್ಮ ನುಡಿ ವಾರ್ತೆ ಇಂಡಿ

ಇಂಡಿಗೆ ನೂತನ ಕ್ಷೇತ್ರಶಿಕ್ಷಣಾಧಿಕಾರಿಯಾಗಿ ಪಿ.ಮೋಹನಕುಮಾರ ಅಧಿಕಾರ ವಹಿಸಿ ಕೊಂಡರು.

ಇದೇ ವೇಳೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ವತಿಯಿಂದ ಸನ್ಮಾನಿಸಿ ಸ್ವಾಗತಿಸಲಾಯಿತು.

ನೂತನ ಬಿಈಓ ಮಾತನಾಡಿ ಶೈಕ್ಷಣಿಕ ಪ್ರಗತಿಗೆ ಎಲ್ಲರೂ ಶ್ರಮಿಸೋಣ ಮಕ್ಕಳ ಕಲಿಕೆಗೆ ಹೆಚ್ಚು ಒತ್ತು ನೀಡೋಣ ಶಾಲೆಯ ಸರ್ವಾಂಗೀಣ ಬೆಳವಣಿಗೆಗೆ ಎಲ್ಲರ ಸಹಕಾರ ಅಗತ್ಯ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್ ನಡಗಡ್ಡಿ, ಆನಂದ ಹುಣಸಗಿ, ಜಿಪಿಟಿ ಶಿಕ್ಷಕರ ಸಂಘದ ತಾಲೂಕಾ ಅಧ್ಯಕ್ಷ ಶಂಕರ ಕೋಳೆಕರ , ಚಂದ್ರಶೇಖರ ಹಕಾರಿ, ಶಶಿಕುಮಾರ ವಡ್ಡರ, ಹಣಮಂತರಾಯ ಪೂಜಾರಿ ಸಂತೋಷ ಬಂಡೆ ಮಹಾದೇವ ಗಬಸಾವಳಗಿ, ಸೋಮಲಿಂಗಪ್ಪ ಅಂಗಡಿ ಶೇಖರಬಾಬಿ ಬೀರನಹಳ್ಳಿ ಮತ್ತಿತರಿದ್ದರು.

# ಯರಗುಡಿ ಗ್ರಾಮ ಪಂಚಾಯತಿಯಲ್ಲಿ ವಿಬಿ-ಜಿ ರಾಮ್ ಜಿ ಯೋಜನೆಗೆ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ತಾಲೂಕಿನ ಯರಗುಡಿ ಗ್ರಾಮ ಪಂಚಾಯತಿಯಲ್ಲಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕ ಮಿಷನ್ – ಗ್ರಾಮೀಣ ಯೋಜನೆಯ ವ್ಯಾಪಕ ಪ್ರಚಾರ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ಶಶಿಕಾಂತ ಶಿವಪೂರೆ ಹಾಗೂ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಬಾರಕೇರ್ ಅವರು ಬುಧವಾರ ಚಾಲನೆ ನೀಡಿದರು.

ಗ್ರಾಮ ಪಂಚಾಯತಿ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಅವರು ಯೋಜನೆಯ ಮುಖ್ಯ ಉದ್ದೇಶಗಳು, ಲಭ್ಯವಿರುವ ಸೌಲಭ್ಯಗಳು ಹಾಗೂ ಕೈಗೊಳ್ಳಬಹುದಾದ ಕಾಮಗಾರಿಗಳ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು.

ವಿಬಿ–ಜಿ ರಾಮ್ ಜಿ ಯೋಜನೆಯಡಿ ಪ್ರತಿಯೊಬ್ಬ ಅರ್ಹರು ವೈಯಕ್ತಿಕ ಕಾಮಗಾರಿಗಳನ್ನು ಕಡ್ಡಾಯವಾಗಿ ಕೈಗೊಳ್ಳುವಂತೆ ಜಾಗೃತಿ ಮೂಡಿಸಿದರು.

ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಯೋಜನೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ತಲುಪಿಸಲು ಡಂಗೂರ ಹಾಗೂ ಆಟೋ ಮೂಲಕ ಪ್ರಚಾರ ನಡೆಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಕನಿಷ್ಠ 500 ಕೂಲಿಕಾರ್ಮಿಕರಿಗೆ ಕಡ್ಡಾಯವಾಗಿ ಉದ್ಯೋಗ ಕಲ್ಪಿಸಬೇಕು ಎಂದು ಪಿಡಿಓರವರಿಗೆ ಸೂಚಿಸಿದರು.ಕಾಮಗಾರಿ ಸ್ಥಳಕ್ಕೆ ಭೇಟಿ ಹಾಗೂ ಸಂವಾದ:ಸಭೆಯ ನಂತರ ಅಧಿಕಾರಿಗಳ ತಂಡವು ಯರಗುಡಿ ಪಂಚಾಯತಿ ವ್ಯಾಪ್ತಿಯ ಬೆಣಕಲ್ಲು ಗ್ರಾಮದಲ್ಲಿ ಜಾರಿಯಲ್ಲಿರುವ ನಾಲಾ ಪುನಶ್ಚೇತನ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಕೂಲಿಕಾರರೊಂದಿಗೆ ನೇರ ಸಂವಾದ ನಡೆಸಿದ ಉಪಕಾರ್ಯದರ್ಶಿಯವರು, ಯೋಜನೆಯಡಿ ಕೈಗೊಳ್ಳಬಹುದಾದ 318 ವಿವಿಧ ಕಾಮಗಾರಿಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಸಹಾಯಕ ನಿರ್ದೇಶಕರು (ಗ್ರಾ.ಉ) ಆರ್. ಕೆ. ಬಸವರಾಜ್, ಯರಗುಡಿ ಗ್ರಾಪಂ ಪಿಡಿಓ ರುದ್ರಪ್ಪ, ಜಿಲ್ಲಾ ಐಇಸಿ ಸಂಯೋಜಕ ನಟರಾಜ್, ತಾಂತ್ರಿಕ ಸಂಯೋಜಕ ವಿಜಯಮಹಾಂತೇಶ, ತಾಲೂಕು ಐಇಸಿ ಸಂಯೋಜಕ ರಮೇಶ, ತಾಂತ್ರಿಕ ಸಹಾಯಕಿ ನವ್ಯ ಶೃತಿ, ಡಿಇಓ, ಬಿಎಫ್‌ಟಿ, ಜಿಕೆಎಂ ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ 25ರಂದು ಕ್ಯಾಂಡಲ್ ಮಾರ್ಚ್, 26ರಂದು ಅಮರ್ ಜವಾನ್ ಬಳಿ ಶ್ರದ್ಧಾಂಜಲಿ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**




ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಜುಲೈ 25ರಂದು ಕ್ಯಾಂಡಲ್ ಮಾರ್ಚ್ ಹಾಗೂ ಜುಲೈ 26ರಂದು ಅಮರ್ ಜವಾನ್ ಸ್ಮಾರಕದ ಬಳಿ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಎಕ್ಸ್–ಸರ್ವಿಸ್‌ಮೆನ್ ಸಂಘದ ಬಳ್ಳಾರಿ ಜಿಲ್ಲಾ ಅಧ್ಯಕ್ಷ ಅಣ್ಣಿಗೇರಿ ವೀರಪ್ರತಾಪ್ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜುಲೈ 25ರಂದು ಸಂಜೆ ಎಸ್‌ಪಿ ಸರ್ಕಲ್‌ನಿಂದ ಎಸ್‌ಪಿ ಕಚೇರಿ ಸಮೀಪದ ಅಮರ್ ಜವಾನ್ ಸ್ಮಾರಕದವರೆಗೆ ಸುಮಾರು 2 ಕಿಲೋಮೀಟರ್ ದೂರ ಕ್ಯಾಂಡಲ್ ಮಾರ್ಚ್ ಹಮ್ಮಿಕೊಳ್ಳಲಾಗಿದೆ ಎಂದರು.

ಜುಲೈ 26ರಂದು ಸಂಜೆ 8.30ಕ್ಕೆ ಅಮರ್ ಜವಾನ್ ಸ್ಮಾರಕದ ಮುಂಭಾಗದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಲಿದ್ದು, ನಗರದ ಗಣ್ಯ ವ್ಯಕ್ತಿಗಳು, ಮಾಜಿ ಸೈನಿಕರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರ ಯೋಧರಿಗೆ ಗೌರವ ನಮನ ಸಲ್ಲಿಸುವುದರ ಜೊತೆಗೆ, ಅವರ ತ್ಯಾಗ, ದೇಶಭಕ್ತಿ ಮತ್ತು ಸೈನಿಕರ ಸೇವೆಯ ಮಹತ್ವವನ್ನು ಇಂದಿನ ಯುವಪೀಳಿಗೆಗೆ ತಿಳಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕ್ಯಾಂಡಲ್ ಮಾರ್ಚ್‌ನಲ್ಲಿ ರೈತ ಸಂಘ, ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಸಾರ್ವಜನಿಕರು, ಜಿಲ್ಲಾ ಆಡಳಿತದ ಅಧಿಕಾರಿಗಳು ಹಾಗೂ ಬಳ್ಳಾರಿಯ ವಿವಿಧ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದು, ಜಿಲ್ಲೆಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಲಕ್ಷ್ಮಣ್ ಹವಾಲ್ದಾರ್, ಮಲ್ಲಿಕಾರ್ಜುನ, ರಾಮಕೃಷ್ಣ, ವೀರ, ನಾರಿ, ಚಂದ್ರಕಲಾ, ವಿಜಯ, ಸರೋಜ, ಗಿರಿಜಾ, ಮಂಜುಳಾ, ಪ್ರವೀಣ್‌ಬೈ, ರಾಜಶೇಖರ್, ವಿನಯ್ ಕುಮಾರ್, ಸುಭಾಷ್ ಚಂದ್ರಬೋಸ್, ರುದ್ರಮುನಿ, ಅಂಜಿನಪ್ಪ, ಸುರೇಂದ್ರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮರುಳಾರಾಧ್ಯ ಶಿವಾಚಾರ್ಯರ ಜನ್ಮ ದಿನಾಚರಣೆ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಚಾಂಗಲೇರಾ ಮತ್ತು ಚಿಟಗುಪ್ಪ ಬ್ರಹ್ಮನಮಠದ ಹಿರಿಯ ಪೀಠಾಧಿಪತಿಗಳಾದ ಮರುಳಾರಾಧ್ಯ ಶಿವಾಚಾರ್ಯರ 25ನೇ ಹುಟ್ಟುಹಬ್ಬ ಹಾಗೂ ರಜತ ಮಹೋತ್ಸವನ್ನು ಹಿರಿಯ ಗುರುಗಳಾದ ಗುರುಲಿಂಗ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಪಟ್ಟಣದ ಶ್ರೀ ಅಯ್ಯಪ್ಪ ಸ್ವಾಮಿ ಹಿರೇಮಠದಲ್ಲಿ ಮಂಗಳವಾರ ಮರುಳರಾಧ್ಯ ಶಿವಾಚಾರ್ಯರ ಜನ್ಮ ದಿನದ ಪ್ರಯುಕ್ತ ಸಮಾಜಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಶ್ರೀಗಳಿಗೆ ಶಾಲು ಹೊದಿಸಿ ಸನ್ಮಾನಿಸಿ ಸಸಿ ನೀಡಿ ಜನ್ಮ ದಿನದ ಶುಭಾಶಯಗಳು ಕೋರಿದರು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಶೈಲೇಂದ್ರ ಕಾವಡಿ, ರಾಜಕುಮಾರ್ ಆರ್. ಹಡಪದ, ಮಂಜುನಾಥ್ ಚಿಂತಕೋಟಿ, ದಿಲೀಪ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಶಾರೀರಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ: ಡಿಹೆಚ್‌ಓ ಡಾ. ಅಲಕನಂದಾ ಡಿ. ಮಳಗಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಪ್ರತಿಯೊಬ್ಬರಿಗೂ ಕೇವಲ ಶಾರೀರಿಕ ಆರೋಗ್ಯ ಮಾತ್ರವಲ್ಲ, ಮಾನಸಿಕ ಆರೋಗ್ಯವೂ ಅತ್ಯಂತ ಮುಖ್ಯ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅಲಕನಂದಾ ಡಿ.ಮಳಗಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮ, ಜಿಲ್ಲಾ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಆಸ್ಪತ್ರೆಯ ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರದಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವ ಮೆದುಳು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾನಸಿಕ ಹಾಗೂ ನರಸಂಬಂಧಿ ತೊಂದರೆಗಳಿದ್ದಾಗ ಮನುಷ್ಯ ಸಮಾಜದಲ್ಲಿ ಗೌರವಯುತವಾಗಿ ಜೀವಿಸುವುದು ಕಷ್ಟವಾಗುತ್ತದೆ. ಈ ರೀತಿಯ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಸೂಕ್ತ ಚಿಕಿತ್ಸೆ ನೀಡದಿದ್ದರೆ, ಅದು ಶಾಶ್ವತ ವೈಕಲ್ಯಕ್ಕೆ ಕಾರಣವಾಗಬಹುದು ಎಂದು ಕಳವಳ ವ್ಯಕ್ತಪಡಿಸಿದರು.ಮಾನಸಿಕ ಹಾಗೂ ನರಸಂಬಂಧಿ ತೊಂದರೆಗಳಿಂದ ಉಂಟಾಗುವ ಶಾರೀರಿಕ ಸಮಸ್ಯೆಗಳನ್ನು ಗುಣಪಡಿಸಲು ಫಿಜಿಯೋಥೆರಪಿಯ ಪಾತ್ರ ಪ್ರಮುಖವಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಉಚಿತವಾಗಿ ಲಭ್ಯವಿದೆ. ಸಾರ್ವಜನಿಕರು ಹಾಗೂ ರೋಗಿಗಳು ಗರಿಷ್ಠ ಪ್ರಮಾಣದಲ್ಲಿ ಸದುಪಯೋಗಪಡಿಸಿಕೊಳ್ಳಬೇಕು. ಜಿಲ್ಲಾ ಆಸ್ಪತ್ರೆಯಲ್ಲಿ ಲಭ್ಯವಿರುವ ಈ ಉಚಿತ ಹಾಗೂ ಸುಧಾರಿತ ಚಿಕಿತ್ಸಾ ಸೌಲಭ್ಯಗಳ ಬಗ್ಗೆ ಸುತ್ತಮುತ್ತಲಿನ ಸಾರ್ವಜನಿಕರಿಗೆ, ನೆರೆಹೊರೆಯವರಿಗೆ ಮಾಹಿತಿ ನೀಡಿ ಅರಿವು ಮೂಡಿಸಬೇಕು ಎಂದು ಕೋರಿದರು.

ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮನುಷ್ಯನ ದಿನನಿತ್ಯದ ಚಟುವಟಿಕೆಗಳಿಗೆ ಹಾಗೂ ಸಮಗ್ರ ಆರೋಗ್ಯಕ್ಕೆ ಮಿದುಳಿನ ಆರೈಕೆ ಅತ್ಯಂತ ಅವಶ್ಯಕ. ಮಿದುಳಿನ ಆರೋಗ್ಯ ಹದಗೆಟ್ಟರೆ ಇಡೀ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಆರೋಗ್ಯಕರ ಮಿದುಳು ಇಲ್ಲದಿದ್ದರೆ ಮನುಷ್ಯ ಯಾವುದೇ ಕೆಲಸವನ್ನು ಸರಿಯಾಗಿ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಜಿಲ್ಲಾ ಆಸ್ಪತ್ರೆಯಲ್ಲಿ ನರರೋಗ ತಜ್ಞರ ಕೊರತೆಯಿದ್ದರೂ, ಸಾರ್ವಜನಿಕರ ಹಿತದೃಷ್ಟಿಯಿಂದ ವಾರದಲ್ಲಿ ಎರಡು ದಿನ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಈ ದಿನಗಳಲ್ಲಿ ಸುಮಾರು 300 ರಿಂದ 400 ರೋಗಿಗಳನ್ನು ತಪಾಸಣೆ ನಡೆಸಿ ಉಚಿತ ಔಷಧಿಗಳನ್ನು ನೀಡುತ್ತಿದ್ದಾರೆ. ಈ ಸೌಲಭ್ಯವನ್ನು ಸಾರ್ವಜನಿಕರು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ವೀರೇಂದ್ರ ಕುಮಾರ್ ಕೆ.ಜಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ದೈಹಿಕ ನೋವು ತಕ್ಷಣವೇ ಗೋಚರಿಸುತ್ತದೆ, ಆದರೆ ಮೆದುಳು ಮತ್ತು ಮಾನಸಿಕ ಸಮಸ್ಯೆಗಳು ತಡವಾಗಿ ಬೆಳಕಿಗೆ ಬರುತ್ತವೆ. ಹೀಗಾಗಿ ಆರಂಭದಲ್ಲೇ ರೋಗಲಕ್ಷಣಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡುವುದು ಅಗತ್ಯ. ಈ ಕುರಿತು ಪ್ರತಿಯೊಬ್ಬರೂ ಜಾಗೃತರಾಗಿ, ಸಮಾಜದಲ್ಲಿ ಅರಿವು ಪಸರಿಸಲು ಕೈಜೋಡಿಸಬೇಕು ಎಂದು ತಿಳಿಸಿದರು.

ವಯಸ್ಸಾದವರಲ್ಲಿ ಅಥವಾ 50–60 ವರ್ಷ ದಾಟಿದವರಲ್ಲಿ ಕಾಣಿಸಿಕೊಳ್ಳುವ ಮೆದುಳಿನ ಸಮಸ್ಯೆಗಳು, ಪಾರ್ಶ್ವವಾಯು, ಖಿನ್ನತೆಯಂತಹ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ, ಸೂಕ್ತ ಚಿಕಿತ್ಸೆ ಮತ್ತು ಕೌನ್ಸಿಲಿಂಗ್ ನೀಡುವುದು ಬ್ರೇನ್ ಹೆಲ್ತ್ ಇನಿಶಿಯೇಟಿವ್ ಯೋಜನೆಯ ಉದ್ದೇಶವಾಗಿದೆ. ಜಿಲ್ಲಾ ಆಸ್ಪತ್ರೆಯಲ್ಲಿ 'ಕರ್ನಾಟಕ ಬ್ರೇನ್ ಹೆಲ್ತ್ ಇನಿಶಿಯೇಟಿವ್' ಯೋಜನೆಯಡಿ ಪ್ರತ್ಯೇಕ ವಿಭಾಗ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಸೇವೆಯನ್ನು ನೀಡಲಾಗುತ್ತಿದೆ. ಈ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲೆಯು ಮೊದಲ ಹಾಗೂ ಎರಡನೇ ಸ್ಥಾನದಲ್ಲಿದ್ದು, ಅತ್ಯುತ್ತಮ ಸಾಧನೆ ಮಾಡಿದೆ ಎಂದರು. ಇದಕ್ಕೂ ಮುನ್ನ ಗಣ್ಯರು, ಉಜ್ಜೀವನ ಬ್ಯಾಂಕ್ ವತಿಯಿಂದ ಸ್ಪಾನ್ಸರ್ ಮಾಡಲಾದ ವೈದ್ಯಕೀಯ ಉಪಕರಣಗಳನ್ನು ಉದ್ಘಾಟಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ಆಸ್ಪತ್ರೆಯ ಮೆದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮದ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಸಣ್ಣಕೇಶವ ಅವರು, ಸ್ವಾಗತಿಸಿ ನಿರೂಪಿಸಿದರು.

ಈ ವೇಳೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಹಾಗೂ ಜನರಲ್ ಸರ್ಜನ್ ಡಾ.ಮಲ್ಲಿಕಾರ್ಜುನ್, ಜಿಲ್ಲಾ ಆಸ್ಪತ್ರೆಯ ತಜ್ಞವೈದ್ಯರು ಹಾಗೂ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ್ ಎಮ್., ಜಿಲ್ಲಾ ಆಸ್ಪತ್ರೆಯ ಮೆದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮದ ನೋಡಲ್ ಅಧಿಕಾರಿ ಹಾಗೂ ತಜ್ಞವೈದ್ಯ ಡಾ.ರಾಕೇಶ್, ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರ ವೈದ್ಯಾಧಿಕಾರಿ ಡಾ.ಪ್ರಿಯಾಂಕ ಪ್ರಸಾದ್ ಹಾಗೂ ಇತರೆ ವೈದ್ಯಾಧಿಕಾರಿಗಳು, ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರದ ಸಿಬ್ಬಂದಿ ವರ್ಗ, ವಿವಿಧ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಂಬೇಡ್ಕರ್ ವೃತ್ತದಲ್ಲಿ ಹಂಪ್ಸ್, ಸಿಗ್ನಲ್ ಅಳವಡಿಕೆಗೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ**

ಪಟ್ಟಣದ ಅಂಬೇಡ್ಕರ್ ವೃತ್ತ ಹಾಗೂ ಐಎಂಎ ಹಾಲ್ ಬಳಿ ಸಾರ್ವಜನಿಕರ ಸುರಕ್ಷತೆಗಾಗಿ ರಬ್ಬರ್ ಹಂಪ್ಸ್ ಹಾಗೂ ಸಂಚಾರ ಸಿಗ್ನಲ್‌ಗಳನ್ನು ತಕ್ಷಣ ಅಳವಡಿಸಬೇಕು. ಇಲ್ಲವಾದಲ್ಲಿ ಅರೆಬೆತ್ತಲೆ ಮೆರವಣಿಗೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನಿ ಸೇನೆ) ತಾಲೂಕು ಘಟಕ ಎಚ್ಚರಿಕೆ ನೀಡಿದೆ.ಈ ಕುರಿತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳಿಗೆ, ಸಹಾಯಕ ಆಯುಕ್ತರ ಮುಖಾಂತರ ಮನವಿ ಸಲ್ಲಿಸಲಾಯಿತು.

ಮನವಿಯಲ್ಲಿ, ಅಂಬೇಡ್ಕರ್ ವೃತ್ತವು ಪಟ್ಟಣದ ಅತ್ಯಂತ ಜನನಿಬಿಡ ಸಂಚಾರ ಕೇಂದ್ರವಾಗಿದ್ದು, ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿವೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಪಾದಚಾರಿಗಳು ರಸ್ತೆ ದಾಟಲು ತೀವ್ರ ತೊಂದರೆ ಅನುಭವಿಸುತ್ತಿದ್ದು, ವಾಹನಗಳ ಅತಿವೇಗದಿಂದ ಅಪಘಾತಗಳ ಅಪಾಯ ಹೆಚ್ಚಾಗಿದೆ ಎಂದು ತಿಳಿಸಲಾಗಿದೆ.ಈ ಸಂಬಂಧ ಈ ಹಿಂದೆ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಲಾಗಿತ್ತು. ನಂತರ ಲೋಕೋಪಯೋಗಿ ಇಲಾಖೆ ರಸ್ತೆ ಪುರಸಭೆ ವ್ಯಾಪ್ತಿಗೆ ಸೇರಿರುವುದರಿಂದ ತಮ್ಮ ಇಲಾಖೆಗೆ ಸಂಬಂಧಿಸಿಲ್ಲ ಎಂದು ಹಿಂಬರಹ ನೀಡಿದೆ. ಆದರೆ ಪುರಸಭೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯವಹಿಸಿರುವುದು ಖಂಡನೀಯ ಎಂದು ಆರೋಪಿಸಲಾಗಿದೆ.ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ನಿರ್ಮಿಸಿರುವ ಕೆಲವು ಸಿಸಿ ರಸ್ತೆಗಳು ಅವೈಜ್ಞಾನಿಕವಾಗಿದ್ದು, ಅವುಗಳಿಂದಲೂ ಅಪಘಾತಗಳು ಸಂಭವಿಸಿ ಸಾರ್ವಜನಿಕರು ಗಾಯಗೊಂಡಿರುವ ಘಟನೆಗಳು ನಡೆದಿವೆ. ಆದರೂ ಸಂಬಂಧಪಟ್ಟ ಅಧಿಕಾರಿಗಳು ಸಂಚಾರ ಸುರಕ್ಷತೆ ಕುರಿತು ಅಗತ್ಯ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.ಆದ್ದರಿಂದ ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ, ಪುರಸಭೆಗೆ ಸೂಕ್ತ ನಿರ್ದೇಶನ ನೀಡಿ ಅಂಬೇಡ್ಕರ್ ವೃತ್ತ ಹಾಗೂ ಐಎಂಎ ಹಾಲ್ ಬಳಿ ರಬ್ಬರ್ ಹಂಪ್ಸ್ ಮತ್ತು ಸಂಚಾರ ಸಿಗ್ನಲ್‌ಗಳನ್ನು ಅಳವಡಿಸಬೇಕು.ಇಲ್ಲವಾದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನಿ ಸೇನೆ) ವತಿಯಿಂದ ಅರೆಬೆತ್ತಲೆ ಮೆರವಣಿಗೆ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆ ಎಚ್ಚರಿಸಿದೆ.

# ವದ್ದಟ್ಟಿ ಗ್ರಾಮದಲ್ಲಿ ಜಿಪಂ ಸಿಇಓ ಭೇಟಿ: ನರೇಗಾ ಕಾಮಗಾರಿಗಳ ಪರಿಶೀಲನೆ ಹಾಗೂ ಕೂಲಿಕಾರರೊಂದಿಗೆ ಸಂವಾದ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**




:ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಅವರು, ಬುಧವಾರ ಕುರುಗೋಡು ತಾಲೂಕಿನ ಯರಂಗಳಿಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವದ್ದಟ್ಟಿ ಗ್ರಾಮಕ್ಕೆ ದಿಢೀರ್ ಭೇಟಿ ನೀಡಿ, ಉದ್ಯೋಗ ಖಾತ್ರಿ (ವಿಬಿ–ಜಿ ರಾಮ್ –ಜಿ) ಯೋಜನೆಯಡಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ನೇರವಾಗಿ ಪರಿಶೀಲಿಸಿದರು.

ಸ್ಥಳದಲ್ಲಿದ್ದ ಕೂಲಿಕಾರರೊಂದಿಗೆ ನೇರ ಸಂವಾದ ನಡೆಸಿದ ಸಿಇಓ ಅವರು, ಕೆಲಸದ ಸಮಯ, ಹಾಜರಾತಿ ಹಾಗೂ ಯೋಜನೆಯಡಿ ದಿನವೊಂದಕ್ಕೆ ದೊರೆಯುತ್ತಿರುವ ಕೂಲಿ ಮೊತ್ತದ ವಿವರಗಳನ್ನು ಕೂಲಿಕಾರರಿಂದಲೇ ಪಡೆದುಕೊಂಡರು.*ವೈಯಕ್ತಿಕ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಲು ಸೂಚನೆ:*ಸ್ಥಳದಲ್ಲಿದ್ದ ಕಾಯಕ ಬಂಧುಗಳಿಗೆ ನಿರ್ದೇಶನ ನೀಡಿದ ಅವರು, ಹೊಸದಾಗಿ ಕೃಷಿಯೇತರ ಚಟುವಟಿಕೆಗಳಿಗೆ ಅನುಗುಣವಾಗಿ ಸೂಕ್ತ ಕಾಮಗಾರಿಗಳ ಪಟ್ಟಿಯನ್ನು ತಕ್ಷಣ ಸಿದ್ಧಪಡಿಸಬೇಕು ಎಂದು ತಿಳಿಸಿದರು.ಪ್ರತಿಯೊಂದು ಕುಟುಂಬಕ್ಕೂ ಆರ್ಥಿಕ ಭದ್ರತೆ ಸಿಗುವಂತಾಗಲು ವೈಯಕ್ತಿಕ ಕಾಮಗಾರಿಗಳಾದ ದನದ ಕೊಟ್ಟಿಗೆ ಹಾಗೂ ಕುರಿ/ಕೋಳಿ ಶೆಡ್ಡುಗಳು, ಕೃಷಿ ಹೊಂಡ ಹಾಗೂ ಸೋಕ್ ಪಿಟ್ (ಇಂಗು ಗುಂಡಿ), ಎರೆಹುಳು ಗೊಬ್ಬರ ತೊಟ್ಟಿ ಮತ್ತು ಅಜೋಲ ಘಟಕಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಕೆಲಸ ಪ್ರಾರಂಭಿಸಲು ಸೂಚಿಸಿದರು.

*ಪದವೀಧರ ಕೂಲಿಕಾರರೊಂದಿಗೆ ವಿಶೇಷ ಸಂವಾದ:*

ಪರಿಶೀಲನೆ ವೇಳೆ ಯೋಜನೆಯಡಿಯಲ್ಲಿ ಕೂಲಿ ಕೆಲಸ ನಿರ್ವಹಿಸುತ್ತಿದ್ದ ಬಿ.ಎ. ಪದವೀಧರ ವಿದ್ಯಾರ್ಥಿಗಳೊಂದಿಗೆ ಜಿಪ್ಮಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಅವರು ವಿಶೇಷ ಸಂವಾದ ನಡೆಸಿ, ಅವರ ಶ್ರಮದಾನವನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಕುರುಗೋಡು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪಂಪಾಪತಿ ಹಿರೇಮಠ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಶ್ರೀರಾಮ ರೆಡ್ಡಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕ ರೇಣುಕಾ ಸ್ವಾಮಿ, ಯರಂಗಳಿಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪರಶುರಾಮ್, ತಾಂತ್ರಿಕ ಸಂಯೋಜಕ ಮಲ್ಲಿಕಾರ್ಜುನ್, ಐ.ಇ.ಸಿ ಸಂಯೋಜಕ ಚಂದ್ರಶೇಖರ್, ತಾಂತ್ರಿಕ ಸಹಾಯಕಿ ಅರುಣಜ್ಯೋತಿ ಮತ್ತು ಬಿಎಫ್ಟಿ ಆಗಲೂರಪ್ಪ ಸೇರಿದಂತೆ ಗ್ರಾಮ ಕಾಯಕ ಮಿತ್ರರು, ಕಾಯಕ ಬಂಧುಗಳು ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.

# ಯುಜಿಡಿ ಕಾಮಗಾರಿ ಅಪೂರ್ಣ: ಅರ್ಚನ-ಪ್ರಕೃತಿ ಬಡಾವಣೆ ನಿವಾಸಿಗಳ ಆಕ್ರೋಶ ಕೊಳಚೆ ನೀರು ಉಕ್ಕಿ ಆರೋಗ್ಯ ಸಮಸ್ಯೆ; ಜಿಲ್ಲಾಡಳಿತ ಮಧ್ಯಪ್ರವೇಶಕ್ಕೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಕಪ್ಪಗಲ್ಲು ರಸ್ತೆಯ ವಾರ್ಡ್ ಸಂಖ್ಯೆ 24ರ ಅರ್ಚನ ಹಾಗೂ ಪ್ರಕೃತಿ ಬಡಾವಣೆಗಳಲ್ಲಿ ಅಪೂರ್ಣಗೊಂಡಿರುವ ಯುಜಿಡಿ ಕಾಮಗಾರಿಯನ್ನು ತಕ್ಷಣ ಪೂರ್ಣಗೊಳಿಸಿ ಸಾರ್ವಜನಿಕರ ಸಂಕಷ್ಟಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಬಡಾವಣೆಯ ನಿವಾಸಿಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ನಿವಾಸಿ ಶಂಕರ್ ಮಾತನಾಡಿ, 2024–25ನೇ ಸಾಲಿನಲ್ಲಿ ಶಾಸಕ ನಾರಾ ಭರತ್ ರೆಡ್ಡಿ ಅವರ ಅನುದಾನದಡಿ ರೂ.20 ಲಕ್ಷ ವೆಚ್ಚದಲ್ಲಿ ಯುಜಿಡಿ ಕಾಮಗಾರಿಗೆ ಅನುಮೋದನೆ ದೊರೆತಿದ್ದು, ಶೇ.75ರಷ್ಟು ಅನುದಾನ ಬಿಡುಗಡೆಯಾದ ಬಳಿಕ 2025–26ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾಮಗಾರಿ ಆರಂಭಿಸಲಾಯಿತು ಎಂದು ತಿಳಿಸಿದರು.

ಆದರೆ ರಸ್ತೆಗಳನ್ನು ಅಗೆದು ಪೈಪ್‌ಲೈನ್ ಹಾಗೂ ಕೊಳವೆಗಳನ್ನು ಅಳವಡಿಸಿದರೂ ಅವುಗಳನ್ನು ಮುಖ್ಯ ಒಳಚರಂಡಿ ಪೈಪ್‌ಲೈನ್‌ಗೆ ಸಂಪರ್ಕಿಸದೆ ಕಾಮಗಾರಿಯನ್ನು ಅರ್ಧದಲ್ಲೇ ಸ್ಥಗಿತಗೊಳಿಸಲಾಗಿದೆ. ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಿರುವುದಾಗಿ ಆರೋಪಿಸಿದರು.

ಸುಮಾರು 80ರಿಂದ 100 ಕುಟುಂಬಗಳು ವಾಸಿಸುತ್ತಿರುವ ಬಡಾವಣೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ನಿವಾಸಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಅವರು ಅಸಮಾಧಾನ ವ್ಯಕ್ತಪಡಿಸಿದರು.



ಪೈಪ್‌ಲೈನ್ ಹಾದು ಹೋಗುವ ಸ್ಥಳ ಖಾಸಗಿ ಜಮೀನಾಗಿದ್ದರೂ, ಮಾಸ್ಟರ್ ಪ್ಲಾನ್‌ನಲ್ಲಿ ಅದನ್ನು ರಸ್ತೆಯಾಗಿ ಗುರುತಿಸಲಾಗಿದೆ. ಆದರೆ ಸಂಬಂಧಿಸಿದ ಇಲಾಖೆಗಳ ಅನುಮತಿ ಪಡೆ–ಯದೆ ಅದೇ ಸ್ಥಳದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಲು ಮುಂದಾಗಿರುವುದು ಕಾಮಗಾರಿಗೆ ಮತ್ತಷ್ಟು

ಅಡ್ಡಿಯಾಗುವ ಸಾಧ್ಯತೆ ಇದೆ ಎಂದು ದೂರಿದರು.

ಬುಡಾ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಏಗಫಖಆ) ಅನುಮೋದನೆಯೊಂದಿಗೆ ಬಡಾವಣೆ ನಿರ್ಮಾಣಗೊಂಡಿದ್ದರೂ, ಯು–ಜಿಡಿ ಕಾಮಗಾರಿ ಪೂರ್ಣಗೊಳ್ಳದ ಕಾರಣ ಸೆಪ್ಟಿಕ್ ಟ್ಯಾಂಕ್‌ಗಳು ತುಂಬಿ ಕೊಳಚೆ ನೀರು ಹೊರ ಉಕ್ಕುತ್ತಿದೆ. ಇದರಿಂದ ಸೊಳ್ಳೆಗಳ ಕಾಟ, ದುರ್ವಾಸನೆ, ಕುಡಿಯುವ ನೀರು ಕಲುಷಿತಗೊಳ್ಳುವ ಅಪಾಯ ಹೆಚ್ಚಿದ್ದು, ಮಕ್ಕಳು ಹಾಗೂ ಹಿರಿಯ ನಾಗರಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿದರು.

ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ ಅಪೂರ್ಣ ಯುಜಿಡಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಆರೋಗ್ಯ ಮತ್ತು ಮೂಲಭೂತ ಸೌಲಭ್ಯಗಳನ್ನು ಕಾಪಾಡಬೇಕು ಎಂದು ನಿವಾಸಿಗಳು ಆಗ್ರಹಿಸಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಜಗದೀಶ್, ಶಂಕರ್, ಸಲ್ಲಾ ಹಂಪಾರೆಡ್ಡಿ, ಸಂದೀಪ್, ಡಾ,ಗೋವರ್ಧನ್ ರೆಡ್ಡಿ, ಹನುಮಂತ್ ರೆಡ್ಡಿ, ವೇಣುಗೋಪಾಲ್ ರೆಡ್ಡಿ,ಕೆಂಚಲಿಂಗಪ್ಪ,ಮಾಬು ಸುಭಾನಿ,ಪ್ರಕಾಶ್,ಗುರುಮೂರ್ತಿ,ಕುಮಾರಸ ್ವಾಮಿ, ಚಂದ್ರಶೇಖರ್ ಭಾಗವತಿ,ವಿನಯ್, ಸೇರಿದಂತೆ ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು.

# ಪ್ರತಿಯೊಬ್ಬ ಮತದಾರ ಕಡ್ಡಾಯವಾಗಿ ಮಾಹಿತಿ ನೀಡಿ: ಇಓ ದುಂಡಪ್ಪ




**ಕೊಪ್ಪಳ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ವಿಶೇಷ ಸಮಗ್ರಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ರಮ ಹಮ್ಮಿಕೊಂಡಿದ್ದು ಬೂತ್ ಮಟ್ಟದ ಅಧಿಕಾರಿಗೆ ಅಗತ್ಯ ಮಾಹಿತಿ ನೀಡಲು ಸಹಕರಿಸಬೇಕೆಂದು ಕೊಪ್ಪಳ ತಾಲೂಕ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗು ಕೊಪ್ಪಳ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಕರೆ ನೀಡಿದರು.

ಕೊಪ್ಪಳ ತಾಲೂಕ ಸ್ವೀಪ್ ಸಮಿತಿ ಹಾಗೂ ಕೊಪ್ಪಳ ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, ಮತದಾರರ ಸಾಕ್ಷರತಾ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ಮಂಗಳವಾರ (ಜು. 21ರಂದು) ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ವಿದ್ಯಾರ್ಥಿನಿಯರಿಂದ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಕಾರ್ಯಕ್ರಮದ ಮೂಲಕ ಅರ್ಹ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದು ಹಾಗೂ ಮರಣ ಹೊಂದಿರುವವರು, ಸ್ಥಳಾಂತರಗೊಂಡಿರುವವರು, ನಕಲು ಹೆಸರುಗಳು, ಮತ್ತು ಇತರ ಅನರ್ಹ ಮತದಾರರನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದು ಇದರ ಉದ್ದೇಶವಾಗಿದೆ. ಜೂನ್ 30 ರಿಂದ ಜುಲೈ 29 ರವರೆಗೆ ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರರ ವಿವರಗಳನ್ನು ಪರಿಶೀಲಿಸಲಿದ್ದಾರೆ. ಅಗತ್ಯ ಮಾಹಿತಿಯನ್ನು ಪ್ರತಿಯೊಬ್ಬರು ಸಲ್ಲಿಸಲು ಇದೊಂದು ಸದಾವಕಾಶ ಹಾಗು ಹೊಸದಾಗಿ ಸೇರ್ಪಡೆಗೆ ಅವಕಾಶವಿದೆ ಎಂದರು.

ಕಾರ್ಯಕ್ರಮದಲ್ಲಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರರಾದ ಶಿವಾನಂದ ಎ.ಆರ್., ಉಪ ಪ್ರಾಂಶುಪಾಲರಾದ ವಿ.ಜಿ ಸೂಡಿಮಠ, ಪಂಚಾಯತ ರಾಜ್ ತಾಲೂಕ ಪಂಚಾಯತ ಸಹಾಯಕ ನಿರ್ದೇಶಕ ಮಹೇಶ್, ಚುನಾವಣಾ ಸಾಕ್ಷರತಾ ಸಂಘದ ಕಾರ್ಯಕ್ರಮ ಅಧಿಕಾರಿ ಸಿದ್ದಪ್ಪ ಮೇಳಿ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಪರಶುರಾಮ್ ಕೆ., ಉಪನ್ಯಾಸಕ ಮಂಜುನಾಥ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಪೇಪರ್ ಲೀಕ್: ವಿದ್ಯಾರ್ಥಿಗಳ ಆಕ್ರೋಶ



**ಚಿಕ್ಕಬಳ್ಳಾಪುರ:** ನೀಟ್ ಪೇಪರ್ ಲೀಕ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದಿರುವ ದೌರ್ಜನ್ಯವನ್ನು ಖಂಡಿಸಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕುಬೇರ್ ಅಚ್ಚು ಅವರ ನೇತೃತ್ವದಲ್ಲಿ ನಗರದ ಶಿಡ್ಲಘಟ್ಟ ವೃತ್ತದಲ್ಲಿ ಬುಧವಾರ ಜನಸಭೆ, ಪ್ರತಿಭಟನೆ ನಡೆಸಲಾಯಿತು.ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು, ಶಿಕ್ಷಣ ವ್ಯವಸ್ಥೆಯಲ್ಲಿನ ಅಕ್ರಮಗಳು ಹಾಗೂ ದೆಹಲಿಯಲ್ಲಿ ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ನಡೆದಿರುವ ದೌರ್ಜನ್ಯವನ್ನು ಖಂಡಿಸಿದರು. ಸಭೆಯಲ್ಲಿ ಮಾತನಾಡಿದ ಎಐಸಿಸಿ ಕಾರ್ಯದರ್ಶಿ ಸಂಪತ್ ಅವರು ಕನಸುಗಳನ್ನು ಹೊತ್ತು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.ಆದರೆ ಪೇಪರ್ ಲೀಕ್‌ನಂತಹ ಘಟನೆಗಳು ಅವರ ಭವಿಷ್ಯವನ್ನು ಕುಗ್ಗಿಸುವ ಕೆಲಸಮಾಡುತ್ತವೆ.ಈ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರೆ,ಅವರ ಮೇಲೆ ದೌರ್ಜನ್ಯ ನಡೆಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.ತಮಗಾದ ಅನ್ಯಾಯವನ್ನು ವಿರೋಧಿಸಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿಗಳ ಕಣ್ಣೀರು ನಮಗೂ ದುಃಖ ಉಂಟುಮಾಡುತ್ತಿದೆ.ಆದರೆ ಪೇಪರ್ ಲೀಕ್ ನಲ್ಲಿ ಶಾಮಲಾಗಿರುವವರ ವಿರುದ್ಧ ಸೂಕ್ತ ಕ್ರಮ ಆಗಿಲ್ಲ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪ ದೂರಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ವಿಧ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು,ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುವವರೆಗೆ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಅವರು ಹೇಳಿದರು. ತೆಲಂಗಾಣ ರಾಜ್ಯದ ಕಾಂಗ್ರೆಸ್ ಮುಖಂಡರು ನಿರಲ ಶಾರದ,ಬೆಳ್ಳಯ್ಯ ನಾಯಕ್, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ, ಯುವ ಕಾಂಗ್ರೆಸ್ ಮುದಾಸಿರ್, ಶಾಹಿದ್ ಅಬ್ಬಾಸ್, ಸಂದೀಪ್ ಚಕ್ರವರ್ತಿ ಇತರರು ಉಪಸ್ಥಿತರಿದ್ದರು.

# ಶಾಲಾ ವಾಹನಗಳ ಮೇಲೆ ಆರ್‌ಟಿಒ ಕಟ್ಟುನಿಟ್ಟಿನ ಕ್ರಮ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಶಾಲಾ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸಾರಿಗೆ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ನಿಯಮ ಮೀರಿ ಸಂಚರಿಸುತ್ತಿದ್ದ ಶಾಲಾ–ಕಾಲೇಜು ವಾಹನಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿದ್ದು, ಇತ್ತೀಚೆಗೆ ನಡೆದ ಬೃಹತ್ ತಪಾಸಣಾ ಕಾರ್ಯಾಚರಣೆಯಲ್ಲಿ ನಿಯಮ ಉಲ್ಲಂಘಿಸಿದ 103 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ, ರೂ.11.82 ಲಕ್ಷ ದಂಡ ಹಾಗೂ ತೆರಿಗೆ ವಸೂಲಿ ಮಾಡಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ ತಿಳಿಸಿದರು.

ನಗರದ ಸಾರಿಗೆ ಇಲಾಖೆ ಕಚೇರಿಯಲ್ಲಿ ಸೋಮವಾರ ಜಿಲ್ಲೆಯ ಎಲ್ಲಾ ಶಿಕ್ಷಣ ಸಂಸ್ಥೆಗಳ ಶಾಲಾ ಮತ್ತು ಕಾಲೇಜು ವಾಹನಗಳ ಚಾಲಕರಿಗೆ ಸಾರಿಗೆ ನಿಯಮಗಳ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

15 ವರ್ಷ ಪೂರ್ಣಗೊಂಡ ಹಾಗೂ ಸಂಚಾರಕ್ಕೆ ಅನರ್ಹವಾಗಿದ್ದ ಸುಮಾರು 61 ಶಾಲಾ ವಾಹನಗಳ ನೋಂದಣಿ ಪ್ರಮಾಣಪತ್ರ (ಆರ್‌ಸಿ) ರದ್ದುಪಡಿಸಿದೆ. ಸೂಕ್ತ ರಹದಾರಿ (ಪರ್ಮಿಟ್) ಹಾಗೂ ಅರ್ಹತಾ ಪತ್ರ ಇಲ್ಲದೆ ರಸ್ತೆಯಲ್ಲಿ ಚಲಿಸುತ್ತಿದ್ದ ಸುಮಾರು 40ಕ್ಕೂ ಹೆಚ್ಚು ವಾಹನಗಳನ್ನು ವಶಕ್ಕೆ ಪಡೆಯಲಾಗಿದ್ದು,



ಹಡಗಲಿಯಲ್ಲಿ 11 ವಾಹನಗಳು ಸೇರಿದಂತೆ ಹಲವು ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ವರದಿಯಾದ 103 ಪ್ರಕರಣಗಳಿಂದ ರೂ.5.37 ಲಕ್ಷ ತೆರಿಗೆ ಹಾಗೂ ರೂ.6.45 ಲಕ್ಷ ದಂಡ ಸೇರಿದಂತೆ ಒಟ್ಟು ರೂ.11.82 ಲಕ್ಷ ಮೊತ್ತ ದಂಡ ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದರು.

**ಕಡ್ಡಾಯವಾಗಿ ರಸ್ತೆ ಸುರಕ್ಷತಾ ಮಾನದಂಡ ಪಾಲಿಸಿ**

ಮಕ್ಕಳ ಪ್ರಾಣರಕ್ಷಣೆ ಅತ್ಯಂತ ಪ್ರಮುಖವಾಗಿದ್ದು, ಪ್ರತಿಯೊಂದು ಶಾಲಾ–ಕಾಲೇಜು ವಾಹನಗಳಲ್ಲಿ ವಾಹನದ ಲೊಕೇಶನ್ ಹಾಗೂ ಒಳಗಿನ ಚಟುವಟಿಕೆ ತಿಳಿಯಲು ಜಿ ಪಿ ಎಸ್ ಹಾಗೂ ಸಿಸಿಟಿವಿ ಅಳವಡಿಸಬೇಕು. ಆಕಸ್ಮಿಕ ಅಪಾಯದ ಸಮಯದಲ್ಲಿ ಬಳಸಲು ತುರ್ತು ನಿರ್ಗಮನ ಬಾಗಿಲು ಬಳಸಬೇಕು. ಬೆಂಕಿ ಅವಘಡಗಳಂತಹ ಪ್ರಕರಣ ತಡೆಯಲು ಅಗ್ನಿಶಾಮಕ ಉಪಕರಣ ಜತೆಗೆ ಮಿತ ವೇಗದಲ್ಲಿ ಚಾಲನೆ ಮಾಡಬೇಕು ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ ಸ್ಥಳದಲ್ಲಿದ್ದ ಶಾಲಾ ವಾಹನ ಚಾಲಕರಿಗೆ ಪ್ರತ್ಯೇಕ ಸಲಹೆ ಸೂಚನೆ ನೀಡಿದ ಅವರು ಮಕ್ಕಳು ವಾಹನ ಹತ್ತುವಾಗ ಮತ್ತು ಇಳಿಯುವಾಗ ಸುರಕ್ಷತೆ ನೋಡಿಕೊಳ್ಳಲು ಪ್ರತಿಯೊಂದು ಬಸ್‌ನಲ್ಲಿ ಒಬ್ಬ ಸಹಾಯಕರನ್ನು ಇರಿಸಿಕೊಳ್ಳಬೇಕು. ಚಾಲಕರು ಕಡ್ಡಾಯವಾಗಿ ಸಮವಸ್ತ್ರ ಧರಿಸಿರಬೇಕು. ಯಾವುದೇ ಕಾರಣಕ್ಕೂ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬಾರದು. ಚಾಲನಾ ಪರವಾನಗಿ, ಆರ್‌ಸಿ, ಎಫ್‌ಸಿ, ಇನ್ಶೂರೆನ್ಸ್ ಹಾಗೂ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರಗಳು ಚಾಲ್ತಿಯಲ್ಲಿರಬೇಕು. ಮಕ್ಕಳ ಸುರಕ್ಷತೆಯಲ್ಲಿ ಯಾವುದೇ ರಾಜಿ ಇಲ್ಲ. ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು.

**ಮೂರು ತಿಂಗಳಲ್ಲಿ ರೂ.1.09 ಕೋಟಿ ದಂಡ ವಸೂಲಿ:** ಸಂಚಾರ ನಿಯಮಗಳ ಉಲ್ಲಂಘನೆ ಮತ್ತು ವಾಹನಗಳ ಸೂಕ್ತ ದಾಖಲಾತಿಗಳಿಲ್ಲದೆ ಸಂಚರಿಸುವವರ ವಿರುದ್ಧ ಸಾರಿಗೆ ಇಲಾಖೆ ಕಠಿಣ ಕಾನೂನು ಕ್ರಮ ಜರುಗಿಸಿದ್ದು, ಕಳೆದ ಮೂರು ತಿಂಗಳಲ್ಲಿ ಬರೋಬ್ಬರಿ 1.09 ಕೋಟಿ ರೂಪಾಯಿ ದಂಡ ವಸೂಲಿ ಮಾಡಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ ತಿಳಿಸಿದ್ದಾರೆ.

ಏಪ್ರಿಲ್‌ನಿಂದ ಜೂನ್ 2026ರ ವರೆಗಿನ ತ್ರೈಮಾಸಿಕ ಅವಧಿಯಲ್ಲಿ ಸಾರಿಗೆ ಇಲಾಖೆ ಅಧಿಕಾರಿಗಳು ನಿರಂತರ ಕಾರ್ಯಾಚರಣೆ ನಡೆಸಿದ್ದು, ಶಾಲಾ ಬಸ್‌ಗಳನ್ನು ಹೊರತುಪಡಿಸಿ ಲಾರಿ, ಮ್ಯಾಕ್ಸಿಕ್ಯಾಬ್, ಆಟೋರಿಕ್ಷಾ ಸೇರಿದಂತೆ ಬಹುತೇಕ ಎಲ್ಲಾ ವಾಣಿಜ್ಯ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ತಪಾಸಣೆ ವೇಳೆ ವಾಹನಗಳ ಫಿಟ್‌ನೆಸ್ ಪ್ರಮಾಣಪತ್ರ ನವೀಕರಿಸದಿರುವುದು, ವಾಹನ ವಿಮೆ ಇಲ್ಲದೆ ವಾಹನ ಚಾಲನೆ, ವಾಯುಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಇಲ್ಲದಿರುವುದು, ಮಿತಿಮೀರಿದ ಸರಕು ಸಾಗಣೆ ಮತ್ತು ಪರವಾನಗಿ ಇಲ್ಲದೆ ವಾಹನ ಚಲಾಯಿಸುವುದು ಸೇರಿದಂತೆ ಒಟ್ಟು 1931 ಪ್ರಕರಣ ದಾಖಲಿಸಲಾಗಿದ್ದು, ಅದಕ್ಕಾಗಿ ರೂ.1,09,18,488 ದಂಡ ವಸೂಲಾತಿ ಮಾಡಲಾಗಿದೆ ಎಂದರು.

ಈ ವೇಳೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಕೆ.ದಾಮೋದರ, ಹಿರಿಯ ಮೋಟಾರ್ ವಾಹನ ನಿರೀಕ್ಷಕರು ಪ್ರದೀಪ್ ಹಡಗಲಿ, ಮಹ್ಮದ್ ಖಾಲಿದ್, ಮೋಟಾರ್ ವಾಹನ ನಿರೀಕ್ಷಕರು ಶರಣ ಬಸವ ಹಾಗೂ ಸತ್ಯನಾರಾಯಣ ರೆಡ್ಡಿ ಸೇರಿದಂತೆ ಶಾಲಾ ವಾಹನಗಳ ಚಾಲಕರು ಇದ್ದರು.

# ಇಚ್ಛಾಶಕ್ತಿ, ಕ್ರಿಯಾಶಕ್ತಿಯಿಂದ ಜ್ಞಾನಶಕ್ತಿ ಪ್ರಾಪ್ತಿ: ಸಹನಾ ರಾವ್

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ವಿದ್ಯಾರ್ಥಿಗಳಲ್ಲಿ ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ ಬೆರತಾಗ ಮಾತ್ರ ಜ್ಞಾನಶಕ್ತಿ ಸಂಪಾದನೆ ಸಾಧ್ಯವಾಗುತ್ತದೆ ಎಂದು ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಸಹನಾ ರಾವ್ ಹೇಳಿದರು.

ನಗರದ ಬಿ.ವಿ.ವಿ. ಸಂಘದ ನೂತನ ಸಭಾಭವನದಲ್ಲಿ ಬುಧವಾರ ನಡೆದ ಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ 2026–27ನೇ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದಲ್ಲಿ ಸೋಲನ್ನು ಒಪ್ಪಿಕೊಂಡು ಅದ–ರಿಂದ ಪಾಠ ಕಲಿತಾಗಲೇ ಗೆಲುವು ಸಾಧಿಸಲು ಸಾಧ್ಯ. ಸಕಾರಾತ್ಮಕ ಚಿಂತನೆಗಳ ಮೂಲಕ ಮಾನಸಿಕ ಶಕ್ತಿಯನ್ನು ಗಟ್ಟಿಗೊಳಿಸಿ ಆತ್ಮಬಲವನ್ನು




ಹೆಚ್ಚಿಸಿಕೊಂಡಾಗ ಜ್ಞಾನದ ಅರಿವು ಮೂಡುತ್ತದೆ ಹಾಗೂ ಸಾಧನೆಯ ದಾರಿ ತೆರೆದುಕೊಳ್ಳುತ್ತದೆ. ವಿದ್ಯಾರ್ಥಿಗಳ ಸರ್ವಾಂಗೀಣ ವಿಕಸನಕ್ಕೆ ಕಲೆ, ಸಾಹಿತ್ಯ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಅತ್ಯಂತ ಅಗತ್ಯ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಬಾವಿ ಮಾತನಾಡಿ, ಪದವಿ ಪೂರ್ವ ಹಂತವು ವಿದ್ಯಾರ್ಥಿ ಜೀವನದ ಅತ್ಯಂತ ಮಹತ್ವದ ಘಟ್ಟವಾಗಿದೆ. ಪಾಲಕರ ಕನಸುಗಳನ್ನು ನನಸಾಗಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ನೀಡುವಂತೆ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಬೇಕು. ಕಲಿತ ಶಾಲೆ ಹಾಗೂ ಕಾಲೇಜಿನ ಜೊತೆಗೆ ತಂದೆ–ತಾಯಿಗಳಿಗೆ ಕೀರ್ತಿ ತರುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ದ್ವಿತೀಯ ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಅನುಷಾ ಹಕ್ಕೇರಿ, ಮಾಳಪ್ಪ ಅನಸೂರ್ ಹಾಗೂ ಪ್ರಶಾಂತ್ ಬಿರಾದಾರ ಅವರನ್ನು ಸನ್ಮಾನಿಸಲಾಯಿತು. ಭೌತಶಾಸ್ತ್ರ ಹಾಗೂ ಕನ್ನಡ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿಗಳಿಗೂ ಗೌರವ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನೂ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜುಗಳ ಆಡಳಿತ ಮಂಡಳಿಯ ಪದನಿಮಿತ್ತ ಕಾರ್ಯದರ್ಶಿ ಡಾ. ಎಸ್. ಎಂ. ಗಾಂವಕರ, ಪದವಿ ವಿಭಾಗದ ಪ್ರಾಚಾರ್ಯೆ ಶ್ರೀಮತಿ ಎಸ್.ಆರ್. ದೇಶಪಾಂಡೆ, ಪದವಿ ಪೂರ್ವ ವಿಭಾಗದ ಪ್ರಾಚಾರ್ಯ ಡಾ. ಎನ್.ಎಚ್. ಬೇವಿನಹಳ್ಳಿ, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷೆ ಶ್ರೀಮತಿ ಪ್ರತಿಭಾ ಕಟ್ಟಿಮನಿ, ದೈಹಿಕ ನಿರ್ದೇಶಕ ಎಸ್.ಎನ್. ಮಂಕಣಿ ಹಾಗೂ ಅಕ್ಷಯ್ ಗಲಗಲಿ ಉಪಸ್ಥಿತರಿದ್ದರು.

ಎಸ್.ಎಂ.ತಿಪ್ಪಣ್ಣವರ ಪರಿಚಯ ಮಾಡಿಕೊಟ್ಟರು. ವಿದ್ಯಾರ್ಥಿನಿಯರು ಪ್ರಾರ್ಥನೆ ನೆರವೇರಿಸಿದರು. ಶ್ರೀಮತಿ ಜಿ.ಎಚ್.ಜಿಗಳೂರ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಪ್ರತಿಭಾ ಕಟ್ಟಿಮನಿ ವಂದಿಸಿದರು.

# ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸದಲ್ಲಿ ಪಾಲಕ–ಶಿಕ್ಷಕರ ಪಾತ್ರ ಅನನ್ಯ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಮತ್ತು ವ್ಯಕ್ತಿತ್ವದ ವಿಕಾಸದಲ್ಲಿ ಪಾಲಕರು ಹಾಗೂ ಶಿಕ್ಷಕರು ಮಹತ್ವದ ಪಾತ್ರವನ್ನು ವಹಿಸುತ್ತಾರೆ ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ಸ್ಥಳೀಯ ವಿದ್ಯಾ ಪ್ರಸಾರಕ ಮಂಡಳದ ಎಸ್. ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಬಿಎ ಮತ್ತು ಬಿಕಾಂ ವಿದ್ಯಾರ್ಥಿಗಳಿಗೆ ಬುಧವಾರ ಆಯೋಜಿಸಿದ್ದ ಓರಿಯಂಟೇಶನ್ ಕಾರ್ಯಕ್ರಮ 'ಸ್ಪಂದನ'ದಲ್ಲಿ ಅವರು ಮಾತನಾಡಿದರು.

ಶೇಕಡಾ 30 ರಷ್ಟು ಯುವಕರು ಮಾತ್ರ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದು ಅಂತಹ ಅವಕಾಶವನ್ನು ಪಡೆದಿರುವ ವಿದ್ಯಾರ್ಥಿಗಳು ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಪಾಲಕರ ಕನಸನ್ನು ಸಾಕಾರಗೊಳಿಸಬೇಕು.



ಕಾಲೇಜಿಗೆ ಹೊಸದಾಗಿ ಸೇರ್ಪಡೆಯಾದ ಯುವಶಕ್ತಿಯ ಅಭಿವೃದ್ಧಿಯೇ ಸಂಸ್ಥೆಯ ಗು–ರಿಯಾಗಿದ್ದು ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಪಠ್ಯದ ಜೊತೆಗೆ ಪಠ್ಯಪೂರಕ ಚಟುವಟಿಕೆಗಳನ್ನು ಆಯೋಜಿಸಲಾಗುವುದು. ಅವುಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಬೇಕು ಎಂದರು.

ಪೈಪೋಟಿಯನ್ನು ಸಮರ್ಥವಾಗಿ ಎದುರಿಸಲು ಅಧ್ಯಯನದ ಜೊತೆಗೆ ಸಂವಹನ ಮತ್ತು ಕಂಪ್ಯೂಟರ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಶ್ರದ್ಧೆ,ಪರಿಶ್ರಮ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಮಾತ್ರ ಯಶ ಸಾಧ್ಯ ಎಂಬ ಅಂಶವನ್ನು ಅರಿತು ಮುನ್ನಡೆಯಬೇಕು.

ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು.ಮೊಬೈಲ್‌ಗೆ ದಾಸರಾಗದೇ ಓದುವ ಸಂಸ್ಕೃತಿಯನ್ನು ರೂಢಿಸಿಕೊಂಡಲ್ಲಿ ಜ್ಞಾನದ ಕ್ಷಿತಿಜ ವಿಸ್ತಾರವಾಗುವುದು.

ಮಹಾವಿದ್ಯಾಲಯದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಶಿಸ್ತನ್ನು ಅಳವಡಿಸಿಕೊಂಡು ಕಾಲೇಜಿನ ಹಿರಿಮೆ–ಗರಿಮೆಯನ್ನು ಹೆಚ್ಚಿಸುವಂತಹ ಸಾಧನೆ ಮಾಡುವಂತೆ ಸಲಹೆ ನೀಡಿದರು.

ಆಯ್‌ಕ್ಯೂಎಸಿ ಸಂಯೋಜಕ ಡಾ.ಎಸ್. ಎಸ್.ಹಂಗರಗಿ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ವಿವರ ನೀಡಿದರೆ, ಗ್ರಂಥಾಲಯ ಸೌಲಭ್ಯ ಕುರಿತು ಡಿ.ಎಚ್.ಬಿರಾದಾರ, ಪ್ರವೇಶ ಹಾಗೂ ವಿವಿಧ ಸ್ಕಾಲರಶಿಪ್‌ಗಳ ಬಗ್ಗೆ ರಾಜು ಚವ್ಹಾಣ,ಎನ್‌ಎಸ್‌ಎಸ್ ಬಗ್ಗೆ ಎಸ್.ವೈ.ಬೊಮ್ಮಣ್ಣವರ, ಎನ್‌ಸಿಸಿ ಬಗ್ಗೆ ಎಂ.ಡಿ.ಕೋರವಾರ ಮಾತನಾಡಿದರು.

ಉಪನ್ಯಾಸಕಿ ಕೀರ್ತಿ ದಾಸರ ಪ್ರಾರ್ಥಿಸಿದರು. ಉಪನ್ಯಾಸಕಿ ಗೀತಾ ಕಿಲಬನೂರ ನಿರೂಪಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಎಸ್.ಎಂ.ಹಡಪದ ವಂದಿಸಿದರು.


# ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಯಾವುದೇ ಯೋಜನೆ ಅಥವಾ ಕಾಮಗಾರಿಗಳು ಅನಗತ್ಯವಾಗಿ ವಿಳಂಬವಾಗದಂತೆ ನೋಡಿಕೊಂಡು ಗುರಿ ಸಾಧನೆಗೆ ಕ್ರಮವಹಿಸಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೊಹಮ್ಮದ ಮೊಹಸೀನ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಬುಧವಾರ ಜರುಗಿದ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳು ನಿಗದಿತ ಗುರಿಯನ್ನು ಕಡ್ಡಾಯವಾಗಿ ಸಾಧಿಸಬೇಕು. ಸರಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಅಧಿಕಾರಿಗಳು ಕ್ಷೇತ್ರಮಟ್ಟದಲ್ಲಿ ನಿರಂತರ ಮೇಲ್ವಿಚಾರಣೆ ನಡೆಸಬೇಕು. ಗುರಿ ಸಾಧನೆಯಲ್ಲಿ ಹಿಂದುಳಿದ ಇಲಾಖೆಗಳು ತಕ್ಷಣ ಕಾರ್ಯಯೋಜನೆ ರೂಪಿಸಿ ಪ್ರಗತಿ ಸಾಧಿಸಬೇಕು ಎಂದರು.

ಗ್ರಾಮೀಣ ಕುಡಿಯುವ ನೀರು ಯೋಜನೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಬರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಈ ವರ್ಷ ಮಳೆಯ ಅಭಾವದಿಂದ ಕೃಷಿ ಕೂಲಿ ಕಾರ್ಮಿಕರ ಕೈಗೆ ಉದ್ಯೋಗ ಸಿಗುತ್ತಿಲ್ಲ. ವಿಬಿಜಿರಾಮ್‌ಜಿ ಯೋಜನೆಯ ಮೂಲಕ ಅರ್ಹ ಕೂಲಿ ಕಾರ್ಮಿಕರಿಗೆ ಉದ್ಯೋಗದ ಭದ್ರತೆ ಒದಗಿಸುವ ಕೆಲಸವಾಗಬೇಕು. ಈ ಬಗ್ಗೆ ಹೆಚ್ಚಿನ ಗಮನಹರಿಸಲು ಜಿಲ್ಲಾಧಿಕಾರಿ ಹಾಗೂ ಜಿ.ಪಂ ಸಿಇಓಗೆ ತಿಳಿಸಿದರು.



ವಿಬಿಜಿರಾಮಜಿ ಯೋಜನೆಯ ಮೂಲಕ ರೈತರಿಗೆ ಕೃಷಿ ಹೊಂಡ ಕೈಗೊಳ್ಳಲು ಅವಕಾಶವಿದ್ದು, ಮಾಹಿತಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ನೀಡುವಂತೆ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಅವರಿಗೆ ಸೂಚಿಸಿದರೆ, ಕೃಷಿ ಇಲಾಖೆಯವರು ಮಾಹಿತಿ ಕೊಡುವವರೆಗೆ ಕಾಯದೇ ತಾಲೂಕಾ ಮಟ್ಟದ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕೃಷಿ ಹೊಂಡಗಳ ಬೇಡಿಕೆಯ ಪಟ್ಟಿಯನ್ನು ಪಡೆದು–ಕೊಂಡು ಚುರುಕಾಗಿ ಕೆಲಸ ನಿರ್ವಹಿಸಲು ತಿಳಿಸಿದ ಅವರು, ಈ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಬೇಕೆಂದರು.

ಆರೋಗ್ಯ ಇಲಾಖೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ಔಷಧಿಗಳು ಮತ್ತು ಅಗತ್ಯ ಸೌಲಭ್ಯಗಳ ಲಭ್ಯತೆ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ತಾಯಿ–ಮಗು ಆರೋಗ್ಯ, ಲಸಿಕಾ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಕ್ರಮವಹಿಸಬೇಕು. ಹಾವು ಕಡಿತದ ಪ್ರಕರಣಗಳಿಗೆ ತಕ್ಷಣ ಚಿಕಿತ್ಸೆ ದೊರೆಯಂತಾಗಿ ಮರಣ ಪ್ರಮಾಣ ಕಡಿಮೆಯಾಗಬೇಕು. ಆಯುಷ್ ಇಲಾಖೆ ತಮ್ಮ ವ್ಯಾಪ್ತಿಯ ಆಸ್ಪತ್ರೆಗಳಿಗೆ ಭೇಟಿ ನೀಡಿ ಒಪಿಡಿ ಮಾಹಿತಿ, ಚಿಕಿತ್ಸೆ ನೀಡಿದ ವರದಿಯನ್ನು ನೀಡಲು ತಿಳಿಸಿದರು. ವೈದ್ಯರ ಕೊರತೆ ಇದ್ದಲ್ಲಿ ಕೇಂದ್ರ ಕಚೇರಿಗೆ ಪತ್ರದ ಮೂಲಕ ತಿಳಿಸಿ, ರೋಗಿಗಳಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಲು ಸೂಚಿಸಿದರು.

ಶಿಕ್ಷಣ ಇಲಾಖೆಯಲ್ಲಿ ಶಾಲೆಗಳ ಮೂಲಸೌಕರ್ಯ ಅಭಿವೃದ್ದಿ, ವಿದ್ಯಾರ್ಥಿಗಳ ಹಾಜರಾತಿ, ಎಸ್.ಎಸ್. ಎಲ್.ಸಿ ಹಾಗೂ ಪಿಯುಸಿ ಫಲಿತಾಂಶ ಸುಧಾರಣೆಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲಿಸಿ ಕಡಿಮೆ ಫಲಿತಾಂಶ ಹೊಂದಿದ ಶಾಲೆಗಳ ಮುಖ್ಯೋಪಾದ್ಯಾಯರ ಮೇಲೆ ಏನು ಕ್ರಮವಹಿಸಿದ್ದೀರಿ ಎಂದು ಪ್ರಶ್ನಿಸಿದಾಗ, ಈಗಾಗಲೇ 25 ಶಾಲೆಗಳಿಗೆ ನೋಟಿಸ್ ನೀಡಲಾಗಿದ್ದು, ಫಲಿತಾಂಶ ಸುಧಾರಣೆಗೆ ಜಿ.ಪಂ ಸಿಇಓ ನಿರ್ದೇಶನದಂತೆ ಆನ್‌ಲೈನ್ ಕ್ಲಾಸ್‌ಗಳಿಗೆ ಕ್ರಮವಹಿಸಲಾಗುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸಭೆಗೆ ತಿಳಿಸಿದರು. ವಾರದೊಳಗೆ ಮಕ್ಕಳಿಗೆ ಶೂ ವಿತರಣೆಗೆ ಕ್ರಮಕೈಗೊಳ್ಳಲು ತಿಳಿಸಿದರು.

ಕೃಷಿ, ತೋಟಗಾರಿಕೆ ಇಲಾಖೆ ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೃಷಿ ಸಲಹೆಗಳನ್ನು ಸಮಯಕ್ಕೆ ಸರಿಯಾಗಿ ತಲುಪಿಸಲು ತಿಳಿಸಿದ ಅವರು ವಿಬಿಜಿರಾಮಜಿ ಯೋಜನೆಯಡಿ ಕ್ರೀಯಾಯೋಜನೆ ರೂಪಿಸಬೇಕು. ಬೆಳೆವಿಮೆ, ಬೆಳೆ ಸಮೀಕ್ಷೆ ಹಾಗೂ ತೋಟಗಾರಿಕೆ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡಲು ತಿಳಿಸಿದರು.

ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತರಾಜ್ ಇಲಾಖೆ ಉದ್ಯೋಗ ಖಾತ್ರಿ ಯೋಜನೆ ಮಾನವ ದಿನಗಳ ಹೆಚ್ಚಿನ ಸೃಷ್ಠಿ, ಗ್ರಾಮ ಪಂಚಾಯತ ಅಭಿವೃದ್ಧಿ ಕಾಮಗಾರಿ, ಸ್ವಚ್ಚತಾ ಕಾರ್ಯಗಳನ್ನು ನಿಗದಿತ ಗಡುವಿನೊಳಗೆ ಪೂರ್ಣಗೊಳಿಸಲು ಸೂಚಿಸಿದರು.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು ವಸತಿ ನಿಲಯಗಳಲ್ಲಿ ಮೆನುವಿನಂತೆ ಗುಣಮಟ್ಟದ ಆಹಾರ ಒದಗಿಸುವ ಬಗ್ಗೆ ಖಚಿತಪಡಿಸಿಕೊಳ್ಳಿ, ಅಗತ್ಯ ಮೂಲಭೂತ ಸೌಲಭ್ಯ ಇರುವಂತೆ ಶುಚಿತ್ವ ಹಾಗೂ ಸ್ವಚ್ಚತೆಗೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳು ಗ್ರಂಥಾಲಯ ಸದುಪಯೋಗಪಡಿಸಿಕೊಳ್ಳಲು ಅನುಕೂಲವಾಗುವಂತೆ ಸಕಲ ವ್ಯವಸ್ಥೆ ಮಾಡಿಕೊಳ್ಳಬೇಕು. ಅಲೆಮಾರಿ ಅರೆಅಲೆಮಾರಿ ವಿದ್ಯಾರ್ಥಿಗಳು ವಿವಿಧ ವಸತಿ ನಿಲಯದಲ್ಲಿ ಇರುವ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಕುರಿತು ನಿಗಾವಹಿಸಲು ಮಹಮ್ಮದ ಮೋಹಿಸಿನ್ ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಗಜಾನನ ಬಾಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹೀರೆ, ಜಿ.ಪಂ ಉಪ ಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ, ಜಿ.ಪಂ ಯೋಜನಾ ನಿರ್ದೇಶಕ ಸಿದ್ದರಾಮೇಶ್ವರ ಉಕ್ಕಲಿ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಇದ್ದರು.

# ₹4.57 ಕೋಟಿ ಸ್ವತ್ತು ವಾರಸುದಾರರಿಗೆ ಹಿಂದಿರುಗಿಸಿದ ಪೊಲೀಸರು



**ವಿಜಯನಗರ:** ಜಿಲ್ಲೆಯ ಕಳೆದ ಒಂದುವರೆ ವರ್ಷದಲ್ಲಿ ಕಳ್ಳುವಾದ ಸುಮಾರು 150 ಸ್ವತ್ತಿನ ಪ್ರಕರಣಗಳಲ್ಲಿ ವಶಪಡಿಸಿಕೊಂಡ 4,57,08,809 ರೂಪಾಯಿ ಮೌಲ್ಯದ ಮೌಲ್ಯವನ್ನು ನಗರದ ಜಿಲ್ಲಾ ಪೊಲೀಸ್ ಪೆರೇಡ್ ಮೈದಾನದಲ್ಲಿ ಸ್ವತ್ತಿನ ಕವಾಯತ್ ನಡೆಸುವ ಮೂಲಕ ಬಳ್ಳಾರಿ ವಲಯ ಪೊಲೀಸ್ ಮಹಾ ನಿರೀಕ್ಷಕರು ಡಾ.ಪಿ.ಎಸ್ ಹರ್ಷ ಅವರ ನೇತೃತ್ವದಲ್ಲಿ ವಿಜಯನಗರ ಎಸ್ ಪಿ.ಜಾಹ್ನವಿ ಅವರು ವಾರಸುದಾರರಿಗೆ ಮರಳಿಸಿದರು.

ಹೌದು ವಿಜಯನಗರ ಜಿಲ್ಲಾದ್ಯಂತ 1.ಜ.2025 ರಿಂದ 30–ಜೂ–2026 ರ ವರೆಗೆ ಜಿಲ್ಲೆಯ ಹೊಸಪೇಟೆ,ಹೂವಿನ ಹಡಗಲಿ ಹಗರಿಬೊಮ್ಮನಹಳ್ಳಿ ಹರಪನಹಳ್ಳಿ ಕೂಡ್ಲಿಗಿ ಠಾಣೆಯ ವ್ಯಾಪ್ತಿಯ ಸ್ವತ್ತು ಕಳುವಾದ 352 ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ 150 ಪ್ರಕರಣಗಳನ್ನು ಪತ್ತೆ ಮಾಡಿ ಪೊಲೀಸ್ ಠಾಣೆ ವ್ಯಾಪ್ತಿಯ

ಡಕಾಯಿತ, ದರೋಡೆ ಹಗಲು, ರಾತ್ರಿ. ಮನೆ ಕಳ್ಳತನ ಜಾನುವಾರು ಕಳ್ಳತನ ವಂಚನೆ ಪ್ರಕರಣಗಳು, ಇತರೆ ಕಳ್ಳತನ, ಮೊಬೈಲ್ ಪತ್ತೆ(1477)ಸೈಬರ್ ಅಪರಾಧದಲ್ಲಿ ಪತ್ತೆ. ಚಿನ್ನಾಭರಣ,ಬೆಳ್ಳಿಆಭರಣ, ನಗದು ಹಣ, 4ವಿಲ್ಲರ್ ವಾಹನಗಳು ವಾಹನಗಳು(10)2 ವಿಲ್ಲರ್ ವಾಹನಗಳು(83)ಒಟ್ಟು 150 ಪ್ರಕರಣ ನಾಲ್ಕು ಕೋಟಿ ಐವತ್ತೇಳು ಲಕ್ಷ ರೂಪಾಯಿ ಮೌಲ್ಯದ ಸ್ವತ್ತಿನ್ನು ಕಳ್ಳರಿಂದ ಪೊಲೀಸರು ಭರ್ಜರಿ ಕಾರ್ಯಚರಣೆ ನಡೆಸಿ ಜಪ್ತಿ ಮಾಡಲಾಗಿದೆ. ಜಪ್ತಿಯಾಗಿದ್ದ ಬಂಗಾರ, ಬೆಳ್ಳಿ, ವಾಹನಗಳು, ಮೊಬೈಲ್ ಗಳು, ನಗದು ಹಣವನ್ನು ಸ್ವತ್ತಿಗೆ ಸೇರಿಸಿ ಸಂಬಂಧಿಸಿದ ವಾರಸುದಾರರಿಗೆ ಬಳ್ಳಾರಿ ವಲಯ ಮಹಾ ನಿರೀಕ್ಷಕರು ಡಾ ಪಿ.ಎಸ್ ಹರ್ಷ ಅವರ ನೇತೃತ್ವದಲ್ಲಿ ಮರಳಿಸಲಾಯಿತು.

ಈ ಸಂದರ್ಭದಲ್ಲಿ ಎಸ್ ಪಿ.ಜಾಹ್ನವಿ ಅಡಿಷನಲ್ ಎಸ್ ಪಿ ಮಂಜುನಾಥ್. ಡಿ ವೈ ಎಸ್ ಪಿ ಮುರುಳಿಧರ್. ವಿವಿಧ ಠಾಣೆ–ಯ ಪೊಲೀಸ್ ಅಧಿಕಾರಿಗಳು ಡಿವೈಎಸ್ಪಿ, ಸಿಬ್ಬಂದಿಗಳು ಜಿಲ್ಲೆಯ ಸಾರ್ವಜನಿಕರು ಭಾಗವಹಿಸಿದ್ದರು.

# ರೋಟರಿ ಸಂಸ್ಥೆಯ ಸೇವೆ ಅನನ್ಯ




**ಗಂಗಾವತಿ:** ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವ ರೋಟರಿ ಸಂಸ್ಥೆಯ ಸೇವೆ ಅನನ್ಯವಾಗಿದೆ ಎಂದು ಹಿರಿಯ ಹೃದಯರೋಗ ತಜ್ಞ ಡಾ. ಜಿ. ಚಂದ್ರಪ್ಪ ಹೇಳಿದರು.

ನಗರದ ಎಸ್‌ಎಸ್‌ಎಲ್‌ಆರ್ ಫಂಕ್ಷನ್ ಹಾಲ್‌ನಲ್ಲಿ ನಡೆದ ರೋಟರಿ ಕ್ಲಬ್ ಕಿಷ್ಕಿಂದ, ಗಂಗಾವತಿಯ 2026–27ನೇ ಸಾಲಿನ ನೂತನ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ರೋಟರಿ ಸಂಸ್ಥೆ ದೇಶ–ವಿದೇಶಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದು, ವಿಶ್ವವನ್ನು ಪೋಲಿಯೋ ಮುಕ್ತಗೊಳಿಸುವ ಅಭಿಯಾನದಲ್ಲಿ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಮಹತ್ವದ ಆರ್ಥಿಕ ನೆರವು ನೀಡಿರುವುದು ಸಂಸ್ಥೆಯ ಸೇವಾ ಬದ್ಧತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ಮಾಜಿ ಶಾಸಕ ಪರಣ್ಣ ಮುನವಳ್ಳಿ ಮಾತನಾಡಿ, ಶಿಕ್ಷಣ, ಆರೋಗ್ಯ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ 'ಮಾನವ ಸೇವೆಯೇ ಮಾಧವ ಸೇವೆ' ಎಂಬ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ರೋಟರಿ ಸಂಸ್ಥೆಯ ಸೇವೆ ಶ್ಲಾಘನೀಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗವರ್ನರ್ ಆರ್‌ಟಿಎನ್ ಪಿಎಚ್‌ಎಫ್ ತ್ರಿವಿಕ್ರಮ ಜೋಶಿ ಅವರು ನೂತನ ಅಧ್ಯಕ್ಷ ಪ್ರಶಾಂತ್ ಪರಧಿ ಹಾಗೂ ಪ್ರಧಾನ ಕಾರ್ಯದರ್ಶಿ ಸತೀಶ್ ಬಯಾರಿ ಅವರಿಗೆ ಪ್ರಮಾಣವಚನ ಬೋಧಿಸಿದರು. ಗಂಗಾವತಿಯಲ್ಲಿ ಯುವಕರನ್ನು ಒಳಗೊಂಡ ಮತ್ತೊಂದು ರೋಟರಿ ಕ್ಲಬ್ ಆರಂಭಗೊಂಡಿರುವುದು ಸಂತಸದ ಸಂಗತಿಯಾಗಿದೆ ಎಂದು ಅವರು ತಿಳಿಸಿದರು.

ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, 14 ರಿಂದ 18 ವರ್ಷದ ಬಾಲಕಿಯರಿಗೆ ಕ್ಯಾನ್ಸರ್ ತಡೆ ಲಸಿಕೆ, ಪರಿಸರ ಸಂರಕ್ಷಣೆ, ಸ್ವಚ್ಛತಾ ಅಭಿಯಾನ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಲಾಯಿತು. ನೂತನ ಅಧ್ಯಕ್ಷ ಪ್ರಶಾಂತ್ ಪರಧಿ ಮಾತನಾಡಿ, ಕ್ಲಬ್ ಸದಸ್ಯರ ಸಹಕಾರದೊಂದಿಗೆ ಶಿಕ್ಷಣ, ಆರೋಗ್ಯ, ಪರಿಸರ ಹಾಗೂ ಸಮಾಜಮುಖಿ ಸೇವಾ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಜನಸೇವೆಗೆ ಆದ್ಯತೆ ನೀಡುವುದಾಗಿ ಭರವಸೆ ನೀಡಿದರು.

# ನಿರುದ್ಯೋಗಿ ಪದವೀಧರರಿಗೆ ಎಲೆಕ್ಟ್ರಾನಿಕ್ಸ್ ಡಿಜಿಟಲ್ ಉದ್ದಿಮೆ ಸ್ಥಾಪನೆಗೆ ಅರ್ಜಿ ಆಹ್ವಾನ

**ಕೊಪ್ಪಳ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ನಿರುದ್ಯೋಗಿ ಪದವೀಧರರಿಗೆ ಪತ್ರಿಕೋದ್ಯಮದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಡಿಜಿಟಲ್ ಉದ್ದಿಮೆ ಸ್ಥಾಪಿಸಲು ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ–ಯುವತಿಯರು ಎಲೆಕ್ಟ್ರಾನಿಕ್ಸ್ ಮತ್ತು ಡಿಜಿಟಲ್ ಮಾಧ್ಯಮದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉದ್ಯಮವನ್ನು ಸ್ಥಾಪಿಸಲು ಘಟಕ ವೆಚ್ಚದ ಶೇ. 70ರಷ್ಟು ಅಥವಾ ಗರಿಷ್ಠ ರೂ. 5 ಲಕ್ಷಗಳ ಸಹಾಯಧನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರು ಮಾಡಲಾಗುತ್ತಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ಜುಲೈ ಜುಲೈ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲಿಚ್ಛೀಸುವ ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಸಂಬಂಧಿಸಿದ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ ನಿಗದಿತ ಅವಧಿಯೊಳಗೆ ಅದೇ ಕಚೇರಿಗೆ ಸಲ್ಲಿಸಬೇಕು ಎಂದು ಕೊಪ್ಪಳ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಅಜ್ಜಪ್ಪ ಸೂಗಲದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವ್ಯಸನಮುಕ್ತ ದಿನಾಚರಣೆ ಅರ್ಥಪೂರ್ಣ ಆಚರಣೆಗೆ ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಶ್ರೀ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆಯ ಅಂಗವಾಗಿ "ವ್ಯಸನಮುಕ್ತ ದಿನಾಚರಣೆ"ಯನ್ನು ಅರ್ಥಪೂರ್ಣ ಹಾಗೂ ಯಶಸ್ವಿಯಾಗಿ ಆಚರಿಸಲು ಅಗತ್ಯ ಪೂರ್ವಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿತ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸೂಚಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಗಸ್ಟ್ 1ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಆದರ್ಶ ನಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶ್ರೀ ಶ್ರೀ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ತಹಶೀಲ್ದಾರರ ನೇತೃತ್ವದಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಿ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು ಎಂದು ಅವರು ಸೂಚಿಸಿದರು.

ಕಾರ್ಯಕ್ರಮಕ್ಕೆ ನಿಯೋಜಿಸಲಾದ ಎಲ್ಲ ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಕುಡಿಯುವ ನೀರು ಹಾಗೂ ಉಪಹಾರದ ಸಮರ್ಪಕ ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆ ಹಾಗೂ ತಾಲೂಕು ಮಟ್ಟದ ಎಲ್ಲ ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳು ಹಾಗೂ ಶಾಲಾ–ಕಾಲೇಜುಗಳಲ್ಲಿ ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಶ್ರೀ ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆಯನ್ನು ಆಚರಿಸುವಂತೆ ಸೂಚಿಸಲಾಯಿತು.

ವಿದ್ಯಾರ್ಥಿಗಳಲ್ಲಿ ವ್ಯಸನದ ದುಷ್ಪರಿಣಾಮಗಳು ಹಾಗೂ ಶ್ರೀ ಮಹಾಂತ ಶಿವಯೋಗಿಗಳ ತತ್ವಗಳು ಮತ್ತು ಆದರ್ಶಗಳ ಕುರಿತು ಅರಿವು ಮೂಡಿಸಲು 15ರಿಂದ 20 ನಿಮಿಷಗಳ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ವೇದಿಕೆ ಅಲಂಕಾರದ ಜವಾಬ್ದಾರಿಯನ್ನು ತೋಟಗಾರಿಕೆ ಇಲಾಖೆಗೆ ಹಾಗೂ ಅಗತ್ಯ ವೈದ್ಯಕೀಯ ಮತ್ತು ಇತರೆ ಸಹಕಾರವನ್ನು ಆರೋಗ್ಯ ಇಲಾಖೆಗೆ ವಹಿಸಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಮಾತನಾಡಿ, ಪ್ರೋಟೋಕಾಲ್‌ಗೆ ಅನುಗುಣವಾಗಿ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಮುದ್ರಿಸಿ ವಿತರಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಅಜೀಂ ಪಾಶಾ, ಜಿಲ್ಲಾ ಪಂಚಾಯತ್ ಸಹಾಯಕ ಯೋಜನಾಧಿಕಾರಿ ಚನ್ನಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಇಕ್ಬಾಲ್ ಮಹಾಗಾವಿ, ಆರೋಗ್ಯ ಇಲಾಖೆಯ ನಾಗರಾಜ ಬಿರಾದಾರ, ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಾಧೀಕ್ಷಕ ಮೊಹಮ್ಮದ್ ಇರ್ಫಾನ್, ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ರಾಜಶೇಖರ ಗೋನಾಯಕ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧೀಕ್ಷಕ ಆಕಾಶದೀಪ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲೂಕು ತಹಶೀಲ್ದಾರರು ಉಪಸ್ಥಿತರಿದ್ದರು.

# ಶಿಸ್ತಿನ ಸಿಪಾಯಿ, ಬದ್ಧತೆಯ ಜೀವನ ನಡೆಸುವ ಮೂಲಕ ವೈದ್ಯಕೀಯ ವೃತ್ತಿ: ಸಚಿವ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಮಾಜಿ ಶಾಸಕರಾದ ಲಿಂ.ಡಾ.ವೀರಬಸವಂತರೆಡ್ಡಿ ಮುದ್ನಾಳ ಅವರು ಕಾಯಕ ನಿಷ್ಠೆ, ಶಿಸ್ತಿನ ಸಿಪಾಯಿ,ಬದ್ಧತೆಯ ಜೀವನ ನಡೆಸುವ ಮೂಲಕ ವೈದ್ಯಕೀಯ ವೃತ್ತಿ ಮತ್ತು ರಾಜಕೀಯದಲ್ಲೂ ಇತರರಿಗೆ ಮಾದರಿಯಾಗಿದ್ದರೆಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಹೇಳಿದರು. ನಗರದಲ್ಲಿ ಸೋಮವಾರ ಆಯೋಜಿಸಿದ್ದ ಡಾ.ವೀರಬಸವಂತರೆಡ್ಡಿ ಮುದ್ನಾಳ ಅವರ 2ನೇ ಪುಣ್ಯಸ್ಮರಣೆ ಹಾಗೂ ಸಾಹಿತಿ ಡಾ.ಸುಭಾಷಚಂದ್ರ ಕೌಲಗಿ ಸಂಪಾದಕತ್ವದ ಗ್ರಂಥ ಬಿಡುಗಡೆ ಮಾಡಿ, ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಜಯಪುರದ ಬಿಎಲ್‌ಡಿ ಸಂಸ್ಥೆಯ ಮೆಡಿಕಲ್ ಕಾಲೇಜಿನಲ್ಲಿ ಸುಮಾರು ಎರಡು ದಶಕಗಳ ಕಾಲ ಉತ್ತಮ ಸೇವೆ ಸಲ್ಲಿಸುವ ಮೂಲಕ ಸಂಸ್ಥೆ ಬೆಳೆಯುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಡಾ.ಮುದ್ನಾಳ ಅವರು, ರಾಜಕೀಯಕ್ಕೆ ಬಂದು ಪಕ್ಷೇತರ ಶಾಸಕರಾಗಿ ಅನೇಕ ಜನಪರ ಕೆಲಸ ಮಾಡುವ ಮೂಲಕ ಜನಾನೂರಾಗಿಯಾಗಿದ್ದರೆಂದು ಸಚಿವರು ಬಣ್ಣಿಸಿದರು. ಸಮಾಜಕ್ಕೆ ಒಳಿತಾಗುವ ಕೆಲಸ ಮಾಡಿದ ವ್ಯಕ್ತಿ ಲಿಂಗೈಕ್ಯರಾದ ಮೇಲೂ ಜನಮಾನಸದಲ್ಲಿ ಉಳಿಯುತ್ತಾರೆಂಬುವುದಕ್ಕೇ ಇಂದು ಇಲ್ಲಿ ಸೇರಿದ ಸಾಕ್ಷಿಯಾಗಿದ್ದಾರೆಂದ ಅವರು, ನೇರ ನುಡಿ, ಹಾಸ್ಯ ಸ್ವಭಾವದ ವ್ಯಕ್ತಿಯಾಗಿದ್ದರೆಂದು ಬಣ್ಣಿಸಿದರು. ಬಿಎಲ್ ಡಿ ಸಂಸ್ಥೆಯೊಂದಿಗೆ ಉತ್ತಮ ಒಡನಾಟ ಹೊಂದಿದ್ದರಲ್ಲದೇ ಅನೇಕ ಸಲಹೆಗಳನ್ನು ನೀಡುತ್ತಿದರು. ಹೀಗಾಗಿ ಇಲ್ಲಿಗೆ ನಾನು ಮಂತ್ರಿಯಾಗಿಲ್ಲ, ಬಿಎಲ್ ಡಿ ಸಂಸ್ಥೆ ಅಧ್ಯಕ್ಷನಾಗಿ ಬಂದಿರುವೆ ಎಂದು ಹೇಳುವ ಮೂಲಕ ಡಾ.ವೀರಬಸವಂತರೆಡ್ಡಿ ಮುದ್ನಾಳ ಅವರ ವ್ಯಕ್ತಿತ್ವವಕ್ಕೆ ಮೆರಗು ನೀಡಿದರು. ಶಾಸಕರಾದ ಶರಣಬಸಪ್ಪ ದರ್ಶನಾಪುರ, ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಶರಣಗೌಡ ಕಂದಕೂರ ಮತ್ತು ಮಾಜಿ ಸಚಿವ ಅಮರೇಗೌಡ ಭಯ್ಯಾಪುರ ಮಾತನಾಡಿ, ಡಾ.ವೀರಬಸವಂತರೆಡ್ಡಿ ಅವರು ಜನಸಾಮಾನ್ಯರ ಶಾಸಕರಾಗಿದ್ದರು, ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ಬೆಲೆ ಕೊಡುತ್ತಿದ್ದರು. ವೈದ್ಯಕೀಯ ಸೇವೆಯಲ್ಲೂ ಅಪಾರ ಜ್ಞಾನ ಹೊಂದಿದ್ದರು, ಅನೇಕ ಬಡರೋಗಿಗಳ ಪಾಲಿಗೆ ಸಂಜೀವಿನಿಯಾಗಿದ್ದರು. ಎಂತಹದ್ದೇ ರೋಗಕ್ಕೂ ಸರಳ ಚಿಕಿತ್ಸೆ ನೀಡುವ ಮೂಲಕ ಗುಣ ಮಾಡುತ್ತಿದ್ದರೆಂದು ಬಣ್ಣಿಸಿದ್ದರು. ಸಾನಿಧ್ಯ ವಹಿಸಿದ್ದ ಅಬ್ಬೆತುಮಕೂರಿನ ವಿಶ್ವಾರಾಧ್ಯ ಮಠದ ಪೀಠಾಧಿಪತಿ ಡಾ.ಗಂಗಾಧರ ಸ್ವಾಮಿಗಳು ಮಾತನಾಡಿ, ಡಾ.ವೀರಬಸವಂತರೆಡ್ಡಿ ಮುದ್ನಾಳ ಅವರು ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ವೈದ್ಯಕೀಯ, ರಾಜಕೀಯ, ಸಾಮಾಜಿಕ ರಂಗದಲ್ಲೂ ಉದಾರ ಸೇವೆ ಸಲ್ಲಿಸುವ ಮೂಲಕ ಆ ಮನೆತನದ ಹೆಸರು ಮುಗಿಲೆತ್ತರಕ್ಕೆ ಮುಟ್ಟಿಸಿದ್ದಾರೆಂದು ಹೇಳಿದರು.

ಹೆಡಗಿಮದ್ರಿ ಶಾಂತಶಿವಯೋಗೀಶ್ವರ ಸಂಸ್ಥಾನ ಮಠದ ಶಾಂತಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ದಾಸಬಾಳ ಮಠ ವೀರೇಶ್ವರ ಸ್ವಾಮಿಗಳು, ಗುರುಮಠಕಲ್ ಖಾಸಾಮಠದ ಶಾಂತವೀರ ಗುರುಮುರುಘರಾಜೇಂದ್ರ ಸ್ವಾಮಿಗಳು ಮತ್ತು ದಂಡಗುಂಡದ ಬಸವೇಶ್ವರ ಸಂಸ್ಥಾನ ಹಿರೇಮಠದ ಸಂಗನಬಸವ ಶಿವಾಚಾರ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು.

ಪ್ರಮುಖರಾದ ಭೀಮನಗೌಡ ಕ್ಯಾತನಾಳ, ಡಾ.ಬಸವರಾಜ ನರಸಣಗಿ, ಸಿದ್ದಪ್ಪ ಹೊಟ್ಟಿ, ಮಾರುತಿ ಕಲಾಲ, ಚನ್ನಪ್ಪಗೌಡ ಮೊಸಂಬಿ, ವಿಶ್ವನಾಥ ಸಿರವಾರ, ಮಹಾದೇವಪ್ಪ ಆರ್.ಅಬ್ಬೆತುಮಕೂರು, ಸುರೇಶ ರಾಠೋಡ, ಡಾ. ಕ್ಷಿತಿಜ್ ನರಸಣಗಿ, ರಮೇಶ ದೊಡ್ಡಮನಿ, ಗುಂಡಪ್ಪ ಇಟಕಲ್ ಮುದ್ನಾಳ ಕುಟುಂಬದ ಸದಸ್ಯರು, ಅಭಿಮಾನಿಗಳು ಸೇರಿದಂತೆಯೇ ಇತರರಿದ್ದರು. ಗ್ರಂಥ ಸಂಪಾದಕ ಡಾ.ಕೌಲಗಿ ಅವರನ್ನು ಸನ್ಮಾನಿಸಲಾಯಿತು. ಸಾಹಿತಿ ಡಾ.ಸಿದ್ದರಾಜರೆಡ್ಡಿ ನಿರೂಪಿಸಿದರು. ಸ್ವಾಗತ ವೀರಾರಡ್ಡಿ ಮುದ್ನಾಳ ಸ್ವಾಗತಿಸಿದರು.

# ಐದು ದಿನಗಳಿಂದ ಕುಡಿಯುವ ನೀರಿಲ್ಲ: ಜನರ ಗೋಳು ಕೇಳುವವರಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಬೀದರ್





ಕಳೆದ ಐದು ದಿನಗಳಿಂದ ನಗರದ ಚಿಕ್ಕಪೇಟ ಓಣಿಯಲ್ಲಿ ಕುಡಿಯುವ ನೀರು ಬರುತ್ತಿಲ್ಲ. ಈ ಓಣಿಯ ಜನರ ಗೋಳು ಕೇಳಲು ಅಧಿಕಾರಿಗಳು ತಯ್ಯಾರಿಲ್ಲ. ಸಮಸ್ಯೆ ಹೇಳಿಕೊಳ್ಳಲು ಹೋದರೆ ಒಬ್ಬರ ಮೇಲೊಬ್ಬರು ಹಾಕಿಕೊಂಡು ನಿರ್ಲಕ್ಷ ತೋರುತಿದ್ದಾರೆ ಎಂದು ಓಣಿಯ ಮುಖಂಡರು ಹಾಗೂ ಪತ್ರಕರ್ತರಾದ ಎಂ.ಪಿ.ಮುದಾಳೆ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಮಹಾನಗರ ಪಾಲಿಕೆ ಜೆಇ ಸುನೀಲ ಅವರಿಗೆ ಕರೆ ಮಾಡಿದಾಗ ಕಳೆದ ನಾಲ್ಕು ದಿವಸಗಳಿಂದ ರಿಪೇರಿಗಾಗಿ ಕಳುಹಿಸುವೆ ಎಂದು ಸುಳ್ಳು ಹೇಳಿಕೊಂಡು ಕಾಲ ಕಳೆಯುತಿದ್ದಾರೆ. ಗ್ರಾಮಸ್ಥರು ಸಮಸ್ಯೆ ಬಗ್ಗೆ ಹೇಳಿಕೊಳ್ಳಲು ಕರೆ ಮಾಡಿದರೆ ಕಾಲ್ ರಿಕಾರ್ಡಿಂಗ್ ಮಾಡಿಕೊಂಡು ಜನರಿಗೆ ಹೆದರಿಸುವ ಕೆಲಸ ಮಾಡುತಿದ್ದಾರೆ. ಆದ್ದರಿಂದ ಕೂಡಲೇ ಅವರಿಗೆ ವರ್ಗಾವಣೆ ಮಾಡಬೇಕೆಂದು ಮುದಾಳೆ ಆಗ್ರಹಿಸಿದ್ದಾರೆ. ಕಳಪೆ ಕಾಮಗಾರಿಯಿಂದ ಮತ್ತು ವಿದ್ಯುತ್ ತಂತಿ ಸುಟ್ಟ ಕಾರಣ ಮೋಟಾರು ಬಂದ್ ಆಗಿ ನೀರಿನ ಸಮಸ್ಯೆ ಉಂಟಾಗಿದೆ. ಅದನ್ನು ರಿಪೇರಿ ಮಾಡಿಸುವ ಗೋಜಿಗೂ ಅಧಿಕಾರಿಗಳು ಹೋಗಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಿ ಎಂದು ಹೇಳುತ್ತಾರೆ. ಆದರೆ ಅಧಿಕಾರಿಗಳು ನಮ್ಮ ಮನವಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡದೆ ಲಂಗು ಲಗಾಮಿಲ್ಲದೆ ನಿರ್ಲಕ್ಷ ತೋರುತ್ತಿರುವುದು ದುರಂತ. ಇಂತಹ ಮಳೆಗಾಲದಲ್ಲೂ ಚಿಕ್ಕಪೇಟ್ ಓಣಿಯಲ್ಲಿ ನೀರಿನ ಸಮಸ್ಯೆಯಿದೆ ಎಂದು ಹೇಳಿಕೊಳ್ಳಲು ನಮಗೆ ನಾಚಿಕೆಯಾಗುತ್ತಿದೆ ಎಂದು ಮುದಾಳೆ ದೂರಿದ್ದಾರೆ.

ಚಿಕ್ಕಪೇಟೆ ಗ್ರಾಮದಲ್ಲಿ ವಿದ್ಯುತ್ ದೀಪಗಳಿಲ್ಲ. ಓಣಿಯೆಲ್ಲ ಕತ್ತಲೆಯಿಂದ ತುಂಬಿದೆ. ಓಡಾಡಲು ಸರಿಯಾದ ರಸ್ತೆಗಳಿಲ್ಲ. ಜನರು ಕತ್ತಲೆಯಲ್ಲಿ ಬಿದ್ದು ಕೈಕಾಲುಗಳಿಗೆ ಗಾಯ ಮಾಡಿಕೊಳ್ಳುತ್ತಿದ್ದಾರೆ. ಮಳೆಗಾಲ ಇರುವ ಕಾರಣ ಕಾಲುವೆಗಳು ತುಂಬಿ ಹೊಲಸು ನೀರು ರಸ್ತೆ ಮೇಲೆ ನಿಲ್ಲುತ್ತಿವೆ. ಗಬ್ಬು ನಾರುತ್ತಿರುವ ಕಾರಣ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ದುಸ್ಥಿತಿ ಬಂದಿದೆ. ಚಿಕ್ಕಪೇಟ್ ರಿಂಗ್ ರಸ್ತೆಯಲ್ಲಿ ಡಿವೈಡರ್‌ಗಳಿಲ್ಲ. ಕಾರಣ ಅಪಘಾತಗಳು ಸಂಭವಿಸುತ್ತಿವೆ. ಜನರ ಜೀವಕ್ಕೆ ಹೊಣೆಯಾರು? ಎಂದು ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಎಂ.ಪಿ.ಮುದಾಳೆ ಪ್ರಶ್ನೆ ಮಾಡಿದ್ದಾರೆ.

# ಸಶಕ್ತ ಭಾರತ, ಸದೃಢ ಭಾರತ – ಕನಸು ನನಸಾಗಲಿ



**ಸದೃಢ ಭಾರತ**
• ಓಂಕಾರ ಪಾಟೀಲ
ಕಾರ್ಯದರ್ಶಿಗಳು, ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್, ಬೀದರ್



ಕೌಶಲ್ಯವೇ ಇಂದಿನ ಕಾಯಕ, ಯುವಕರೇ ನಾಳಿನ ಭವಿಷ್ಯ 12ನೇ ಶತಮಾನದಲ್ಲಿ ಕಲ್ಯಾಣದ ಅನುಭವ ಮಂಟಪದ ಶರಣರು "ಕಾಯಕವೇ ಕೈಲಾಸ" ಎಂದು ಸಾರಿದರು. ಪ್ರತಿಯೊಬ್ಬನ ದುಡಿಮೆಗೂ ಗೌರವವಿದೆ ಎಂದು ತಿಳಿಸಿದರು. ಅದೇ ರೀತಿ 21ನೇ ಶತಮಾನದ ಸಂದರ್ಭದಲ್ಲಿ ನಾವು "ಕಾಯಕದ ಜೊತೆಗೆ ಕೌಶಲ್ಯದ ಮಹತ್ವ"ವನ್ನು ಅರಿಯಬೇಕಾಗಿದೆ. ಕೌಶಲ್ಯಯುಕ್ತ ಯುವಪಡೆಯನ್ನು ಸದೃಢಗೊಳಿಸಿದಾಗ ಮಾತ್ರ ಸಶಕ್ತ ಭಾರತದ ಕನಸು ನನಸಾಗುತ್ತದೆ.

ಇಂದು ಭಾರತ ಜಗತ್ತಿನ ಅತಿದೊಡ್ಡ ಯುವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 15 ರಿಂದ 29 ವರ್ಷದೊಳಗಿನ 35 ಕೋಟಿಗಿಂತ ಹೆಚ್ಚು ಯುವಕರಿದ್ದೇವೆ. ಇದು ನಮ್ಮ ಜನಸಂಖ್ಯಾ ಲಾಭ.

ಆದರೆ ಈ ಲಾಭದ ನಡುವೆ ಒಂದು ದೊಡ್ಡ ಸವಾಲು ಇದೆ. ನಮ್ಮ ಯುವಕರಲ್ಲಿ ಪ್ರತಿಭೆ ಇದೆ, ಕನಸಿದೆ, ಕೌಶಲ್ಯವಿದೆ. ಆದರೆ ಉದ್ಯೋಗ ಅವಕಾಶದಿಂದ ಅವರು ವಂಚಿತರಾಗುತ್ತಿದ್ದಾರೆ. ವಿಶೇಷವಾಗಿ ಗ್ರಾಮೀಣ ಭಾಗದ ಬಡ ಕುಟುಂಬಗಳ ಕೌಶಲ್ಯಯುಕ್ತ ಪ್ರತಿಭಾವಂತ ಯುವಕರು ಇಂದಿಗೂ ಪರದಾಡುತ್ತಿದ್ದಾರೆ.

ಬೀದರ ಜಿಲ್ಲೆಯ ಒಂದು ಸಣ್ಣ ಹಳ್ಳಿ. ಬಡ ಕುಟುಂಬದ ಪ್ರತಿಭಾವಂತ ಯುವಕ ಮಹೇಶ. ತಂದೆ ಕೂಲಿ ಕಾರ್ಮಿಕ. ಆದರೂ ಮಗನ ಭವಿಷ್ಯ ರೂಪಿಸುವ ಸಲುವಾಗಿ ಕಷ್ಟಪಟ್ಟು ಡಿಪ್ಲೋಮಾ ಇಲೆಕ್ಟ್ರಾನಿಕ್ ಪದವಿಯವರೆಗೆ ಓದಿಸಿದರು. ಮಹೇಶ 10ನೇ ತರಗತಿಯಲ್ಲಿರುವಾಗಲೇ ಮೊಬೈಲ್, ಟಿವಿ ರಿಪೇರಿ ಮಾಡುವ ಕಲೆ ಕಲಿತಿದ್ದ. ಹಾಗಾಗಿ ಇಲೆಕ್ಟ್ರಾನಿಕ್ ವಿಷಯದಲ್ಲಿ ಅಗ್ರಶ್ರೇಣಿಯಲ್ಲಿ ಉತ್ತೀರ್ಣನಾದ. ಆದರೆ ಮುಂದಿನ ಸ್ನಾತಕೋತ್ತರ ಪದವಿಗೆ ಹಣದ ಕೊರತೆಯಿಂದ ಓದನ್ನು ಮೊಟಕುಗೊಳಿಸಿ, ಎಲೆಕ್ಟ್ರಾನಿಕ್ಸ್ ಅಂಗಡಿಯಲ್ಲಿ ಮಾಸಿಕ 8000 ರೂ ಸಂಬಳಕ್ಕೆ ಕೆಲಸಕ್ಕೆ ಸೇರಿಕೊಂಡ. "ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ" ಎಂಬಂತೆ ಅವನಿಗೆ ಸಿಗುವ ಸಂಬಳ ಅವನ ಖರ್ಚಿಗೂ ಸಾಲಲಿಲ್ಲ. ಇದು ಕೇವಲ ಒಬ್ಬ ಮಹೇಶನ ಕಥೆಯಲ್ಲ. ಇಂತಹ ಲಕ್ಷಾಂತರ ಮಹೇಶರು ಇಂದು ರಾಜ್ಯದಲ್ಲಿ, ದೇಶದಲ್ಲಿ ನಿರುದ್ಯೋಗಿಯಾಗಿ ಕುಳಿತಿದ್ದಾರೆ. ಇನ್ನು ಕೆಲವರು ಸಿಕ್ಕ ಯಾವುದೇ ಕೆಲಸಕ್ಕೆ "ಸರಿ" ಎಂದು ಜೀವನ ನಡೆಸುತ್ತಿದ್ದಾರೆ. ಅವರ ಕೌಶಲ್ಯಕ್ಕೆ ಸರಿಯಾದ ಬೆಲೆ ಸಿಗುತ್ತಿಲ್ಲ. ನಿರುದ್ಯೋಗ ಸಮಸ್ಯೆ ಕೇವಲ ಕರ್ನಾಟಕಕ್ಕೆ ಅಥವಾ ಭಾರತಕ್ಕೆ ಮಾತ್ರ ಸೀಮಿತವಲ್ಲ. ಇದು ವಿಶ್ವದ ಎಲ್ಲಾ ದೇಶ, ಎಲ್ಲಾ ಸಮಾಜಕ್ಕೂ ಅನ್ವಯಿಸುವ ಜಾಗತಿಕ ಸವಾಲು.

**ಪರಿಹಾರದ ದಾರಿ:** ಪ್ರತಿಭಾವಂತ ಯುವಕರ ನಿರುದ್ಯೋಗ ಸಮಸ್ಯೆ ನಿವಾರಣೆಯಲ್ಲಿ ರಾಜಕೀಯ ಇಚ್ಛಾಶಕ್ತಿ ಮತ್ತು ಆಡಳಿತ ಸರ್ಕಾರಗಳ ಜವಾಬ್ದಾರಿ ಅತಿಮುಖ್ಯ. ಈ ನಿಟ್ಟಿನಲ್ಲಿ ನನ್ನ ಕೆಲವು ಅನಿಸಿಕೆಗಳು:

- ಪ್ರತಿಭಾವಂತ ಯುವಕರಿಗೆ ಉಚಿತ ತರಬೇತಿ ಮತ್ತು 100% ಪ್ಲೇಸ್‌ಮೆಂಟ್ ಗ್ಯಾರಂಟಿ ನೀಡುವ "ಕೌಶಲ್ಯ ಕೇಂದ್ರ"ಗಳನ್ನು ಸ್ಥಾಪಿಸಬೇಕು. ಇದು ಹಳ್ಳಿಯ ಬಾಗಿಲಿಗೆ ಅವಕಾಶ ತರುತ್ತದೆ.
- ಸರ್ಕಾರಗಳು ಜಾತಿ ಆಧಾರದಲ್ಲಿ ಅಲ್ಲ, ಕೌಶಲ್ಯ ಆಧಾರದಲ್ಲಿ ಉದ್ಯೋಗ ನೀಡುವ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
- ಯುವಕ–ಯುವತಿಯರಿಗೆ ಭತ್ಯೆ ನೀಡುವುದನ್ನು ನಿಲ್ಲಿಸಿ, ಅವರಿಗೆ ಸ್ವಂತ ಉದ್ಯೋಗ ಪ್ರಾರಂಭಿಸಲು ಆದ್ಯತೆಯ ಮೇರೆಗೆ 5 ರಿಂದ 10 ಲಕ್ಷದವರೆಗೆ ಬಡ್ಡಿ ರಹಿತ ಸಾಲ ನೀಡಬೇಕು. ಆಗ ಅವರು ಸ್ವಾಭಿಮಾನದಿಂದ ಬದುಕಬಹುದು.
- ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಟಾಟಾ, ಇನ್ಫೋಸಿಸ್ ನಂತಹ ದೊಡ್ಡ ಕಂಪನಿಗಳನ್ನು ಕರೆಸಿ ಬೃಹತ್ ಉದ್ಯೋಗ ಮೇಳ ಏರ್ಪಡಿಸಬೇಕು. ಪ್ರತಿಭಾವಂತ ಯುವಕ–ಯುವತಿಯರಿಗೆ ನೇರವಾಗಿ ಉದ್ಯೋಗ ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರ ಮತ್ತು ಉದ್ಯೋಗದಾತರ ಜವಾಬ್ದಾರಿಯಾಗಿದೆ.

ಹಾಗಾಗಿ ಕೌಶಲ್ಯಕ್ಕೆ ಮತ್ತು ಪ್ರತಿಭೆಗೆ ಅವಕಾಶಗಳು ಮುಕ್ತವಾಗಿದ್ದಲ್ಲಿ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಸಾಧ್ಯ ಅನ್ನುವದನ್ನು ನಮ್ಮನ್ನು ಆಳುವ ಸರ್ಕಾರಗಳು ಯೋಚಿಸಬೇಕಾಗಿದೆ. "ಸಶಕ್ತ ಭಾರತ, ಸದೃಢ ಭಾರತದ ಕನಸು ನನಸು ಮಾಡಬೇಕಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222
PRGI NO. 120927
(RNINO:KARKAN/2011/48371)